ಗುರುವಾರ, ಅಕ್ಟೋಬರ್ 9, 2025 | ₹ 7.00
prajavani.net prajavani
www.prajavani.net

ಹಣತೆ ತಯಾರಿ...
ದೀಪಾವಳಿ ಹಬ್ಬ ಸಮೀಪಿಸುತ್ತಿದ್ದು, ಬೆಂಗಳೂರಿನಲ್ಲಿ ಮಣ್ಣಿನ ಹಣತೆ ತಯಾರಿಯಲ್ಲಿ ನಿರತರಾಗಿದ್ದ ಕುಶಲಕರ್ಮಿ



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಬೆತ್ ಶತಕ ಸಂಭ್ರಮ
ಆಸ್ಟ್ರೇಲಿಯಾ ತಂಡದ ಬೆತ್ ಮೂನಿ ಅವರು ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಬುಧವಾರ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಶತಕ ಗಳಿಸಿ ಸಂಭ್ರಮಿಸಿದರು

ಜಿಲ್ಲಾಮಟ್ಟದಲ್ಲಿ ಒಗ್ಗಟ್ಟು ಪ್ರದರ್ಶನ

ಕಾಂಗ್ರೆಸ್ ಹಿಂದುಳಿದ ವರ್ಗಗಳ ಮುಖಂಡರ ಸಭೆಯಲ್ಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಮಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿ ಜಾರಿಯಾಗದಿರುವುದರಿಂದ ಎಚ್ಚೆತ್ತುಕೊಂಡಿರುವ ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗಗಳ ಮುಖಂಡರು, ಪ್ರಸ್ತುತ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವಿಚಾರದಲ್ಲಿ ಅಂತಹ ತಪ್ಪು ಮರುಕಳಿಸದಂತೆ ತಡೆಯಲು ಈಗಲೇ ಸಿದ್ಧತೆ ಆರಂಭಿಸಿದ್ದಾರೆ.

ಈಗ ನಡೆಯುತ್ತಿರುವ ಸಮೀಕ್ಷೆಯ ಅಂಕಿ ಅಂಶಗಳ ಆಧಾರದಲ್ಲೇ ಮೀಸಲಾತಿ ಹಾಗೂ ಸರ್ಕಾರದ ಇನ್ನಿತರ ಸವಲತ್ತುಗಳು ಹಂಚಿಕೆ ಆಗಬೇಕು ಎಂಬುದು ಮುಖಂಡರ ಬೇಡಿಕೆ. ಇದಕ್ಕಾಗಿ ಹಿಂದುಳಿದ ವರ್ಗಗಳಲ್ಲಿಯ ವಿವಿಧ ಜಾತಿಗಳಲ್ಲಿ ಒಗ್ಗಟ್ಟು ಮೂಡಿಸಿ ಒತ್ತಡ ಹೇರಲು ಅವರು ಕಾರ್ಯತಂತ್ರ ರೂಪಿಸುತ್ತಿದ್ದಾರೆ.

ಇಲ್ಲಿ ಬುಧವಾರ ನಡೆದ ಕಾಂಗ್ರೆಸ್ ಹಿಂದುಳಿದ ವರ್ಗಗಳ ಮುಖಂಡರ ಮೈಸೂರು ವಿಭಾಗ ಮಟ್ಟದ ಸಭೆಯಲ್ಲಿ ಈ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಯಿತು. ಹಿಂದುಳಿದ ವರ್ಗಗಳ ಎಲ್ಲ ಜಾತಿಯವರೂ ಸೇರಿ ಜಿಲ್ಲಾ ಮಟ್ಟದಲ್ಲಿ ಒಗ್ಗಟ್ಟು ಪ್ರದರ್ಶಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಯಿತು.

'ಆಯಾ ಪ್ರದೇಶದಲ್ಲಿ ಪ್ರಬಲವಾಗಿರುವ ಹಿಂದುಳಿದ ಜಾತಿಯ ಮುಂದಾಳತ್ವದಲ್ಲಿ ಇತರ ಜಾತಿಗಳ ಸಂಘಟನೆಯನ್ನು ಜಿಲ್ಲಾ ಮಟ್ಟದಲ್ಲಿ ಸಂಘಟಿಸುವ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ. ಬೆಂಗಳೂರು, ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಲ್ಲಿ ಈ ಕುರಿತು ಸಭೆಗಳು ಮುಗಿದ ಬಳಿಕ ರಾಜ್ಯ ಮಟ್ಟದಲ್ಲಿ ಈ ಬಗ್ಗೆ ಸ್ಪಷ್ಟ ನಿರ್ಧಾರ ಪ್ರಕಟಿಸಬೇಕು ಎಂದು ಹಿಂದುಳಿದ ಜಾತಿಗಳ ಮುಖಂಡರು ಒತ್ತಾಯಿಸಿದ್ದಾರೆ' ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು, 2018ರಲ್ಲಿ ಜಾರಿಗೆ ಸಿದ್ದರಾಮಯ್ಯ ಅವರು ಒಲವು ತೋರಿದ್ದರೂ ಹೈಕಮಾಂಡ್‌ನಿಂದ ಸಮ್ಮತಿ ಸಿಗಲಿಲ್ಲ. ಆ ಬಳಿಕ ಬಂದ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ, ಬಿಜೆಪಿ ನೇತೃತ್ವದ ಸರ್ಕಾರಗಳು ವರದಿಯನ್ನು ಮೂಲೆಗುಂಪು ಮಾಡಿದ್ದವು. ನಂತರ ಜಯಪ್ರಕಾಶ್ ಹೆಗ್ಡೆ ಅಧ್ಯಕ್ಷತೆಯ ಆಯೋಗವು ಆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರೂ, ಅದು ಜಾರಿ ಆಗದಂತೆ ತಡೆಯಲಾಯಿತು. ಆದರೆ, ಈ ಸಲದ ಸಮೀಕ್ಷೆಯ ವರದಿ ಹಾಗೆ ಆಗಲು ಅವಕಾಶ ನೀಡುವುದಿಲ್ಲ. ಸಂವಿಧಾನ ಬದ್ಧ ಹಕ್ಕು ಪಡೆಯಲು ಏನು ಮಾಡಬೇಕೋ ಅದನ್ನು ಮಾಡುತ್ತೇವೆ' ಎಂದು ಅವರು ಸ್ಪಷ್ಟಪಡಿಸಿದರು.

'ಪ್ರತಿ ಜಿಲ್ಲೆಯಲ್ಲೂ ಹಿಂದುಳಿದ ವರ್ಗಗಳ ಎಲ್ಲ ಜಾತಿಗಳನ್ನು ಒಳಗೊಂಡ ಸಂಘಟನೆ ಕಟ್ಟುತ್ತೇವೆ. ಉದಾಹರಣೆ ಕರಾವಳಿ ಭಾಗಗಳಲ್ಲಿ ಬಿಲ್ಲವ ಅಥವಾ ಈಡಿಗ ಸಮುದಾಯ ಬಲಿಷ್ಠವಾಗಿದೆ. ಇಲ್ಲಿ ಬಿಲ್ಲವ ಸಮುದಾಯ ನೇತೃತ್ವದಲ್ಲೇ ಇತರ ಹಿಂದುಳಿದ ವರ್ಗಗಳನ್ನು ಒಗ್ಗೂಡಿಸುತ್ತೇವೆ. ಬೇರೆ ಜಿಲ್ಲೆಗಳಲ್ಲೂ ಅದೇ ರೀತಿ ಸಂಘಟನೆ ರೂಪಿಸುತ್ತೇವೆ. ಹಿಂದುಳಿದ ವರ್ಗದ ಪ್ರಬಲ ಸಮುದಾಯಗಳು ಸಣ್ಣ ಪುಟ್ಟ ಸಮುದಾಯಗಳಿಗೂ ಅವಕಾಶ ಮಾಡಿಕೊಡಬೇಕು ಎಂಬ ನೆಲೆಯಲ್ಲೂ ಸಮಾಲೋಚನೆ ನಡೆದಿದೆ' ಎಂದು ಇನ್ನೊಬ್ಬ ಮುಖಂಡ ತಿಳಿಸಿದರು.

ಹಿಂದುಳಿದ ವರ್ಗಗಳ ಮೈಸೂರು ವಿಭಾಗದ ಸಮಿತಿಯಲ್ಲಿರುವ ಸಚಿವ ಮಧು ಬಂಗಾರಪ್ಪ, ವಿ.ಆರ್. ಸುದರ್ಶನ್, ರವಿಕುಮಾರ್, ಶಾಸಕರಾದ ಭೀಮಣ್ಣ ನಾಯ್ಕ, ಪ್ರದೀಪ್ ಈಶ್ವರ್, ಬೇಳೂರು ಗೋಪಾಲಕೃಷ್ಣ, ಮುಖಂಡರಾದ ವಿನಯ ಕುಮಾರ್ ಸೊರಕೆ, ಪಿ.ವಿ.ಮೋಹನ್, ಅಶೋಕ್ ಕುಮಾರ್, ಪದ್ಮರಾಜ್ ಆರ್.ಪೂಜಾರಿ, ವಿಶ್ವಾಸದಾಸ್ ಗಾಣಿಗ, ಮಂಜುನಾಥ ಪೂಜಾರಿ, ರಕ್ಷಿತ್ ಶಿವರಾಂ, ಮಮತಾ ಗಟ್ಟಿ, ಕಾಂಗ್ರೆಸ್‌ನ ಒಬಿಸಿ ಜಿಲ್ಲಾ ಘಟಕಗಳ ಅಧ್ಯಕ್ಷರು, ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರು ಸಭೆಯಲ್ಲಿ ಭಾಗವಹಿಸಿದ್ದರು.

> **ಹಿಂದುಳಿದ ವರ್ಗಗಳಲ್ಲಿ ಜಾಗೃತಿ ಮೂಡಿಸಬೇಕಿದೆ. ಸಂವಿಧಾನಬದ್ಧ ಹಕ್ಕುಗಳಿಗಾಗಿ ಹೋರಾಟ ರೂಪಿಸಬೇಕಿದೆ**
> **ವಿ.ಆರ್.ಸುದರ್ಶನ್,** ಕಾಂಗ್ರೆಸ್ ಹಿಂದುಳಿದ ವರ್ಗಗಳ ಮುಖಂಡರ ಮೈಸೂರು ವಿಭಾಗದ ಸಮಿತಿ ಸದಸ್ಯ

> **ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಜಾರಿಯಿಂದ ಮಾತ್ರ ಸಮಾಜದಲ್ಲಿ ಸಮಾನತೆ ಸಾಧಿಸಲು, ಅಂಬೇಡ್ಕರ್ ಕನಸು ನನಸು ಮಾಡಲು ಸಾಧ್ಯ**
> **ಮಧು ಬಂಗಾರಪ್ಪ**
> ಶಾಲಾ ಶಿಕ್ಷಣ ಸಚಿವ



ಮಂಗಳೂರಿನಲ್ಲಿ ಬುಧವಾರ ಸಭೆ ನಡೆಸಿದ ಕಾಂಗ್ರೆಸ್‌ನ ಹಿಂದುಳಿದ ವರ್ಗಗಳ ಮುಖಂಡರು ಬ್ರಹ್ಮಶ್ರೀ ನಾರಾಯಣಗುರುಗಳಿಗೆ ಗೌರವ ಸಲ್ಲಿಸಿದರು

ಮುಖ್ಯಾಂಶಗಳು

- ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ಅಂಕಿ–ಅಂಶ ಆಧರಿಸಿಯೇ ಮೀಸಲಾತಿ, ಸವಲತ್ತು ನೀಡಬೇಕು
- ಹಿಂದುಳಿದ ಜಾತಿಗಳ ಸಂಘಟನೆಯನ್ನು ಜಿಲ್ಲಾ ಮಟ್ಟದಲ್ಲಿ ಬಲಪಡಿಸಲು ನಿರ್ಧಾರ

ಚಟಿಕೆ ಸುದ್ದಿ

'ರಾಜ್ಯೋತ್ಸವ ಪ್ರಶಸ್ತಿಗೆ ಅರ್ಜಿ ಆಹ್ವಾನವಿಲ್ಲ'

ಬೆಂಗಳೂರು: 'ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಪ್ರಕ್ರಿಯೆ ಕೈ ಬಿಡಲಾಗಿದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ.



ಶಿವರಾಜ ತಂಗಡಗಿ

'ಪ್ರಶಸ್ತಿಗೆ ಅರ್ಹ ವ್ಯಕ್ತಿಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಚಿಸಲಾಗುವ ಸಲಹಾ ಸಮಿತಿ ಹಾಗೂ ಉನ್ನತ ಮಟ್ಟದ ಆಯ್ಕೆ ಸಮಿತಿಗಳು ಅಂತಿಮಗೊಳಿಸಲಿವೆ. ಈ ವರ್ಷ 70 ಅರ್ಹ ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುವುದು' ಎಂದು ತಿಳಿಸಿದ್ದಾರೆ.

'ಈಗಾಗಲೇ ಇಲಾಖೆಗೆ ಸಲ್ಲಿಕೆಯಾಗಿರುವ ಸ್ವಯಂ ಅರ್ಜಿಗಳನ್ನು ಸಹ ಪ್ರಶಸ್ತಿ ಸಲಹಾ ಸಮಿತಿ ಮುಂದೆ ಮಂಡಿಸಲಾಗುವುದು' ಎಂದು ಅವರು ಮಾಹಿತಿ ನೀಡಿದ್ದಾರೆ.

ಕಲ್ಯಾಣ ಪರ್ವ ನಾಳೆಯಿಂದ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ಬೀದರ್ ಜಿಲ್ಲೆ ಬಸವಕಲ್ಯಾಣದಲ್ಲಿ ಬಸವಧರ್ಮ ಪೀಠದಿಂದ ಅ.10 ರಿಂದ 12ರವರೆಗೆ 24ನೇ ಕಲ್ಯಾಣ ಪರ್ವ ಕಾರ್ಯಕ್ರಮ ನಡೆಯಲಿದೆ. ಸಚಿವ ಶರಣಪ್ರಕಾಶ ಪಾಟೀಲ ಅವರು ಕಾರ್ಯಕ್ರಮ ಉದ್ಘಾಟಿಸುವರು' ಎಂದು ಕೂಡಲಸಂಗಮ ಬಸವ ಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಹೇಳಿದರು.



ಮಾತೆ ಗಂಗಾದೇವಿ

'ಅ.11ರಂದು ಶೂನ್ಯ ಪೀಠಾರೋಹಣ ಸಮಾರಂಭ ನಡೆಯಲಿದೆ. 12ರಂದು ಬಸವಣ್ಣನವರ ಭಾವಚಿತ್ರ, ವಚನ ಸಾಹಿತ್ಯ ಮೆರವಣಿಗೆ ಮತ್ತು ಸಮಾರೋಪ ನಡೆಯಲಿದೆ. ಒಂದು ಲಕ್ಷಕ್ಕೂ ಹೆಚ್ಚು ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ' ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಪುರಸಭೆ ನೌಕರ ನಾಪತ್ತೆ: ಪ್ರಕರಣ ದಾಖಲು

ಭಟ್ಕಳ (ಉತ್ತರ ಕನ್ನಡ): ಕುಮಟಾ ಪುರಸಭೆಯಲ್ಲಿ ಕಂದಾಯ ಅಧಿಕಾರಿ ಆಗಿದ್ದ ಪಟ್ಟಣದ ಕೋಟೇಶ್ವರ ರಸ್ತೆಯ ಹರಿಜನ ಕಾಲೊನಿಯ ವೆಂಕಟೇಶ ಆರ್. ಹರಿಜನ (25) ನಾಪತ್ತೆಯಾದ ಬಗ್ಗೆ ಶಹರ ಪೊಲೀಸ್ ಠಾಣೆಯಲ್ಲಿ ಬುಧವಾರ ಪ್ರಕರಣ ದಾಖಲಾಗಿದೆ.



ವೆಂಕಟೇಶ ಹರಿಜನ

'ಪುರಸಭೆಯ ಮುಖ್ಯಾಧಿಕಾರಿ ನಿರಂತರ ಮಾನಸಿಕ ಒತ್ತಡ ಹೇರಿ ಕಿರುಕುಳ ನೀಡುತ್ತಿದ್ದರು. ಕೆಲಸ ಮಾಡಲಾಗದೆ ನೊಂದಿದ್ದೇನೆ. ಮನೆ ಬಿಟ್ಟು ದೂರ ಹೋಗುತ್ತಿದ್ದೇನೆಂದು ಪತ್ರ ಬರೆದಿಟ್ಟು ಪುತ್ರ ಮಂಗಳವಾರ ಮಧ್ಯರಾತ್ರಿ ಮನೆಯಿಂದ ನಾಪತ್ತೆಯಾಗಿದ್ದಾನೆ' ಎಂದು ನೌಕರನ ತಾಯಿ ಆಶಾ ಹರಿಜನ ದೂರು ನೀಡಿದ್ದಾರೆ. 'ವೆಂಕಟೇಶ್ ಬರೆದ ಪತ್ರ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪಿ.ಜಿ ನೀಟ್ ಅವಧಿ ವಿಸ್ತರಣೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಪದವಿ, ಡಿಪ್ಲೊಮಾ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಇದೇ 15ರವರೆಗೆ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಅ.15ರಂದು ಬೆಳಿಗ್ಗೆ 11 ಗಂಟೆ ಒಳಗೆ ಅರ್ಜಿ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

'ಹಣಕಾಸಿನ ಮಾಹಿತಿ ಇಲ್ಲ'

ಬೀದರ್: 'ನಾನ್ ಪ್ರ್ಯಾಕ್ಟಿಸಿಂಗ್ ಅಲೋವೆನ್ಸ್‌'ಗೆ (ಎನ್‌ಪಿಎ) ಸಂಬಂಧಿಸಿದಂತೆ ಹಣಕಾಸು ಅವ್ಯವಹಾರ ನಡೆದಿರುವ ಕುರಿತು ಯಾವುದೇ ಮಾಹಿತಿ ಇಲ್ಲ' ಎಂದು ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವ ಪಿ.ಟಿ. ರಮೇಶ ತಿಳಿಸಿದ್ದಾರೆ.

'ಇದಕ್ಕೆ ಸಂಬಂಧಿಸಿದಂತೆ ಸೂಕ್ತ ದಾಖಲೆಗಳೊಂದಿಗೆ ದೂರು ನೀಡಿದಲ್ಲಿ ಸತ್ಯಾಸತ್ಯತೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು. ಎನ್‌ಪಿಎ ಭತ್ಯೆ ಸರ್ಕಾರದ ಆದೇಶ, ಹಣಕಾಸು ಇಲಾಖೆಯ ಅನುಮೋದನೆ, ಆಡಳಿತ ಮಂಡಳಿಯ ಅನುಮೋದನೆ, ವಿಶ್ವವಿದ್ಯಾಲಯದ ಸ್ಪಷ್ಟೀಕರಣ, ಐಸಿಎಆರ್/ಕೇಂದ್ರ ಮಾರ್ಗಸೂಚಿಗಳ ಆಧಾರದ ಮೇರೆಗೆ ಜಾರಿಗೆ ಬರುತ್ತಿದೆ' ಎಂದು ಬುಧವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಬಿಜೆಪಿ ಮುಖಂಡ ವೆಂಕಟೇಶ್ ಹತ್ಯೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಬಿಜೆಪಿ ನಗರ ಘಟಕದ ಯುವ ಮೋರ್ಚಾ ಅಧ್ಯಕ್ಷ ವೆಂಕಟೇಶ್ ಕುರುಬರ (33) ಅವರನ್ನು ಮಂಗಳವಾರ ಮಧ್ಯರಾತ್ರಿ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ.

ಸ್ನೇಹಿತರೆಲ್ಲರೂ ಸೇರಿ ರಾತ್ರಿ ಹೊರಗಡೆ ಊಟಕ್ಕೆ ಹೋಗಿ ವಾಪಸ್ ಬೈಕ್ ಮೇಲೆ ಮನೆ ಕಡೆ ಬರುವಾಗ ಕಾರೊಂದು ವೆಂಕಟೇಶ್ ಇದ್ದ ಬೈಕ್‌ಗೆ ಡಿಕ್ಕಿ ಹೊಡೆದಿದ್ದರಿಂದ ಅವರು ಕೆಳಕ್ಕೆ ಬಿದ್ದಿದ್ದಾರೆ. ಆಗ ಕಾರಿನಲ್ಲಿದ್ದ ಐದಾರು ಜನ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದಾರೆ ಎಂದು ವೆಂಕಟೇಶ್ ಅವರ ತಂದೆ ನೀಡಿದ ದೂರಿನ ಅನ್ವಯ ಇಲ್ಲಿನ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಘಟನೆ ನಡೆದ ಕೆಲವು ತಾಸುಗಳಲ್ಲಿ ಗಂಗಾವತಿಯ ಭೀಮ, ಸಲೀಂ, ವಿಜಯ್ ಹಾಗೂ ಧನರಾಜ ಎಂಬುವರು ಪೊಲೀಸರಿಗೆ ಶರಣಾಗಿದ್ದಾರೆ.

'ಗುಂಪಾಗಿ ಬಂದು ದುಷ್ಕರ್ಮಿಗಳು ಕೃತ್ಯ ಎಸಗಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಹಳೆ ದ್ವೇಷದ ಕಾರಣಕ್ಕೆ ಘಟನೆ ನಡೆದಿರುವ ಶಂಕೆ ಇದ್ದು, ಇನ್ನುಳಿದ ಆರೋಪಿಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಎಸ್‌ಪಿ ಡಾ.ರಾಮ್ ಎಲ್.ಅರಸಿದ್ಧಿ ತಿಳಿಸಿದರು.

ಲೋಕಾಯುಕ್ತ ಬಲೆಗೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ

ಮಡಿಕೇರಿ: ಸೋಮವಾರಪೇಟೆ ತಾಲ್ಲೂಕಿನ ಹಂಡ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಧಾ ಹಿರೇಶ್ ₹25 ಸಾವಿರ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದರು.

'ಗುತ್ತಿಗೆದಾರರೊಬ್ಬರಿಗೆ ₹14 ಲಕ್ಷ ಬಿಲ್ ಮಂಜೂರು ಮಾಡಲು ಸುಧಾ ₹25 ಸಾವಿರ ಲಂಚ ಕೇಳಿದ್ದರು. ಲಂಚದ ಹಣ ಪಡೆಯುವಾಗ ಅವರನ್ನು ವಶಕ್ಕೆ ಪಡೆಯಲಾಯಿತು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಮೈಸೂರು ವಿಭಾಗದ ಲೋಕಾಯುಕ್ತ ಎಸ್‌ಪಿ. ಉದೇಶ್ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ದಿನಕರಶೆಟ್ಟಿ, ಇನ್‌ಸ್ಪೆಕ್ಟರ್‌ಗಳಾದ ಲೋಕೇಶ್, ವೀಣಾನಾಯಕ ಕಾರ್ಯಾಚರಣೆ ಕೈಗೊಂಡಿದ್ದರು.

ರಜೆ: ಕಲಿಕಾ ಅವಧಿ ಕೊರತೆ ಆಗದು

ಮಂಗಳೂರು: 'ಶಿಕ್ಷಣ ಹಕ್ಕು ಕಾಯ್ದೆಯ ಪ್ರಕಾರ ಶಾಲೆಗಳಲ್ಲಿ ವರ್ಷದಲ್ಲಿ 220 ಕಲಿಕಾ ದಿನಗಳ ಅಗತ್ಯವಿದೆ. ಈ ಶೈಕ್ಷಣಿಕ ವರ್ಷದಲ್ಲಿ 240 ಕಲಿಕಾ ದಿನಗಳು ಲಭ್ಯ ಇದ್ದು, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಸಲುವಾಗಿ 9 ದಿನ ರಜೆ ನೀಡಿದರೂ ಒಟ್ಟು ಕಲಿಕಾ ದಿನಗಳ ಕೊರತೆ ಆಗದು. ಇದು ಮಕ್ಕಳ ಕಲಿಕೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

ಇಲ್ಲಿ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಧಾನಸಭೆಯ ವಿಪಕ್ಷ ನಾಯಕ ಆರ್.ಅಶೋಕ, ಅಶ್ವತ್ಥನಾರಾಯಣ ಮತ್ತು ತೇಜಸ್ವಿ ಸೂರ್ಯ ಅಂತಹವರು ಸಮೀಕ್ಷೆಗೆ ಸಹಕರಿಸಬೇಡಿ ಎನ್ನುವುದು ಹೊಣೆಗೇಡಿತನ. ಅವರು ಯಾವ ಮುಖ ಇಟ್ಟುಕೊಂಡು ಸಮೀಕ್ಷೆಗೆ ವಿರೋಧ ವ್ಯಕ್ತಪಡಿಸುತ್ತಾರೆ' ಎಂದು ಪ್ರಶ್ನಿಸಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	1123.22	4,898	5,909
ಹಾರಂಗಿ	2,859	2,858.06	688	1,600
ಕಬಿನಿ	2,284.00	2,282.84	378	1,150
ಹೇಮಾವತಿ	2,922	2,916.95	3,056	6,610
ಲಿಂಗನಮಕ್ಕಿ	1,819	1,816.25	3,008	5,922
ಸೂಪಾ (ಮೀ)	564	559.42	1,462.08	4,698
ಮಾಣಿ	595	594.14	444	634
ತುಂಗಭದ್ರಾ	1,633	1,626.06	10,983	10,573
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2175	2,174.93	2,338	2,338
ಭದ್ರಾ *	186	184.1	3,302	3,904
ಆಲಮಟ್ಟಿ (ಮೀ)	519.6	519.60	18,385	18,385
ನಾರಾಯಣಪುರ (ಮೀ)	492.25	492.25	16,000	15,530

* ನೆಲಮಟ್ಟದಿಂದ

ಬೇರೆ ಕಾರ್ಯಕ್ರಮಕ್ಕೆ ಈಗಲ್ಟನ್ ರೆಸಾರ್ಟ್ ಮುಂಗಡ ಬುಕ್ಕಿಂಗ್

ಮತ್ತೆ 'ಬಿಗ್ ಬಾಸ್' ಸ್ಪರ್ಧಿಗಳ ಸ್ಥಳಾಂತರ?

ಪ್ರಜಾವಾಣಿ ವಾರ್ತೆ

ರಾಮನಗರ: ಜಾಲಿವುಡ್ ಸ್ಟುಡಿಯೋಸ್ ಆ್ಯಂಡ್ ಅಡ್ವೆಂಚರ್ಸ್ ಪಾರ್ಕ್‌ಗೆ ಮಂಗಳವಾರ ಬೀಗ ಜಡಿದ ನಂತರ ಸಮೀಪದ ಈಗಲ್ಟನ್ ರೆಸಾರ್ಟ್‌ಗೆ ತೆರಳಿದ್ದ 'ಬಿಗ್ ಬಾಸ್' ರಿಯಾಲಿಟಿ ಷೋ ಸ್ಪರ್ಧಿಗಳನ್ನು ಮತ್ತೆ ಬೇರೆಡೆಗೆ ಸ್ಥಳಾಂತರಿಸುವ ಅನಿವಾರ್ಯ ಎದುರಾಗಿದೆ.

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶದ ಕಾರಣದಿಂದ ಜಿಲ್ಲಾಡಳಿತ ಬಿಗ್‌ಬಾಸ್ ಮನೆ ಖಾಲಿ ಮಾಡಿಸಿ ಸ್ಪರ್ಧಿಗಳನ್ನು ಹೊರಕ್ಕೆ ಕಳಿಸಿತ್ತು. ಷೋ ಆಯೋಜಕರು ಕೂಡಲೇ ಎಲ್ಲರಿಗೂ ಈಗಲ್ಟನ್ ರೆಸಾರ್ಟ್‌ನಲ್ಲಿ ಉಳಿಯಲು ತಾತ್ಕಾಲಿಕ ವ್ಯವಸ್ಥೆ ಮಾಡಿದ್ದರು.

ಈಗಲ್ಟನ್ ರೆಸಾರ್ಟ್‌ನಲ್ಲಿ ಪೂರ್ವನಿಗದಿತ ಬೇರೊಂದು ಕಾರ್ಯಕ್ರಮ ಇರುವುದರಿಂದ ಎಲ್ಲಾ ಕೊಠಡಿಗಳನ್ನು ಮುಂಗಡವಾಗಿ ಕಾಯ್ದಿರಿಸಿರುವುದರಿಂದ, ಸ್ಪರ್ಧಿಗಳಿಗೆ ಬೇರೆ ಕಡೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಳ್ಳಿ ಎಂದು ರೆಸಾರ್ಟ್‌ನವರು ಆಯೋಜಕರಿಗೆ ತಿಳಿಸಿದ್ದಾರೆ.

ಅನ್ಯ ಮಾರ್ಗವಿಲ್ಲದೆ, ಷೋ ಆಯೋಜಕರು ಸ್ಪರ್ಧಿಗಳನ್ನು ಸಮೀಪದ ಬೇರೆ ಹೋಟೆಲ್ ಅಥವಾ ರೆಸಾರ್ಟ್‌ಗೆ ರಾತ್ರಿ ಸ್ಥಳಾಂತರ ಮಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜಿಲ್ಲಾಧಿಕಾರಿ ಭೇಟಿ-ಕಾಲಾವಕಾಶ ಕೋರಿಕೆ: ಈ ಬೆಳವಣಿಗೆ ನಡುವೆಯೇ ಜಾಲಿವುಡ್ ಆಡಳಿತ ಮಂಡಳಿ ಪ್ರತಿನಿಧಿಗಳು ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರನ್ನು ಭೇಟಿ ಮಾಡಿದ್ದರು. ನಿಯಮ ಉಲ್ಲಂಘಿಸಿದ್ದರಿಂದ ಆಗಿದ್ದ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳಲು 15 ದಿನ ಕಾಲಾವಕಾಶ ನೀಡುವಂತೆ ಮನವಿ ಮಾಡಿದರು.

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶದಲ್ಲಿ ತಿಳಿಸಿರುವ ಎಲ್ಲ ಲೋಪದೋಷ ಸರಿಪಡಿಸಿಕೊಳ್ಳುತ್ತೇವೆ. ಆ ಕುರಿತು ಮಂಡಳಿಗೆ ವರದಿ ಕೂಡ ಸಲ್ಲಿಸುತ್ತೇವೆ ಎಂದು ಮನವಿ ಸಲ್ಲಿದರು.

ಸ್ಟುಡಿಯೊದಲ್ಲಿ 400ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಜೊತೆಗೆ ಬಿಗ್‌ಬಾಸ್ ರಿಯಾಲಿಟಿ ಷೋ ಕೂಡ ನಡೆಯುತ್ತಿದೆ. ಸ್ಟುಡಿಯೊಗೆ ಬೀಗ ಹಾಕಿರುವುದರಿಂದ ಎಲ್ಲರ ಕೆಲಸಕ್ಕೆ ತೊಂದರೆಯಾಗಲಿದೆ. ಹಾಗಾಗಿ ಷರತ್ತುಬದ್ಧ ಅನುಮತಿ ನೀಡಿ ಎಂದು ಕೋರಿದರು.

'ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶವನ್ನು ನಾವು ಪಾಲಿಸಿದ್ದೇವೆ. ಹಾಗಾಗಿ, ಮಂಡಳಿಗೆ ನೀವು ಮನವಿ ಮಾಡಿ. ಅವರು ನೀಡುವ ಆದೇಶದಂತೆ ನಾವು ಮುಂದಿನ ಕ್ರಮ ಕೈಗೊಳ್ಳುತ್ತೇವೆ' ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.



ರಾಮನಗರ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರನ್ನು ಭೇಟಿ ಮಾಡಲು ಬುಧವಾರ ಕಚೇರಿ ಬಳಿ ಕಾದು ಕುಳಿತಿದ್ದ ಜಾಲಿವುಡ್ ಸ್ಟುಡಿಯೊ ಆಡಳಿತ ಮಂಡಳಿ ಪ್ರತಿನಿಧಿಗಳು

ವೈಯಕ್ತಿಕ ದ್ವೇಷ ಇಲ್ಲ: ಶಾಸಕ ಬಾಲಕೃಷ್ಣ

ಜಾಲಿವುಡ್ ಸ್ಟುಡಿಯೋದವರು ನಿಯಮ ಉಲ್ಲಂಘನೆ ಮಾಡಿರುವುದರಿಂದ ಬೀಗಮುದ್ರೆ ಹಾಕಲಾಗಿದೆ. ಇದರಲ್ಲಿ ವೈಯಕ್ತಿಕವಾದದ್ದು ಏನೂ ಇಲ್ಲ. ಒಂದು ವೇಳೆ ಸ್ಟುಡಿಯೊದಲ್ಲಿ ಏನಾದರೂ ಅವಘಡ ಸಂಭವಿಸಿದ್ದರೆ ಯಾರು ಹೊಣೆ? ಹಾಗಾಗಿ, ನಿಯಮ ಉಲ್ಲಂಘನೆ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

ರೆಸಾರ್ಟ್‌ನಲ್ಲೇ ರಿಲ್ಯಾಕ್ಸ್

ಕಳೆದ ಹನ್ನೊಂದು ದಿನಗಳಿಂದ ಬಿಗ್ ಬಾಸ್ ಷೋನಲ್ಲಿ ತೊಡಗಿಸಿಕೊಂಡಿದ್ದ ಸ್ಪರ್ಧಿಗಳು, ಈಗಲ್ಟನ್ ರೆಸಾರ್ಟ್‌ನಲ್ಲಿ ಇಡೀ ದಿನವನ್ನು ಆರಾಮವಾಗಿ ಕಳೆದರು.

ಯಾವುದೇ ಶೂಟಿಂಗ್ ಇಲ್ಲದಿದ್ದರಿಂದ ರೆಸಾರ್ಟ್ ಒಳಗೆ ಓಡಾಡಿಕೊಂಡಿದ್ದರು. ಕೆಲವರು ಮಹಡಿ ಮೇಲೆ ಜನರಿಗೆ ಕಾಣಿಸಿಕೊಂಡರು. ಸ್ಪರ್ಧಿಗಳು ಜನರಿಗೆ ಕಾಣಿಸಿಕೊಳ್ಳದಂತೆ ಆಯೋಜಕರು ಅವರನ್ನು ಒಳಗೆ ಹಿಡಿದಿಡುವ ಪ್ರಯತ್ನದಲ್ಲಿ ತೊಡಗಿದ್ದರು.

ಜಾಲಿವುಡ್: ಅರ್ಜಿ ಇಂದು ವಿಚಾರಣೆ

ಬೆಂಗಳೂರು: ಬಿಗ್ ಬಾಸ್ ರಿಯಾಲಿಟಿ ಷೋ ಚಿತ್ರೀಕರಣದ 'ಜಾಲಿವುಡ್ ಸ್ಟುಡಿಯೊಸ್ ಆ್ಯಂಡ್ ಅಡ್ವೆಂಚರ್ಸ್ ಪಾರ್ಕ್‌'ಗೆ ಬೀಗ ಹಾಕಿರುವ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿರುವ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಗುರುವಾರ ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ.

ಸರ್ಕಾರದ ಕ್ರಮವನ್ನು ಪ್ರಶ್ನಿಸಿ 'ವಿಎಲ್‌ಎಸ್ ಸ್ಟುಡಿಯೊಸ್ ಆ್ಯಂಡ್ ಎಂಟರ್‌ಟೈನ್‌ಮೆಂಟ್ ಪ್ರೈವೆಟ್ ಲಿಮಿಟೆಡ್' ಕಂಪನಿಯ ನಿರ್ದೇಶಕ ಪ್ರಕಾಶ್ ಪಳನಿ ಸಲ್ಲಿಸಿರುವ ರಿಟ್ ಅರ್ಜಿ, ನ್ಯಾಯಮೂರ್ತಿ ಬಿ.ಎಂ. ಶ್ಯಾಮಪ್ರಸಾದ್ ನೇತೃತ್ವದ ವಿಭಾಗೀಯ ನ್ಯಾಯಪೀಠದಲ್ಲಿ ಗುರುವಾರದ ಮೊಕದ್ದಮೆಗಳ ಆಲಿಕೆಯ ಸೂಚನಾ ಪಟ್ಟಿಯಲ್ಲಿ ನಿಗದಿಯಾಗಿದೆ.

ಅರ್ಜಿಯಲ್ಲಿ ಏನಿದೆ?: 'ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 2025ರ ಅಕ್ಟೋಬರ್ 6ರಂದು ನೋಟಿಸ್ ಜಾರಿ ಮಾಡಿದೆ. ಸೂಕ್ತ ಕಾಲಾವಕಾಶ ನೀಡದೇ ಅಕ್ಟೋಬರ್ 7ರಂದು ಜಾಲಿವುಡ್ ಸ್ಟುಡಿಯೊಸ್ ಆ್ಯಂಡ್ ಅಡ್ವೆಂಚರ್ಸ್ ಪಾರ್ಕ್‌ಗೆ ಬೀಗ ಹಾಕಲಾಗಿದೆ. ರಾಮನಗರ ತಹಶೀಲ್ದಾರ್ ಅವರ ಈ ನಡೆ ಕಾನೂನುಬಾಹಿರ ಮತ್ತು ಸ್ವೇಚ್ಛೆಯ ಕ್ರಮವಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

'ಇದು ನಿರ್ದಿಷ್ಟ ಗುರಿ ಇಟ್ಟುಕೊಂಡು ಮಾಡಿರುವ ಆದೇಶವಾಗಿದೆ. ಹಾಗಾಗಿ, ಸಹಜ ನ್ಯಾಯ ತತ್ವಕ್ಕೆ ವಿರುದ್ಧವಾದ ಈ ಆಕ್ಷೇಪಾರ್ಹ ಆದೇಶವನ್ನು ವಜಾಗೊಳಿಸಬೇಕು' ಎಂದು ಕೋರಲಾಗಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಿ.ಎಂ.ವಿಶ್ವಾಸ್ ಗೌಡ ವಕಾಲತ್ತು ವಹಿಸಿದ್ದಾರೆ.

ಹಣ ಅಕ್ರಮ ವರ್ಗ: ಜೆಎಸ್‌ಡಬ್ಲ್ಯು ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ಶಾಸಕ ಜಿ. ಜನಾರ್ದನ ರೆಡ್ಡಿ ಒಡೆತನದ ಓಬಳಾಪುರಂ ಮೈನಿಂಗ್ ಕಂಪನಿಯ (ಒಎಂಸಿ) ಅಕ್ರಮ ಗಣಿಗಾರಿಕೆ ಹಗರಣಕ್ಕೆ ಸಂಬಂಧಿಸಿದಂತೆ ಜೆಎಸ್‌ಡಬ್ಲ್ಯು ಸ್ಟೀಲ್ ಲಿಮಿಟೆಡ್ ಮತ್ತು ಅದರ ಅಧಿಕಾರಿಗಳ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣ ರದ್ದುಗೊಳಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಜಾರಿ ನಿರ್ದೇಶನಾಲಯದ (ಇ.ಡಿ) ದೂರು ಮತ್ತು ವಿಶೇಷ ನ್ಯಾಯಾಲಯದ ಆದೇಶದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿದ್ದ ಕರ್ನಾಟಕ ಹೈಕೋರ್ಟ್‌ನ 2022ರ ಜೂನ್ 13ರ ಆದೇಶವನ್ನು ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಮತ್ತು ಆಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠವು ಎತ್ತಿಹಿಡಿದಿದೆ.

ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ ತನ್ನ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದರ ವಿರುದ್ಧ ಕಂಪನಿ ಈಗಾಗಲೇ ಮೇಲ್ಮನವಿ ನ್ಯಾಯಮಂಡಳಿ ಸಂಪರ್ಕಿಸಿದೆ ಎಂದು ಗಮನಿಸಿದ ಪೀಠವು ಮೇಲ್ಮನವಿಯನ್ನು ವಜಾಗೊಳಿಸಿತು.

ಕಂಪನಿಯು ವಿಜಯನಗರದಲ್ಲಿರುವ ತನ್ನ ಘಟಕಕ್ಕೆ 1.5 ದಶಲಕ್ಷ ಟನ್ ಕಬ್ಬಿಣದ ಅದಿರು ಪೂರೈಸಲು ಒಎಂಸಿಯೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಕಂಪನಿಯು ಒಎಂಸಿಗೆ ₹130 ಕೋಟಿ ಮುಂಗಡ ಪಾವತಿಸಿತ್ತು.

ಒಎಂಸಿಯು 2009ರ ನವೆಂಬರ್‌ನಿಂದ ಡಿಸೆಂಬರ್ ವರೆಗೆ ತನ್ನ ಗಣಿಗಳಿಂದ, 2010ರ ಮಾರ್ಚ್‌ವರೆಗೆ ಅನಂತಪುರ ಮೈನಿಂಗ್ ಕಾರ್ಪೊರೇಷನ್ ಮತ್ತು ಇತರ ಕಂಪನಿಗಳಿಂದ ಅದಿರನ್ನು ಭಾಗಶಃ ಸರಬರಾಜು ಮಾಡಿತ್ತು. ಪೂರ್ಣ ಪ್ರಮಾಣದ ಅದಿರು ಸರಬರಾಜು ಮಾಡದ ಕಾರಣಕ್ಕೆ ಉಳಿದ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಲು ಕಂಪನಿ ಕೋರಿತ್ತು.

ಏತನ್ಮಧ್ಯೆ, ರೆಡ್ಡಿ ಕಂಪನಿ ವಿರುದ್ಧ ತನಿಖೆಗೆ ನ್ಯಾಯಾಲಯ ಆದೇಶಿಸಿತ್ತು. ಈ ನಿರ್ದೇಶನದ ಅನುಸಾರ ರೆಡ್ಡಿ ಮತ್ತು ಇತರರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿತ್ತು. ಆರಂಭದಲ್ಲಿ ಜೆಎಸ್‌ಡಬ್ಲ್ಯು ಸ್ಟೀಲ್ ಲಿಮಿಟೆಡ್ ಅನ್ನು ಆರೋಪಿ ಎಂದು ಹೆಸರಿಸಲಾಗಿತ್ತು. ಆ ಬಳಿಕ ಪ್ರಕರಣದಿಂದ ಕೈಬಿಡಲಾಗಿತ್ತು.

2012ರಲ್ಲಿ ರೆಡ್ಡಿ ಮತ್ತು ಅರುಣಾ ವಿರುದ್ಧ ಹಣ ವರ್ಗಾವಣೆ ಪ್ರಕರಣ ದಾಖಲಿಸಿದ್ದ ಇ.ಡಿ 2015ರಲ್ಲಿ ಕಂಪನಿಯ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಂಡಿತ್ತು. ಜತೆಗೆ, ಕಂಪನಿ ವಿರುದ್ಧ ಪ್ರಕರಣ ದಾಖಲಿಸಿತ್ತು.

ಹಾಸನಾಂಬೆಯ ದರ್ಶನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಹಾಸನ: ಇಲ್ಲಿನ ಹಾಸನಾಂಬ ದೇವಾಲಯದ ಗರ್ಭಗುಡಿಯ ಬಾಗಿಲು ಗುರುವಾರ (ಅ.9) ತೆರೆಯಲಿದ್ದು, ಜಾತ್ರಾ ಮಹೋತ್ಸವಕ್ಕೆ ಸಿದ್ಧತೆಗಳು ಭರದಿಂದ ಸಾಗಿವೆ.

ಅ.23ರಂದು ದೇವಾಲಯದ ಬಾಗಿಲು ಮುಚ್ಚಲಾಗುವುದು. ಮೊದಲ ಹಾಗೂ ಕೊನೆಯ ದಿನ ಸಾರ್ವಜನಿಕರ ದರ್ಶನಕ್ಕೆ ಅವಕಾಶವಿಲ್ಲ. ಅ.10 ರಿಂದ 22ರವರೆಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಈ ಬಾರಿ ವಿಐಪಿ, ವಿವಿಐಪಿ ಪಾಸ್‌ಗಳನ್ನು ರದ್ದುಪಡಿಸಲಾಗಿದ್ದು, ಗೋಲ್ಡ್ ಪಾಸ್ ಜಾರಿಗೊಳಿಸಲಾಗಿದೆ. ಒಂದು ಪಾಸ್‌ಗೆ ಒಬ್ಬರು ಮಾತ್ರ ಬೆಳಿಗ್ಗೆ 7 ರಿಂದ 10ರವರೆಗೆ ದರ್ಶನ ಪಡೆಯಬಹುದು. ಗಣ್ಯರಿಗೆ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30ರವರೆಗೆ ಅವಕಾಶ ನೀಡಲಾಗಿದೆ.

'ಟಿಕೆಟ್ ಕಾಯ್ದಿರಿಸುವುದು, ಆಯಾ ದಿನ ದರ್ಶನಕ್ಕೆ ತಗುಲುವ ಸಮಯ, ದರ್ಶನದ ವೇಳಾಪಟ್ಟಿ ಸೇರಿ ವಿವಿಧ ಮಾಹಿತಿಯನ್ನು ಮೊಬೈಲ್ ಸಂಖ್ಯೆ 63661-05589 ಗೆ ವಾಟ್ಸ್ ಆ್ಯಪ್ ಸಂದೇಶ ಕಳುಹಿಸುವ ಮೂಲಕ ಪಡೆಯಬಹುದಾಗಿದೆ' ಎಂದು ಜಿಲ್ಲಾಡಳಿತವು ಪ್ರಕಟಣೆಯಲ್ಲಿ ತಿಳಿಸಿದೆ.

ವಿವಿಧ ಚಟುವಟಿಕೆ: ಹಾಸನಾಂಬ ಜಾತ್ರಾ ಮಹೋತ್ಸವದಲ್ಲಿ ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ಕೃಷಿ ಮೇಳ, ಶ್ವಾನ ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಪ್ರವಾಸೋದ್ಯಮದ ಅಭಿವೃದ್ಧಿಗೆ ಜಿಲ್ಲೆಯ ವಿವಿಧ ಸ್ಥಳಗಳಿಗೆ ಭೇಟಿ ನೀಡಲು 12 ಪ್ಯಾಕೇಜ್ ಮಾಡಲಾಗಿದೆ. ಹೆಲಿ ಟೂರಿಸಂಗೆ ಸಿದ್ದತೆ ಮಾಡಿಕೊಳ್ಳಲಾಗಿದೆ.



ಹಾಸನಾಂಬ ದೇಗುಲದ ಗರ್ಭಗುಡಿ (ಸಂಗ್ರಹ ಚಿತ್ರ)

ಕಸಾಪ ಅಧ್ಯಕ್ಷ ಮಹೇಶ ಜೋಶಿ ವಿರುದ್ಧ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರ ಆರೋಪ

'ಲೋಕಾಯುಕ್ತ ತನಿಖೆಗೆ ಆಗ್ರಹ ಬಾಲಿಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಅವರು ತಮ್ಮ ಮೇಲಿನ ಆರೋಪಗಳನ್ನು ಮುಚ್ಚಿ ಹಾಕಿಕೊಳ್ಳಲು, ವಿಷಯಾಂತರ ಮಾಡುವ ಮೂಲಕ ವ್ಯವಸ್ಥೆಯ ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಆರೋಪಿಸಿದ್ದಾರೆ.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವೆಚ್ಚ ಸೇರಿ ಇತ್ತೀಚಿನ ವಿವಿಧ ಬೆಳವಣಿಗೆಗಳ ಬಗ್ಗೆ ಲೋಕಾಯುಕ್ತರಿಂದ ತನಿಖೆ ಮಾಡಿಸುವಂತೆ ಜಮಖಂಡಿಯಲ್ಲಿ ನಡೆದ ಕಸಾಪ ಕಾರ್ಯಕಾರಿ ಸಭೆ ನಿರ್ಧಾರ ಕೈಗೊಂಡಿದೆ.

ಈ ನಿರ್ಧಾರಕ್ಕೆ ಸಂಬಂಧಿಸಿದಂತೆ ಎಸ್.ಜಿ.ಸಿದ್ಧರಾಮಯ್ಯ, ಬಿ.ಜಯಪ್ರಕಾಶಗೌಡ, ಬಂಜಗೆರೆ ಜಯಪ್ರಕಾಶ್, ಕೆ.ಎಸ್.ವಿಮಲಾ, ಶ್ರೀಪಾದ ಭಟ್ ಹಾಗೂ ಮಾವಳ್ಳಿ ಶಂಕರ್ ಅವರು ಜಂಟಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಮಹೇಶ ಜೋಶಿ ಅವರು ಆರೋಪಿಸಿರುವ ವ್ಯಕ್ತಿಗಳ ಮತ್ತು ಸಂಸ್ಥೆಗಳ ವಿರುದ್ಧ ಲೋಕಾಯುಕ್ತ ತನಿಖೆ ನಡೆಯಬೇಕಾದ ಸಂದರ್ಭ ಬಂದಾಗ ನಡೆಯಲಿ. ಆದರೆ, ಅದಕ್ಕೂ ಮೊದಲು ಆಯಾ ಸಂಘ ಸಂಸ್ಥೆಗಳ ವಿರುದ್ಧ ದೂರುಗಳು ಬಂದಾಗ, ನಿಯಮಾನುಸಾರ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಗೆ ಮತ್ತು ಇಲಾಖೆಗಳಿಗೆ ವಿಚಾರಣೆ ಮಾಡಲು ಅಧಿಕಾರವಿದೆ. ಅವುಗಳು ವಿಫಲವಾದಲ್ಲಿ ಲೋಕಾಯುಕ್ತದ ಹಂತಕ್ಕೆ ಹೋಗಬಹುದು' ಎಂದು ಹೇಳಿದ್ದಾರೆ.

'ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ತೆರಿಗೆ ಹಣದಿಂದ ಅನುದಾನ ಪಡೆಯುತ್ತಿರುವುದರಿಂದ, ಪರಿಷತ್ತಿನ ಸದಸ್ಯರು ಮತ್ತು ಕನ್ನಡಿಗರು ಪ್ರಶ್ನಿಸಬಹುದಾಗಿದೆ. ಅವರು ಹೇಳಿರುವ ಸಂಘ-ಸಂಸ್ಥೆಗಳ ಮತ್ತು ವ್ಯಕ್ತಿಗಳ ಮೇಲೆ ಆರೋಪಿಸಲು ಹಾಗೂ ದೂರು ನೀಡಲು ಆಯಾ ಸಂಸ್ಥೆಗಳ ಸದಸ್ಯರು ಮತ್ತು ಕನ್ನಡಿಗರು ಹಕ್ಕುಳ್ಳವರಾಗಿದ್ದಾರೆ. ಅದರಂತೆ ಕ್ರಮಬದ್ಧವಾಗಿ ಕೆಳಹಂತದಿಂದ ದೂರು ಸಲ್ಲಿಸಿ ಮುಂದುವರಿಯಬೇಕೆ ಹೊರತು, ಈ ರೀತಿಯಾಗಿ ಬುಡವನ್ನು ಬಿಟ್ಟು ತುದಿಯನ್ನು ಹಿಡಿದು ಅಲ್ಲಾಡಿಸುವುದು ಮೂರ್ಖತನ ಮತ್ತು ಅತ್ಯಂತ ಖಂಡನೀಯ' ಎಂದಿದ್ದಾರೆ.

'ಕಸಾಪ ಅಧ್ಯಕ್ಷರು ಆರೋಪಿಸಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಸಂಬಂಧಿಸಿದವರು ವಿಚಾರಣೆಗೆ ಒಳಗಾಗಲು ಸಿದ್ಧರಿದ್ದಾರೆ. ಭ್ರಷ್ಟಾಚಾರ ಮತ್ತು ದುರಾಡಳಿತದಿಂದ ಸದಾ ವಿವಾದಕ್ಕೆ ಒಳಗಾಗಿರುವ ಜೋಶಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಆಡಳಿತಾಧಿಕಾರಿಯನ್ನು ಒಪ್ಪಿಕೊಂಡು ತನಿಖೆ ಮತ್ತು ವಿಚಾರಣೆಗೆ ಅನುವು ಮಾಡಿಕೊಡಲಿ' ಎಂದು ಹೇಳಿದ್ದಾರೆ.

'ನೀರಿದ್ದರೆ ನಾಳೆ'ಗೆ ಚಾಲನೆ ಇಂದು

ಅಂತರ್ಜಲ ಅತಿಬಳಕೆಯ 525 ಗ್ರಾ.ಪಂ.ಗಳಲ್ಲಿ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ 16 ಜಿಲ್ಲೆಗಳ, 27 ತಾಲ್ಲೂಕಗಳಲ್ಲಿ ಅಂತರ್ಜಲದ ಅತಿಬಳಕೆಯ ಪಟ್ಟಿಯಲ್ಲಿರುವ 525 ಗ್ರಾಮ ಪಂಚಾಯಿತಿಗಳಲ್ಲಿ 'ನೀರಿದ್ದರೆ ನಾಳೆ' ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ (ಅ. 9) ಚಾಲನೆ ನೀಡಲಿದ್ದಾರೆ' ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ನೀರಿನ ಮಹತ್ವ ತಿಳಿಸುವುದು, ಜಲಮೂಲಗಳ ಸಂರಕ್ಷಣೆಗೆ ಯೋಜನೆ ರೂಪಿಸುವುದು, ನಾಗರಿಕರನ್ನು ನೀರಿನ ಸಂರಕ್ಷಣೆ ಅಭಿಯಾನದಲ್ಲಿ ಪಾಲುದಾರರನ್ನಾಗಿ ಮಾಡುವ ಉದ್ದೇಶದಿಂದ ಈ ವಿನೂತನ ಕಾರ್ಯಕ್ರಮ ರೂಪಿಸಲಾಗಿದೆ. ಈ ಅಭಿಯಾನಕ್ಕೆ ನಟ ವಸಿಷ್ಠ ಸಿಂಹ ಅವರನ್ನು ರಾಯಭಾರಿಯಾಗಿ ನೇಮಿಸಲಾಗಿದೆ' ಎಂದರು.

'ಈ ಯೋಜನೆಯಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನೀರಿನ ಭದ್ರತೆಯ ಕ್ರಿಯಾ ಯೋಜನೆ ಸಿದ್ಧಪಡಿಸಲಾಗುವುದು. ಅಂತರ್ಜಲ ಸಾಕ್ಷರತೆಗೆ ಒತ್ತು ನೀಡಲಾಗುವುದು. ಅಂತರ್ಜಲಕ್ಕೆ ಸಂಬಂಧಿಸಿದಂತೆ ರಾಜ್ಯದ ಪ್ರಸ್ತುತ ಪರಿಸ್ಥಿತಿ, ಅಂಕಿ ಅಂಶದ ಲಭ್ಯತೆ ಬಗ್ಗೆ ಶಾಲಾ ಮಟ್ಟಗಳಲ್ಲೇ ಜಾಗೃತಿ ಮೂಡಿಸಲಾಗುವುದು' ಎಂದು ಹೇಳಿದರು.

'ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಂತರ್ಜಲದ ಅತಿಬಳಕೆ ಇರುವ 100ಕ್ಕೂ ಹೆಚ್ಚು ಗ್ರಾಮ ಪಂಚಾಯತಿಗಳಲ್ಲಿ ಸಣ್ಣ ನೀರಾವರಿ ಇಲಾಖೆ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಪ್ರಸಕ್ತ ಸಾಲಿನಲ್ಲಿ ₹ 200 ಕೋಟಿ ವೆಚ್ಚದಲ್ಲಿ ಅಂತರ್ಜಲ ಅಭಿವೃದ್ಧಿ ಯೋಜನೆ ರೂಪಿಸಲಾಗಿದೆ' ಎಂದು ತಿಳಿಸಿದರು.

'ಕೆರೆ ಬಳಕೆದಾರರ ಸಂಘಗಳ ಮೂಲಕ ಕೆರೆಗಳ ಸಂರಕ್ಷಣೆ ಮತ್ತು ನಿರ್ವಹಣೆಗೆ ಒತ್ತು ನೀಡಲು ಉದ್ದೇಶಿಸಲಾಗಿದೆ. ಜಲಮೂಲಗಳ ಸಮಗ್ರ ನಿರ್ವಹಣೆಗೆ ತಂತ್ರಜ್ಞಾನ ಆಧಾರಿತ ಡಿಜಿಟಲ್ ವಾಟರ್ ಸ್ಟಾಕ್ ಅಳವಡಿಕೆಗೆ ಚಿಂತನೆ ನಡೆದಿದೆ. ಈ ಕಾರ್ಯಕ್ರಮದ ಅನುಷ್ಠಾನದ ಮೂಲಕ ಕರ್ನಾಟಕ ರಾಜ್ಯವನ್ನು ಜಲ ಸಮೃದ್ಧಗೊಳಿಸುವ ಗುರಿ ಹೊಂದಲಾಗಿದೆ' ಎಂದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಕುಲದೀಪ್ ಸಿದ್ಧತೆ
ನವದೆಹಲಿಯಲ್ಲಿ ನಡೆಯಲಿರುವ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಕ್ರಿಕೆಟ್ ಪಂದ್ಯಕ್ಕಾಗಿ ಭಾರತ ತಂಡದ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಬುಧವಾರ ತಾಲೀಮು ನಡೆಸಿದರು



ಪಥಸಂಚಲನ
ಭಾರತೀಯ ವಾಯುಪಡೆ ದಿನದ ಅಂಗವಾಗಿ ಗಾಜಿಯಾಬಾದ್‌ನ ಹಿಂಡನ್ ವಾಯುನೆಲೆಯಲ್ಲಿ ಬುಧವಾರ ಪಥಸಂಚಲನ ನಡೆಯಿತು

ಸೆನ್ಸೆಕ್ಸ್ 81,773 | ನಿಫ್ಟಿ 25,046 | $/₹ 88.75 | ಚಿನ್ನ (Std. 10g) ₹1,26,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,59,500 (ಬೆಂಗಳೂರು)

ಸಿರಪ್ ಕಾರ್ಖಾನೆಗೆ ಬೀಗಮುದ್ರೆ

ಮಕ್ಕಳ ಸಾವು 20ಕ್ಕೆ ಏರಿಕೆ • ಮಧ್ಯಪ್ರದೇಶ ಎಸ್‌ಐಟಿಯಿಂದ ಚೆನ್ನೈನಲ್ಲಿ ತನಿಖೆ

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ಕೆಮ್ಮಿನ 'ಕಲುಷಿತ' ಸಿರಪ್ ಸೇವಿಸಿ ಮಧ್ಯಪ್ರದೇಶದಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ 20ಕ್ಕೆ ಏರಿಕೆಯಾಗಿರುವ ಮಧ್ಯೆಯೇ, ಈ ಸಿರಪ್ ತಯಾರಿಸುವ ಸ್ರೇಸನ್ ಫಾರ್ಮಾಸ್ಯುಟಿಕಲ್ಸ್ ಕಾರ್ಖಾನೆಗೆ ಬೀಗ ಹಾಕಿರುವ ತಮಿಳುನಾಡು ಸರ್ಕಾರ, ಕಂಪನಿಯ ಇಬ್ಬರಿಗೆ ಶೋಕಾಸ್ ನೋಟಿಸ್ ನೀಡಿದೆ.

ಚೆನ್ನೈ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬಳಿ, ಕಾಂಚಿಪುರಂ ಜಿಲ್ಲೆಯ ಸುಂಗುವರಚತ್ರಂನಲ್ಲಿರುವ ಕಂಪನಿಯ ಕಾರ್ಖಾನೆಗೆ ಮಂಗಳವಾರ ಸಂಜೆ ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳು ಬೀಗ ಜಡಿದಿದ್ದಾರೆ.

ಕಂಪನಿಯ ಮಾಲೀಕ ಡಾ.ಜಿ.ರಂಗನಾಥನ್ ಹಾಗೂ ಅನಲಿಟಿಕಲ್ ಕೆಮಿಸ್ಟ್ ಕೆ.ಮಹೇಶ್ವರಿ ಅವರಿಗೆ ನೋಟಿಸ್ ನೀಡಲಾಗಿದೆ. ಕಂಪನಿಯಿಂದ ಹಲವು ಉಲ್ಲಂಘನೆಗಳಾಗಿವೆ. ಕಂಪನಿ ಉತ್ಪಾದಿಸುವ ಸಿರಪ್‌ನಲ್ಲಿ ವಿಷಕಾರಿ ದ್ರಾವಣ ಡೈಎಥಿಲೀನ್ ಗ್ಲೈಕಾಲ್ (ಡಿಇಜಿ) ಪ್ರಮಾಣ ಶೇ 48.6ರಷ್ಟು ಇರುವುದು ಪರೀಕ್ಷೆಯಿಂದ ಕಂಡುಬಂದಿದೆ. ಹೀಗಾಗಿ ನೋಟಿಸ್‌ಗಳನ್ನು ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

▶8

ಮುಖ್ಯಾಂಶಗಳು
- ಕಂಪನಿಯು 2026ರ ವರೆಗೆ ಕೆಮ್ಮಿನ ಸಿರಪ್ ತಯಾರಿಸುವ ಪರವಾನಗಿ ಹೊಂದಿದೆ
- ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಗಳ ಆಧಾರದಲ್ಲಿ ಮಾಹಿತಿ ಸಂಗ್ರಹ

'ಕಂಪನಿ ವಿರುದ್ಧ ಕ್ರಿಮಿನಲ್ ಕ್ರಮ'

ತಿರುನೆಲ್ವೇಲಿ (ತಮಿಳುನಾಡು): 'ಮಕ್ಕಳ ಸಾವಿನಿಂದಾಗಿ ನಿಷೇಧಕ್ಕೆ ಒಳಗಾಗಿರುವ ಕೆಮ್ಮಿನ ಸಿರಪ್ ತಯಾರಕ ಕಂಪನಿ ವಿರುದ್ಧ ರಾಜ್ಯ ಸರ್ಕಾರ ಕ್ರಿಮಿನಲ್ ಕ್ರಮ ತೆಗೆದುಕೊಳ್ಳಲಿದೆ' ಎಂದು ಸಚಿವ ಎಂ.ಸುಬ್ರಮಣಿಯನ್ ಬುಧವಾರ ಇಲ್ಲಿ ಹೇಳಿದ್ದಾರೆ.

'ಕಂಪನಿ ಮುಚ್ಚುವುದಕ್ಕೆ ಸಂಬಂಧಿಸಿ ಸರ್ಕಾರ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ' ಎಂದಿದ್ದಾರೆ.

'5 ಮಕ್ಕಳ ಸ್ಥಿತಿ ಗಂಭೀರ'

ಛಿಂದ್ವಾಢ (ಮಧ್ಯಪ್ರದೇಶ): 'ಕಲುಷಿತವಾಗಿದ್ದ ಕೆಮ್ಮಿನ ಸಿರಪ್ ಸೇವಿಸಿದ್ದರಿಂದಾಗಿ ರಾಜ್ಯದ ಐದು ಮಕ್ಕಳ ಆರೋಗ್ಯ ಹದಗೆಟ್ಟಿದ್ದು, ಅವರ ಸ್ಥಿತಿ ಗಂಭೀರವಾಗಿದೆ. ಈ ಸಿರಪ್ ಸೇವಿಸಿದ ಪರಿಣಾಮ ಮೂತ್ರಪಿಂಡ ಸೋಂಕು ಕಾಣಿಸಿಕೊಂಡಿದ್ದರಿಂದ 20 ಮಕ್ಕಳು ಮೃತಪಟ್ಟಿದ್ದಾರೆ' ಎಂದು ಮಧ್ಯಪ್ರದೇಶ ಆರೋಗ್ಯ ಸಚಿವ ರಾಜೇಂದ್ರ ಶುಕ್ಲಾ ಬುಧವಾರ ಹೇಳಿದ್ದಾರೆ.



ಮೃತಪಟ್ಟ ಮಕ್ಕಳ ಕುಟುಂಬಗಳನ್ನು ಭೇಟಿ ಮಾಡಿ, ಸಾಂತ್ವನ ಹೇಳಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. 'ಐದು ಮಕ್ಕಳಿಗೆ ಮಹಾರಾಷ್ಟ್ರದ ನಾಗ್ಪುರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಮಕ್ಕಳ ಪ್ರಾಣ ಉಳಿಸಲು ವೈದ್ಯರು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದಾರೆ' ಎಂದಿದ್ದಾರೆ.

'ಎರಡು ಸಿರಪ್ ಬಳಕೆ ಬೇಡ'

ಹೈದರಾಬಾದ್: ನಿರ್ದಿಷ್ಟ ಬ್ಯಾಚ್‌ನ 'ರಿಲೈಫ್' ಹಾಗೂ ರೆಸ್ಪಿಫ್ರೆಶ್ ಟಿಆರ್' ಕೆಮ್ಮಿನ ಸಿರಪ್‌ಗಳ ಬಳಕೆಯನ್ನು ತಕ್ಷಣದಿಂದಲೇ ನಿಲ್ಲಿಸಬೇಕು ಎಂದು ತೆಲಂಗಾಣ ಸರ್ಕಾರ ಸೂಚಿಸಿದೆ.

'ಈ ಎರಡು ಸಿರಪ್‌ಗಳಲ್ಲಿ ವಿಷಕಾರಿ ದ್ರಾವಣ ಡೈಎಥಿಲೀನ್ ಗ್ಲೈಕಾಲ್ (ಡಿಇಜಿ) ಇರುವುದು ಪತ್ತೆಯಾಗಿದ್ದು, ಈ ಕುರಿತು ಮಧ್ಯಪ್ರದೇಶದ ಔಷಧ ಪರೀಕ್ಷೆ ಪ್ರಯೋಗಾಲಯ ಎಚ್ಚರಿಕೆ ನೀಡಿದೆ. ಹೀಗಾಗಿ, ಇವುಗಳ ಬಳಕೆಯನ್ನು ತಕ್ಷಣ ನಿಲ್ಲಿಸುವಂತೆ ಸೂಚಿಸಲಾಗಿದೆ' ಎಂದು ತೆಲಂಗಾಣ ಔಷಧ ನಿಯಂತ್ರಣ ಇಲಾಖೆಯ ಮಹಾ ನಿರ್ದೇಶಕ ಶಾನವಾಜ್ ಕಾಸಿಮ್ ತಿಳಿಸಿದ್ದಾರೆ.

'ರಿಲೈಫ್' ಸಿರಪ್ ಅನ್ನು ಶೇಫ್ ಫಾರ್ಮಾ ಪ್ರೈವೆಟ್ ಲಿಮಿಟೆಡ್ ಹಾಗೂ ರೆಸ್ಪಿಫ್ರೆಶ್ ಟಿಆರ್' ಅನ್ನು ರೆಡ್‌ನೆಕ್ಸ್ ಫಾರ್ಮಾಸ್ಯುಟಿಕಲ್ಸ್ ಪ್ರೈವೆಟ್ ಲಿಮಿಟೆಡ್ ತಯಾರಿಸುತ್ತವೆ. ಈ ಎರಡೂ ಕಂಪನಿಗಳ ಉತ್ಪಾದನಾ ಘಟಕಗಳು ಗುಜರಾತ್‌ನಲ್ಲಿವೆ.

ರಂಗನಾಥನ್‌ಗಾಗಿ ಶೋಧ

ಚೆನ್ನೈ: ಕೆಮ್ಮಿನ ಸಿರಪ್ ಕುಡಿದು ಮಕ್ಕಳು ಮೃತಪಟ್ಟಿದ್ದಾರೆ ಎಂಬ ಆರೋಪಗಳ ಕುರಿತು ತನಿಖೆ ನಡೆಸಲು ಮಧ್ಯಪ್ರದೇಶ ಸರ್ಕಾರ ರಚಿಸಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ), ಸಿರಪ್ ತಯಾರಿಸುವ ಕಾರ್ಖಾನೆಗೆ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಕಂಪನಿ ಮಾಲೀಕ ರಂಗನಾಥನ್ ಅವರ ಪತ್ತೆಗಾಗಿ ಎಸ್‌ಐಟಿ ಶೋಧ ನಡೆಸುತ್ತಿದೆ. ಕಂಪನಿ ತಯಾರಿಸುತ್ತಿರುವ 'ಕೋಲ್ಡ್ರಿಫ್' ಕೆಮ್ಮಿನ ಸಿರಪ್ ಅನ್ನು ಮಧ್ಯಪ್ರದೇಶ ಹಾಗೂ ತಮಿಳುನಾಡು ಸರ್ಕಾರಗಳು ನಿಷೇಧಿಸಿದ ಬೆನ್ನಲ್ಲೇ, ಮೂರು ದಿನಗಳಿಂದ ರಂಗನಾಥನ್ ನಾಪತ್ತೆಯಾಗಿದ್ದಾರೆ ಎಂದು ಮೂಲಗಳು ಹೇಳಿವೆ. 7 ಜನ ಸದಸ್ಯರು ಇರುವ ಎಸಿಪಿ ನೇತೃತ್ವದ ತಂಡವು, ನಗರದಲ್ಲಿರುವ ಕಂಪನಿಯ ನೋಂದಾಯಿತ ಕಚೇರಿಗೂ ಭೇಟಿ ನೀಡಿ, ಕೆಲ ಮಾಹಿತಿಗಳನ್ನು ಸಂಗ್ರಹಿಸಿತು ಎಂದು ಮೂಲಗಳು ಹೇಳಿವೆ.

'ಮಧ್ಯಪ್ರದೇಶದ ಎಸ್‌ಐಟಿಗೆ ಸ್ಥಳೀಯ ಪೊಲೀಸರು ನೆರವು ನೀಡುತ್ತಿದ್ದಾರೆ. ಇಂದು ಸಿರಪ್ ತಯಾರಿಕಾ ಘಟಕದಲ್ಲಿ ಪರಿಶೀಲನೆ ನಡೆಸಿತು' ಎಂದು ಇಲ್ಲಿನ ಅಶೋಕನಗರ ಪೊಲೀಸ್ ಠಾಣೆ ಅಧಿಕಾರಿಯೊಬ್ಬರು ತಿಳಿಸಿದರು.

ಚಾಮುಂಡೇಶ್ವರಿ ತೆಪ್ಪೋತ್ಸವ

ಪ್ರಜಾವಾಣಿ ಚಿತ್ರ
ಅನೂಪ್ ರಾಘ ಟಿ.



ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವ ದೇವಿಕೆರೆಯಲ್ಲಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯ ತೆಪ್ಪೋತ್ಸವ ಬುಧವಾರ ವೈಭವದಿಂದ ನಡೆಯಿತು

'ಬಿಗ್ ಬಾಸ್' ಮನೆ ಬೀಗ ತೆರೆಯಲು ಡಿಸಿಎಂ ಸೂಚನೆ

ಪ್ರಜಾವಾಣಿ ವಾರ್ತೆ

ರಾಮನಗರ: ಜನಪ್ರಿಯ 'ಬಿಗ್ ಬಾಸ್' ರಿಯಾಲಿಟಿ ಷೋ ಮನೆ ಇರುವ ಬಿಡದಿಯ ಜಾಲಿವುಡ್ ಸ್ಟುಡಿಯೋಸ್ ಆ್ಯಂಡ್ ಅಡ್ವೆಂಚರ್ಸ್ ಪಾರ್ಕ್‌ಗೆ ಜಿಲ್ಲಾಡಳಿತ ಹಾಕಿದ್ದ ಬೀಗಮುದ್ರೆ ತೆಗೆಯುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ರಾತ್ರಿ ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದಾರೆ.

ಈ ಕುರಿತು ರಾತ್ರಿ 11.39ಕ್ಕೆ 'ಎಕ್ಸ್' ಮತ್ತು ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿರುವ ಡಿಸಿಎಂ, 'ಬಿಗ್ ಬಾಸ್ ಚಿತ್ರೀಕರಣ ನಡೆಯುತ್ತಿರುವ ಬಿಡದಿಯಲ್ಲಿರುವ ಜಾಲಿವುಡ್ ಆವರಣದ ಸೀಲ್ ತೆಗೆದುಹಾಕಲು ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಿದ್ದೇನೆ' ಎಂದು ತಿಳಿಸಿದ್ದಾರೆ.

> **ಜಾಲಿವುಡ್ ಸ್ಟುಡಿಯೊದವರು ಮಂಡಳಿಯಿಂದ ಅನುಮೋದನೆ ಪಡೆಯದ ಹೊರತು ಬೀಗಮುದ್ರೆಯನ್ನು ತೆಗೆಯಲಾಗದು. ಈ ಕುರಿತ ಡಿಸಿಎಂ ಪೋಸ್ಟ್ ಬಗ್ಗೆ ನನಗೆ ಗೊತ್ತಿಲ್ಲ**
> **ಪಿ.ಎಂ. ನರೇಂದ್ರಸ್ವಾಮಿ,** ಅಧ್ಯಕ್ಷ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಸುದೀಪ್ ಧನ್ಯವಾದ: ಡಿಸಿಎಂ ಪೋಸ್ಟ್ ಬೆನ್ನಲ್ಲೇ ಷೋ ನಿರೂಪಕ ನಟ ಕಿಚ್ಚ ಸುದೀಪ್, 'ಸಕಾಲಕ್ಕೆ ನನ್ನ ಕರೆಗೆ ಸ್ಪಂದಿಸಿದ ಗೌರವಾನ್ವಿತ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಹಾಗೂ ಈ ಗೊಂದಲದಲ್ಲಿ ಬಿಗ್ ಬಾಸ್ ಯಾವುದೇ ರೀತಿಯಲ್ಲೂ ಭಾಗಿಯಾಗಿಲ್ಲ ಎಂಬುದನ್ನು ಒಪ್ಪಿಕೊಂಡಿರುವ ಸಂಬಂಧಪಟ್ಟ ಅಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸುವೆ. ಈ ನಿಟ್ಟಿನಲ್ಲಿ ಪ್ರಯತ್ನಿಸಿದ ನಲಪಾಡ್ ಅವರಿಗೂ ಧನ್ಯವಾದ' ಎಂದು ತಮ್ಮ 'ಎಕ್ಸ್' ಖಾತೆಯಲ್ಲಿ ರಾತ್ರಿ 11.42ಕ್ಕೆ ಪೋಸ್ಟ್ ಹಾಕಿದ್ದಾರೆ.

ಡಿಸಿಎಂ ಸೂಚನೆಯ ಬೆನ್ನಲ್ಲೇ ಕಂದಾಯ ಇಲಾಖೆಯ ಸಿಬ್ಬಂದಿ, ಜಾಲಿವುಡ್ ಸ್ಟುಡಿಯೋಸ್‌ಗೆ ತೆರಳಿ ಬೀಗಮುದ್ರೆ ತೆಗೆಯುವ ನಿರೀಕ್ಷೆ ಇದೆ. ಸದ್ಯ ಈಗಲ್ಟನ್ ರೆಸಾರ್ಟ್‌ನಲ್ಲಿರುವ ಬಿಗ್ ಬಾಸ್ ಸ್ಪರ್ಧಿಗಳು ಗುರುವಾರ ಸ್ಟುಡಿಯೊಗೆ ವಾಪಸಾಗಲಿದ್ದು, ಷೋ ಚಿತ್ರೀಕರಣ ಸರಾಗವಾಗಿ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

▶3B
ಇನ್ನಷ್ಟು ಸುದ್ದಿಗಳು ▶3B

ಚಿನಕುರುಳಿ ಪ್ರಕಾಶ್ ಶೆಟ್ಟಿ



ನವೆಂಬರ್‌ಗೆ ಸಂಪುಟ ಪುನರ್ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸಂಪುಟ ಪುನರ್ ರಚನೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುಳಿವು ನೀಡಿದ ಬೆನ್ನಲ್ಲೇ, ರಾಜ್ಯ ಕಾಂಗ್ರೆಸ್‌ನಲ್ಲಿ ರಾಜಕೀಯ ಚಟುವಟಿಕೆ ಗರಿಗೆದರಿ ಕೊಂಡಿದೆ. ನವೆಂಬರ್ ಅಂತ್ಯದೊಳಗೆ ಸಂಪುಟ ಪುನರ್ ರಚನೆ ಯಾಗಲಿದೆ ಎಂಬ ಮಾತು ಆ ಪಕ್ಷದ ವಲಯದಲ್ಲಿ ದಟ್ಟವಾಗುತ್ತಿದೆ.

ಈ ನಡುವೆ, ಸಿದ್ದರಾಮಯ್ಯ ಅವರು ತಮ್ಮ ಗೃಹ ಕಚೇರಿಯಲ್ಲಿ ಸಂಪುಟ ಸಹೋದ್ಯೋಗಿಗಳಿಗೆ ಇದೇ 13ರಂದು ರಾತ್ರಿ ಔತಣಕೂಟ ಆಯೋಜಿಸಿದ್ದಾರೆ.

ಮುಖ್ಯಾಂಶಗಳು
- 'ಕೈ' ಪಾಳಯದಲ್ಲಿ ಚಟುವಟಿಕೆ ಚುರುಕು
- ಸಿ.ಎಂ ಗೃಹಕಚೇರಿಯಲ್ಲಿ 13ರಂದು ಔತಣಕೂಟ



ಈ ಔತಣಕೂಟದ ಕುರಿತು ಮುಖ್ಯಮಂತ್ರಿ ಸಚಿವಾಲಯದಿಂದ ಎಲ್ಲ ಸಚಿವರಿಗೆ ಸಂದೇಶ ರವಾನಿಸಲಾಗಿದೆ ಎಂದು ಗೊತ್ತಾಗಿದೆ.

ಸರ್ಕಾರಕ್ಕೆ ಎರಡೂವರೆ ವರ್ಷ ಪೂರ್ಣಗೊಳ್ಳುತ್ತಿದ್ದಂತೆ ಸಂಪುಟ ಪುನರ್‌ರಚನೆ ಮಾಡುವಂತೆ ಹೈಕಮಾಂಡ್ ಸೂಚಿಸಿದೆ. ಸಚಿವರ ಪೈಕಿ 10ರಿಂದ 15 ಮಂದಿಯನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡಲು ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ನಡೆದಿದೆ.

ಸಚಿವರಾಗಿದ್ದ ಬಿ. ನಾಗೇಂದ್ರ ಮತ್ತು ಕೆ.ಎನ್. ರಾಜಣ್ಣ ಅವರ ರಾಜೀನಾಮೆಯಿಂದ ತೆರವಾಗಿರುವ ಸ್ಥಾನಗಳನ್ನು ಭರ್ತಿ ಮಾಡುವ ಜೊತೆಗೆ, ಹಾಲಿ ಕೆಲವು ಸಚಿವರನ್ನು ಕೈಬಿಟ್ಟು ಆಕಾಂಕ್ಷಿಗಳಿಗೆ ಸ್ಥಾನ ನೀಡಲು ಮುಖ್ಯಮಂತ್ರಿ ಕೂಡಾ ಒಲವು ಹೊಂದಿದ್ದಾರೆ. ಬುಧವಾರ ಈ ಬಗ್ಗೆ ಚರ್ಚೆ ನಡೆದಿದೆ ಎಂದು ಮೂಲಗಳು ಹೇಳಿವೆ.

ಬಿಹಾರ ವಿಧಾನಸಭೆ ಚುನಾವಣೆಯ ಫಲಿತಾಂಶ ನ. 14ರಂದು ಹೊರಬೀಳಲಿದೆ. ಡಿಸೆಂಬರ್ ತಿಂಗಳಲ್ಲಿ ರಾಜ್ಯ ವಿಧಾನಮಂಡಲ ಅಧಿವೇಶನ ಬೆಳಗಾವಿಯಲ್ಲಿ ನಡೆಯಲಿದೆ. ಇದರ ನಡುವೆ ಸಂಪುಟ ಪುನರ್ ರಚನೆಯಾಗುವ ಸಾಧ್ಯತೆಯಿದೆ ಎಂದು ಕಾಂಗ್ರೆಸ್ ಮುಖಂಡರೊಬ್ಬರು ಹೇಳಿದರು.

ಎಲ್ಲ ಸಚಿವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದಿನ ಹೆಜ್ಜೆ ಇಡಲು ಮುಖ್ಯಮಂತ್ರಿ ಮುಂದಾಗಿದ್ದಾರೆ. ದೀಪಾವಳಿ ನೆಪದಲ್ಲಿ ಸಚಿವರನ್ನು ಔತಣಕೂಟಕ್ಕೆ ಆಹ್ವಾನಿಸಲಿರುವ ಮುಖ್ಯಮಂತ್ರಿ, ರಾಜ್ಯ ರಾಜಕೀಯ ವಿದ್ಯಮಾನಗಳೂ ಸೇರಿದಂತೆ ಎಲ್ಲ ವಿಚಾರಗಳ ಕುರಿತು ಚರ್ಚೆ ನಡೆಸುವ ಸಾಧ್ಯತೆಯಿದೆ.

ಎಚ್‌ಡಿಕೆ ವಿರುದ್ಧದ ಭೂ ಒತ್ತುವರಿ ಆರೋಪ: ಸಮಗ್ರ ವರದಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡದಿ ಹೋಬಳಿಯ ಕೇತಗಾನಹಳ್ಳಿ ವ್ಯಾಪ್ತಿಯಲ್ಲಿ 6 ಎಕರೆ 6 ಗುಂಟೆ ಸರ್ಕಾರಿ ಜಮೀನು ಒತ್ತುವರಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧದ ಪ್ರಕರಣದಲ್ಲಿ ಸಮಗ್ರ ವರದಿ ಸಲ್ಲಿಸುವಂತೆ ರಾಮನಗರ ಜಿಲ್ಲಾಧಿಕಾರಿಗೆ ಹೈಕೋರ್ಟ್ ಆದೇಶಿಸಿದೆ.



ಕುಮಾರಸ್ವಾಮಿ

ಒತ್ತುವರಿ ಆರೋಪದ ತನಿಖೆಗೆ ಎಸ್‌ಐಟಿ (ವಿಶೇಷ ತನಿಖಾ ತಂಡ) ರಚಿಸಿದ ಆದೇಶಕ್ಕೆ ಏಕಸದಸ್ಯ ನ್ಯಾಯಪೀಠ ನೀಡಿದ್ದ ಮಧ್ಯಂತರ ತಡೆ ಆದೇಶ ತೆರವುಗೊಳಿಸುವಂತೆ ಕೋರಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ರಾಮನಗರ ತಹಶೀಲ್ದಾರ್ ಸಲ್ಲಿಸಿರುವ ರಿಟ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಈ ಪ್ರಕರಣದಲ್ಲಿ ಪ್ರತಿವಾದಿ ಎಚ್.ಡಿ.ಕುಮಾರಸ್ವಾಮಿ ಹೊಂದಿರುವ 22 ಎಕರೆ ಜಮೀನಿನಲ್ಲಿ 6 ಎಕರೆ 6 ಗುಂಟೆ ಸರ್ಕಾರಿ ಜಮೀನು ಒತ್ತುವರಿ ಮಾಡಿದ ಆರೋಪವಿದೆ' ಎಂದು ಪುನರುಚ್ಚರಿಸಿದರು.


ಇದಕ್ಕೆ ಪ್ರತಿಯಾಗಿ ಎಚ್.ಡಿ.ಕುಮಾರಸ್ವಾಮಿ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಅವರು, 'ಇದೊಂದು ರಾಜಕೀಯ ಪ್ರೇರಿತ ದೂರು. ದೂರುದಾರ ಜಿ.ಮಾದೇಗೌಡ (ದಿವಂಗತ) ಕುಮಾರಸ್ವಾಮಿ ಅವರ ರಾಜಕೀಯ ಎದುರಾಳಿಯಾಗಿದ್ದವರು. ನಮ್ಮ ಅರ್ಜಿದಾರರು ಹೊಂದಿರುವ ಜಮೀನು ಶುದ್ಧ ಕ್ರಯಪತ್ರ ಹೊಂದಿದೆ. ಒತ್ತುವರಿ ಆಗಿದೆ ಎಂದಾಗಿದ್ದರೆ ಯಾವತ್ತೋ ಅದನ್ನು ಬಿಟ್ಟುಕೊಟ್ಟಿರುತ್ತಿದ್ದರು' ಎಂದರು.

▶2B

ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸೀಫ್ ಹೇಳಿಕೆ

'ಯುದ್ಧದ ಸಾಧ್ಯತೆ ನಿಜ'

ಇಸ್ಲಾಮಾಬಾದ್ (ಪಿಟಿಐ): 'ಭಾರತದೊಂದಿಗೆ ಯುದ್ಧದ ಸಾಧ್ಯತೆ ಇರುವುದು ನಿಜ' ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸೀಫ್ ಹೇಳಿದ್ದಾರೆ.



ಖ್ವಾಜಾ ಆಸೀಫ್

ಮಂಗಳವಾರ ಸಮಾ ಟಿವಿಗೆ ನೀಡಿದ ಸಂದರ್ಶನದಲ್ಲಿ, 'ಭವಿಷ್ಯದಲ್ಲಿ ಭಾರತದೊಂದಿಗೆ ಮತ್ತೊಮ್ಮೆ ಶಸ್ತ್ರಾಸ್ತ್ರ ಸಂಘರ್ಷ ಎದುರಾದರೆ ನಮ್ಮ ದೇಶವು ಅದರಲ್ಲಿ ದೊಡ್ಡಮಟ್ಟದ ಯಶಸ್ಸು ಸಾಧಿಸುತ್ತದೆ' ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಪಾಕಿಸ್ತಾನಕ್ಕೆ 6 ತಿಂಗಳ ಹಿಂದೆ ಇರುವುದಕ್ಕಿಂತಲೂ ಈಗ ಹೆಚ್ಚಿನ ಸಂಖ್ಯೆಯ ಬೆಂಬಲಿಗರಿದ್ದಾರೆ. ಆದರೆ, ಭಾರತವು ಮೇ ಸಂಘರ್ಷದ ನಂತರ ಹಲವು ದೇಶಗಳ ಬೆಂಬಲವನ್ನು ಕಳೆದುಕೊಂಡಿದೆ' ಎಂದು ಅವರು ಅಮೆರಿಕದ ಹೆಸರು ಉಲ್ಲೇಖಿಸದೇ ಹೇಳಿದ್ದಾರೆ.

'ಮತ್ತೊಮ್ಮೆ ಶಸ್ತ್ರಾಸ್ತ್ರ ಸಂಘರ್ಷದ ಸಾಧ್ಯತೆ ಇರುವುದರಿಂದ ಪಾಕಿಸ್ತಾನವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದೆ. ಸಂಘರ್ಷ ಉಲ್ಬಣಗೊಳ್ಳುವುದು ನಮಗೆ ಬೇಕಿಲ್ಲ. ಆದರೆ, ಯುದ್ಧದ ಸಾಧ್ಯತೆ ಇರುವುದಂತೂ ನಿಜ. ಇದನ್ನು ನಾನು ಅಲ್ಲಗಳೆಯುವುದಿಲ್ಲ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

'ಮೊಘಲ್ ದೊರೆ ಔರಂಗಜೇಬನ ಅಲ್ಪ ಅವಧಿ ಹೊರತುಪಡಿಸಿ, ಭಾರತವು ಎಂದಿಗೂ ಏಕೀಕೃತ ದೇಶವಾಗಿರಲಿಲ್ಲ. ಆದರೆ, ಪಾಕಿಸ್ತಾನವು ಅಲ್ಲಾಹುವಿನ ಹೆಸರಿನಲ್ಲಿ ಸೃಷ್ಟಿಯಾಗಿದೆ ಮತ್ತು ಹಲವು ಆಂತರಿಕ ಸಮಸ್ಯೆಗಳಿದ್ದರೂ ಮೇ ಸಂಘರ್ಷದ ನಂತರ ಒಗ್ಗಟ್ಟಾಗಿದೆ. 'ನಮ್ಮ ತವರಿನಲ್ಲಿ ನಾವು ಪರಸ್ಪರ ವಾದಿಸುತ್ತೇವೆ ಮತ್ತು ಸ್ಪರ್ಧಿಸುತ್ತೇವೆ. ಆದರೆ, ಭಾರತದೊಂದಿಗೆ ಹೋರಾಟ ಮಾಡಬೇಕಾಗಿ ಬಂದಾಗ ನಾವು ಒಂದಾಗುತ್ತೇವೆ' ಎಂದು ಹೇಳಿದ್ದಾರೆ.

ಭಾರತದ ಸೇನಾ ಮುಖ್ಯಸ್ಥರಾದ ಜನರಲ್ ಉಪೇಂದ್ರ ದ್ವಿವೇದಿ ಅವರು, 'ಮತ್ತೆ ದುಸ್ಸಾಹಸಗಳಿಗೆ ಕೈ ಹಾಕದಂತೆ' ಪಾಕಿಸ್ತಾನಕ್ಕೆ ಇತ್ತೀಚೆಗೆ ಎಚ್ಚರಿಕೆ ನೀಡಿದ ಬೆನ್ನಲ್ಲೇ, ಖ್ವಾಜಾ ಪ್ರತಿಕ್ರಿಯೆ ಹೊರಬಿದ್ದಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ

ಎಸ್‌ಆರ್‌ಎಂ ವಿ.ವಿಗೆ ಡೈಮಂಡ್ ಮಾನ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ಎಸ್‌ಆರ್‌ಎಂ ವಿಶ್ವವಿದ್ಯಾಲಯವು ಕ್ಯುಎಸ್‌ಐ ಗೇಜ್ ಡೈಮಂಡ್ ರೇಟಿಂಗ್ ಮಾನ್ಯತೆಯನ್ನು ಪಡೆದುಕೊಂಡಿದೆ. ಸಂಸ್ಥೆಯ ಪಠ್ಯಕ್ರಮ, ಸಂಶೋಧನೆ, ನಾವೀನ್ಯ, ಒಟ್ಟಾರೆ ಸಾಧನೆ ಪರಿಗಣಿಸಿ ಡೈಮಂಡ್ ರೇಟಿಂಗ್ ಮಾನ್ಯತೆ ನೀಡಲಾಗಿದೆ.

ವಿಶ್ವವಿದ್ಯಾಲಯದ ಅತ್ಯಾಧುನಿಕ ಸೌಲಭ್ಯಗಳಿಗೆ ಪ್ಲಾಟಿನಂ ರೇಟಿಂಗ್ ದೊರೆತಿದೆ. ಉದ್ಯೋಗಾವಕಾಶ, ಪಠ್ಯಕ್ರಮ, ಕಲಿಕೆ, ಸಂಶೋಧನೆ, ವೈವಿಧ್ಯ, ಪ್ರವೇಶ ಇತ್ಯಾದಿ ಕ್ರಮಗಳು ಗೋಲ್ಡ್ ರೇಟಿಂಗ್ ಮಾನ್ಯತೆ ಪಡೆದುಕೊಂಡಿವೆ. ಸಂಸ್ಥೆಯ ಆಡಳಿತ ಕ್ರಮಗಳು ಸಿಲ್ವರ್ ರೇಟಿಂಗ್‌ಗೆ ಭಾಜನವಾಗಿವೆ.

'ಕ್ಯುಎಸ್‌ಐ ಗೇಜ್ ಮೌಲ್ಯಮಾಪನವು ಎಸ್‌ಆರ್‌ಎಂಎಪಿ ವಿಶ್ವವಿದ್ಯಾಲಯದ ಸಾಮರ್ಥ್ಯ ಹಾಗೂ ಹೂಡಿಕೆ ವಲಯಗಳ ಮಹತ್ವವನ್ನು ಪರಿಗಣಿಸಿದೆ. ಶೈಕ್ಷಣಿಕ ಕ್ಷೇತ್ರದಲ್ಲಿನ ಸ್ಪರ್ಧಾತ್ಮಕತೆಯನ್ನು ಬಲಪಡಿಸಲು ಈ ರೇಟಿಂಗ್‌ಗಳು ಸಹಕಾರಿಯಾಗಲಿವೆ' ಎಂದು ಡೀನ್ ಕಾರ್ತಿಕ್ ರಾಜೇಂದ್ರನ್ ತಿಳಿಸಿದ್ದಾರೆ.

'ವಿಶ್ವವಿದ್ಯಾಲಯದ ಶ್ರೇಷ್ಠತೆಯ ಸಂಸ್ಕೃತಿಯನ್ನು ಕ್ಯುಎಸ್‌ಐ ಡೈಮಂಡ್ ರೇಟಿಂಗ್ ಪ್ರತಿಬಿಂಬಿಸಿದೆ. ಈ ಮಾನ್ಯತೆಯು ಜ್ಞಾನವನ್ನು ವೃದ್ಧಿಸಿ ನಾವೀನ್ಯ ಬೆಳೆಸುವ ಮತ್ತು ವಿಶ್ವ ದರ್ಜೆಯ ಉನ್ನತ ಶಿಕ್ಷಣದ ಕೇಂದ್ರವಾಗಿ ಶೈಕ್ಷಣಿಕ ಕ್ಷೇತ್ರದ ಬೆಳವಣಿಗೆಗೆ ಕೊಡುಗೆ ನೀಡುವ ವಿಶ್ವವಿದ್ಯಾಲಯದ ಸಂಕಲ್ಪ ಬಲಪಡಿಸಲಿದೆ' ಎಂದು ಪ್ರಭಾರ ಕುಲಪತಿ ಸಿ.ಎಚ್.ಸತೀಶ್ ಕುಮಾರ್ ತಿಳಿಸಿದ್ದಾರೆ.

'ಕಸ ನಿರ್ವಹಣೆ: ಇರಲಿ ನಾಗರಿಕ ಪ್ರಜ್ಞೆ'

ಸಾರ್ವಜನಿಕರ ಸಹಕಾರವಿಲ್ಲದೆ ಸರ್ಕಾರ ಏನೂ ಮಾಡಲು ಸಾಧ್ಯವಿಲ್ಲ: ಡಿಸಿಎಂ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರವನ್ನು ಸ್ವಚ್ಛವಾಗಿ ಇರಿಸಲು ನಾಗರಿಕ ಪ್ರಜ್ಞೆ ಬಹಳ ಮುಖ್ಯ. ತ್ಯಾಜ್ಯ ನಿರ್ವಹಣೆಯಲ್ಲಿ ಸಾರ್ವಜನಿಕರ ಸಹಕಾರವಿಲ್ಲದಿದ್ದರೆ ಏನೂ ಮಾಡಲು ಸಾಧ್ಯವಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಹಾಗೂ ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿಯ (ಬಿಪ್ಯಾಕ್) ಸಹಯೋಗದಲ್ಲಿ ಬುಧವಾರ ನಡೆದ 'ಬೆಂಗಳೂರು ಅಭಿವೃದ್ಧಿ, ಪರಿವರ್ತನೆ' ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

'ಬೆಂಗಳೂರಿನ ಜನರಲ್ಲಿ ಒಂದು ವರ್ಗ ಬೆಂಗಳೂರನ್ನು ಜಾಗತಿಕ ನಗರವನ್ನಾಗಿ ನೋಡಿದರೆ, ಮತ್ತೆ ಕೆಲವು ವರ್ಗದವರಿಗೆ ಜ್ಞಾನವೇ ಇಲ್ಲ. ಕೆಲವರು ವಾಹನದಲ್ಲಿ ಕಸ ತಂದು ರಸ್ತೆಯಲ್ಲಿ ಹಾಕಿ ಹೋಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಏನು ಮಾಡಲು ಸಾಧ್ಯ?. ಹೀಗಾಗಿ ಜನರಲ್ಲಿ ನಾಗರಿಕ ಪ್ರಜ್ಞೆ ಬಹಳ ಮುಖ್ಯ' ಎಂದರು.

'ಹೊರ ವಲಯದಲ್ಲಿ ದೊಡ್ಡ ಪ್ರಮಾಣದಲ್ಲಿ ಕಟ್ಟಡ ತ್ಯಾಜ್ಯ ಸುರಿಯುತ್ತಿದ್ದಾರೆ. ಹೀಗಾಗಿ ಈ ರೀತಿ ಕಸ ಎಸೆಯುವ ಎಲ್ಲಾ ವಾಹನ ಮಾಲೀಕರಿಗೆ ನೋಟಿಸ್ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಎರಡೂವರೆ ವರ್ಷಗಳಿಂದ ಕಸ ವಿಲೇವಾರಿ ವಿಚಾರದಲ್ಲಿ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇನೆ. ಆದರೆ ಕಸದ ಮಾಫಿಯಾ ಪ್ರಯತ್ನವನ್ನು ತಡೆಯುತ್ತಿದೆ. ನ್ಯಾಯಾಲಯದಲ್ಲಿ ಪಿಐಎಲ್ ಹಾಕಿ ನಮ್ಮನ್ನು ತಡೆಯುತ್ತಿದ್ದಾರೆ' ಎಂದು ಹೇಳಿದರು.

'ನಮಗೆ ಹಸಿರು ಹಾಗೂ ಸ್ವಚ್ಛ ಬೆಂಗಳೂರು ಬೇಕು. ಆದರೆ ಪ್ರತಿ ಮನೆಯಲ್ಲಿ ಎರಡು ಮೂರು ವಾಹನಗಳಿವೆ. ಮನೆಯೊಳಗೆ ನಿಲ್ಲಿಸಲು ಜಾಗವಿಲ್ಲ ಎಂದು ರಸ್ತೆಯಲ್ಲಿ ನಿಲ್ಲಿಸಿದ್ದಾರೆ' ಎಂದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸಂಪನ್ಮೂಲ ಕ್ರೋಡೀಕರಣ ಹೇಗೆ ಎಂದು ಪ್ರಶ್ನಿಸಿದಾಗ, 'ಕೆಲವು ಪ್ರದೇಶಗಳಲ್ಲಿ ಬೂಟ್ ಮಾದರಿ (ನಿರ್ಮಾಣ ಕಾರ್ಯಾಚರಣೆ– ವರ್ಗಾವಣೆ) ಅಳವಡಿಸಿಕೊಂಡಿದ್ದೇವೆ. ₹1.25 ಲಕ್ಷ ಕೋಟಿ ಮೊತ್ತದ ಯೋಜನೆಗಳಿಗೆ ಮುಂದಾಗಿದ್ದೇವೆ. ಟನಲ್ ರಸ್ತೆಗೆ ಸುಮಾರು ₹40 ಸಾವಿರ ಕೋಟಿ, ಮೇಲ್ಸೇತುವೆಗೆ ಸುಮಾರು ₹14 ಸಾವಿರ ಕೋಟಿ, ಡಬಲ್ ಡೆಕರ್ ರಸ್ತೆಗೆ ₹10 ಸಾವಿರ ಕೋಟಿ, ಬಫರ್ ಜೋನ್ ರಸ್ತೆಗೆ ₹4 ಸಾವಿರ ಕೋಟಿ ಅನುದಾನದ ಅಗತ್ಯವಿದೆ' ಎಂದು ಶಿವಕುಮಾರ್ ಹೇಳಿದರು.

ಪತ್ರಕರ್ತೆ ಮಾಯಾ ಶರ್ಮಾ ಸಂವಾದ ನಡೆಸಿಕೊಟ್ಟರು. ಶಾಸಕ ರಿಜ್ವಾನ್ ಅರ್ಷದ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಬಿ.ಪ್ಯಾಕ್ ಸಿಇಒ ರೇವತಿ ಅಶೋಕ್ ಉಪಸ್ಥಿತರಿದ್ದರು.

'ದೆಹಲಿ ಮನೆ ಮುಂದೆ 70 ಗುಂಡಿಗಳಿವೆ'

'ಬೆಂಗಳೂರಿನ ರಸ್ತೆಗುಂಡಿ ವಿಚಾರವಾಗಿ ಸಾಕಷ್ಟು ಟೀಕೆ ಮಾಡುತ್ತಾರೆ. ಆದರೆ ದೆಹಲಿಯಲ್ಲಿರುವ ನನ್ನ ಮನೆ ಮುಂದಿನ ರಸ್ತೆಯಲ್ಲಿ 100 ಮೀಟರ್ ವ್ಯಾಪ್ತಿಯಲ್ಲೇ 70 ರಸ್ತೆ ಗುಂಡಿಗಳಿವೆ. ಆದರೂ ದೆಹಲಿ ಹಾಗೂ ಇತರೆ ನಗರಗಳಲ್ಲಿರುವ ರಸ್ತೆ ಗುಂಡಿಗಳು ಸುದ್ದಿಯಾಗುವುದಿಲ್ಲ' ಎಂದು ಡಿ.ಕೆ. ಶಿವಕುಮಾರ್ ಬೇಸರ ವ್ಯಕ್ತಪಡಿಸಿದರು.

'ನಾನು ಟೀಕೆಗಳನ್ನು ಸ್ವಾಗತಿಸುತ್ತೇನೆ. ರಾಜಕಾರಣಿಗಳು ಟೀಕೆಗಳಿಗೆ ಹೆದರಬಾರದು. ಜನರ ಧ್ವನಿಯನ್ನು ಆಲಿಸಬೇಕು. ಜನ ಟೀಕೆ ಮಾಡಿದಾಗ ಮಾತ್ರ ನಾವು ನಮ್ಮ ತಪ್ಪು ತಿದ್ದಿಕೊಳ್ಳಲು ಸಾಧ್ಯ. ಇಡೀ ದೇಶದಲ್ಲಿ ಯಾವುದೇ ನಗರದ ಸಚಿವರು ತಮ್ಮ ಸಾರ್ವಜನಿಕರಿಗೆ ಕರೆ ನೀಡಿ ರಸ್ತೆ ಗುಂಡಿ, ಕಸ ಬಗ್ಗೆ ಮಾಹಿತಿ ನೀಡಿ ಎಂದು ಅವಕಾಶ ಕಲ್ಪಿಸಿಕೊಟ್ಟಿದ್ದಾರಾ? ಆ ಕೆಲಸವನ್ನು ನಾನು ಮಾಡಿದ್ದೇನೆ' ಎಂದರು.



ಮೌಂಟ್ ಕಾರ್ಮಲ್ ಕಾಲೇಜಿನಲ್ಲಿ ಆಯೋಜಿಸಿದ್ದ 'ಬೆಂಗಳೂರು ಅಭಿವೃದ್ಧಿ, ಪರಿವರ್ತನೆ' ಕುರಿತ ಸಂವಾದದಲ್ಲಿ ಡಿ.ಕೆ. ಶಿವಕುಮಾರ್ ಭಾಗವಹಿಸಿದ್ದರು

ಪ್ರಶ್ನೆಗಳಿಗೆ ಡಿಸಿಎಂ ಉತ್ತರ

- ಪರಿಣಾಮಕಾರಿ ಆಡಳಿತ, ಪರಿಣಾಮಕಾರಿ ಸೇವೆ, ಸಮನ್ವಯತೆ ಸಾಧಿಸುವ ಉದ್ದೇಶದಿಂದ ಜಿಬಿಎ ಅಸ್ತಿತ್ವಕ್ಕೆ ತರಲಾಗಿದೆ
- ಐದು ಪಾಲಿಕೆಗಳ ಚುನಾವಣೆಯಲ್ಲಿ ಶೇ 50ರಷ್ಟು ಟಿಕೆಟ್ ಅನ್ನು ಮಹಿಳೆಯರಿಗೆ ನೀಡಲಾಗುವುದು
- ಜನರು ವಾರ್ಡ್ ಮಟ್ಟದ ಅಧಿಕಾರಿಗಳ ಜೊತೆ ಸಂಪರ್ಕ ಹೊಂದಿರಬೇಕು. ಅವರನ್ನು ಪ್ರಶ್ನೆ ಮಾಡುವಂತಿರಬೇಕು. ಜನರು ಸಂತೋಷವಾಗಿದ್ದರೆ ನಾವೂ ಸಂತೋಷವಾಗಿರುತ್ತೇವೆ
- ಭ್ರಷ್ಟಾಚಾರ ನಿಯಂತ್ರಿಸಿ ಪಾರದರ್ಶಕ ವ್ಯವಸ್ಥೆ ಜಾರಿಗೆ ತರಲು ಅನೇಕ ಕ್ರಮ ಕೈಗೊಳ್ಳಲಾಗಿದೆ
- ಸಾರ್ವಜನಿಕ ಸಾರಿಗೆಗೆ ಎಷ್ಟು ವಾಹನ ಸೇರಿಸಬೇಕು? ಒಂದು ಸಾವಿರ ಸಾಕೆ? ನಾನು ಸೇರಿಸಲು ಸಿದ್ಧ. ಜನರೆಲ್ಲರೂ ಬಸ್‌ನಲ್ಲಿ ಪ್ರಯಾಣ ಆರಂಭಿಸುತ್ತಾರಾ? ಟನಲ್ ಹೊರತಾಗಿ ಪರ್ಯಾಯ ಪರಿಹಾರ ಏನಿದೆ?
- ಸುರಂಗ ರಸ್ತೆಗೆ ನಾಲ್ಕು ವರ್ಷಕ್ಕಿಂತ ಹೆಚ್ಚಿನ ಸಮಯ ಬೇಕು. ಕೊರೆಯುವ ಯಂತ್ರ ಬರಲು ಒಂದೂವರೆ ವರ್ಷ ಬೇಕಾಗುತ್ತದೆ. ಸುರಂಗ ರಸ್ತೆಯಿಂದ ಲಾಲ್‌ಬಾಗ್‌ಗೆ ಯಾವುದೇ ತೊಂದರೆ ಆಗುವುದಿಲ್ಲ. ಅದರ ಮಹತ್ವದ ಅರಿವಿದೆ
- ದೇಶಕ್ಕೆ ಸಂವಿಧಾನ, ಸ್ವಾತಂತ್ರ್ಯ ಕೊಟ್ಟ ಪಕ್ಷ ಕಾಂಗ್ರೆಸ್. ಈ ದೇಶದಲ್ಲಿ ಕಾಂಗ್ರೆಸ್ ಸರ್ಕಾರ ತಂದಿರುವ ಕಾನೂನು, ಯೋಜನೆಗಳನ್ನು ಯಾವುದೇ ಸರ್ಕಾರಗಳು ಬದಲಾಯಿಸಲು ಸಾಧ್ಯವಾಗಿಲ್ಲ
- ಮೆಟ್ರೊ ರೈಲು ಬೋಗಿಗಳನ್ನು ಕೆಲವು ಸಂಸ್ಥೆಗಳು ರಾಜ್ಯದಲ್ಲೇ ಉತ್ಪಾದನೆ ಮಾಡಲು ಮುಂದಾಗಿದ್ದು, ಆ ಬಗ್ಗೆ ಗಮನಹರಿಸುತ್ತಿದ್ದೇವೆ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ



ನಿಶ್ಚಲಾನಂದನಾಥ ಸ್ವಾಮೀಜಿ

ಬೆಂಗಳೂರು: ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನವು ಜೈಸ್ ಸಂಸ್ಥೆಯ ಸಹಯೋಗದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ಆರಂಭಿಸಲಿದೆ.

ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ ಮಾರ್ಗದರ್ಶನದಲ್ಲಿ ನಡೆಯುವ ಕೇಂದ್ರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಕೆಂಗೇರಿ ಮಠದ ಅಧ್ಯಕ್ಷರಾಗುವ ಮುನ್ನ ಎಚ್.ಎಲ್. ನಾಗರಾಜ್ ಹಿರಿಯ ಕೆಎಎಸ್ ಅಧಿಕಾರಿಗಳಾಗಿ ಮಂಡ್ಯ, ಮೈಸೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಎರಡು ದಶಕಗಳ ಕಾಲ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. ಕೆಂಗೇರಿಯಲ್ಲಿರುವ ಮಠದ ಆವರಣದಲ್ಲಿಯೇ ವಸತಿ ವ್ಯವಸ್ಥೆಯೊಂದಿಗೆ ಸುಮಾರು 300 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ ಎಂದು ನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದ್ದಾರೆ.

ಮಾಹಿತಿಗೆ 94807 83686 ಸಂಪರ್ಕಿಸುವಂತೆ ಕೋರಲಾಗಿದೆ.

ಧರ್ಮಸ್ಥಳ ಪ್ರಕರಣ: ಇಂದು ಜನಾಗ್ರಹ ದಿನ

ಬೆಂಗಳೂರು: ಧರ್ಮಸ್ಥಳ ದೌರ್ಜನ್ಯ ವಿರೋಧಿ ವೇದಿಕೆ ಅ.9ರಂದು ನ್ಯಾಯಕ್ಕಾಗಿ ಜನಾಗ್ರಹ ದಿನ ಹಮ್ಮಿಕೊಂಡಿದೆ.

ರಾಜ್ಯದ ಹಲವೆಡೆ ಒಂದೇ ದಿನ 60 ಕಡೆಗಳಲ್ಲಿ ಜನಾಗ್ರಹ ಸಭೆ, ಪತ್ರ ಸಲ್ಲಿಕೆ, ಸಮಾವೇಶ, ಪ್ರತಿಭಟನೆ, ಭಿತ್ತಿಪತ್ರ ಪ್ರದರ್ಶನ, ಕ್ಯಾಂಡಲ್ ಲೈಟ್ ಪ್ರದರ್ಶನಗಳು ನಡೆಯಲಿವೆ.

'ಧರ್ಮಸ್ಥಳದ ಅಸಹಜ ಸಾವುಗಳು, ಕೊಲೆ ಅತ್ಯಾಚಾರ, ಭೂಕಬಳಿಕೆಯ ವಿರುದ್ಧ 1980ರಿಂದ ಹೋರಾಟ ನಡೆಯುತ್ತಿದೆ. ಸೌಜನ್ಯ ಪ್ರಕರಣ ನಡೆದು 13 ವರ್ಷಗಳಾಗಿರುವ ಹಿನ್ನೆಲೆಯಲ್ಲಿ ಮೊದಲ ಬಾರಿಗೆ ರಾಜ್ಯಾದ್ಯಂತ ಒಂದೇ ದಿನದಲ್ಲಿ ಗ್ರಾಮ ಗ್ರಾಮಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಸಾಂಸ್ಕೃತಿಕ ಮುನ್ನೋಟ

'ಬೆಗ್ ಬಾರೋ ಅಳಿಯ' ಹಾಸ್ಯ ನಾಟಕ



'ಬೆಗ್ ಬಾರೋ ಅಳಿಯ' ನಾಟಕದ ದೃಶ್ಯ

ಬೆಂಗಳೂರು: ಪ್ರವರ ಥಿಯೇಟರ್ ಇದೇ 11ರಂದು ಸಂಜೆ 5.15 ಮತ್ತು 7.30ಕ್ಕೆ ಬನಶಂಕರಿ 2ನೇ ಹಂತದಲ್ಲಿರುವ ಸುಚಿತ್ರ ಫಿಲ್ಮ್ ಸೊಸೈಟಿಯ ನಾಣಿ ಅಂಗಳದಲ್ಲಿ 'ಬೆಗ್ ಬಾರೋ ಅಳಿಯ' ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಈ ನಾಟಕವನ್ನು ಎಂ.ಎಸ್. ನರಸಿಂಹಮೂರ್ತಿ ರಚಿಸಿದ್ದು, ಹನು ರಾಮಸಂಜೀವ ನಿರ್ದೇಶಿಸಿದ್ದಾರೆ. ಈ ಹಾಸ್ಯ ನಾಟಕವು 'ವಸುಧೈವ ಕುಟುಂಬಕಂ' ತತ್ತ್ವದ ಮೇಲೆ ರೂಪಗೊಂಡಿದೆ. ಅವಿಭಕ್ತ ಕುಟುಂಬದ ಮಹತ್ವ ಮತ್ತು ಇತ್ತೀಚಿನ ದಿನಗಳಲ್ಲಿ ವರಾನ್ವೇಷಣೆ ನಡೆಯುವ ಪರಿ, ಮನೆಯವರ ಬೇಡಿಕೆಗಳು, ಬೇಡಿಕೆಗೆ ಕಾರಣಗಳೇನು ಎಂಬುದನ್ನು ಅತ್ಯಂತ ಮನರಂಜನಾತ್ಮಕವಾಗಿ ಪ್ರಸ್ತುತ ಪಡಿಸುತ್ತದೆ.

ಟಿಕೆಟ್‌ಗಳು www.pravaratheatre.orgಯಲ್ಲಿ ಲಭ್ಯವೆಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9686869676

'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗ ತಂಡವು ಇದೇ 11ರಂದು ಸಂಜೆ 7.30ಕ್ಕೆ ಎನ್.ಆರ್. ಕಾಲೊನಿಯಲ್ಲಿರುವ ಡಾ.ಸಿ.ಅಶ್ವತ್ಥ ಕಲಾ ಭವನದಲ್ಲಿ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ. ಇದು ಹಾಸ್ಯ ನಾಟಕವಾಗಿದ್ದು, ರಾಜೇಂದ್ರ ಕಾರಂತ ರಚಿಸಿದ್ದಾರೆ. ಅಶೋಕ್ ಬಿ. ಅವರ ನಿರ್ದೇಶನದಲ್ಲಿ ಪ್ರದರ್ಶನ ಕಾಣಲಿದೆ.

ಭಟ್ ಆ್ಯಂಡ್ ಕಂಪನಿಯಲ್ಲಿ ಕೆಲಸ ಮಾಡುವ ಮುದ್ದಣ್ಣನಿಗೆ ತನ್ನ ಸ್ನೇಹಿತನಂತೆಯೇ ತಾನೂ ಪ್ರಮೋಷನ್ ಪಡೆಯಬೇಕೆಂಬ ಆಸೆಯಾಗುತ್ತದೆ. ತನ್ನ ಸ್ನೇಹಿತ ಪ್ರಮೋಷನ್ ಪಡೆಯಲು ಯಾವ ತಂತ್ರ ಬಳಸಿದನೊ ಅದೇ ತಂತ್ರವನ್ನು ಅವನು ಕೂಡ ಬಳಸಿ ಪ್ರಮೋಷನ್ ಪಡೆಯಲು ಮುಂದಾದಾಗ, ಅನೇಕ ಸಮಸ್ಯೆಗಳು ಎದುರಾಗುತ್ತವೆ. ಕೊನೆಗೆ ಮುದ್ದಣ್ಣ ಪ್ರಮೋಷನ್ ಪಡೆಯುವಲ್ಲಿ ಯಶಸ್ವಿಯಾಗುತ್ತಾನೊ ಇಲ್ಲವೊ ಎನ್ನುವುದು ನಾಟಕದ ವಿಷಯ ವಸ್ತುವಾಗಿದೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9945977184



'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕದ ದೃಶ್ಯ

'ಅಂಧಕ ಮೋಕ್ಷ' ಯಕ್ಷಗಾನ

ಬೆಂಗಳೂರು: ಕಲಾ ಕದಂಬ ಆರ್ಟ್ ಸೆಂಟರ್ ಇದೇ 12ರಂದು ಸಂಜೆ 4 ಗಂಟೆಗೆ ಕತ್ರಿಗುಪ್ಪೆಯ ಚೆನ್ನಮ್ಮನ ಕೆರೆ ಅಚ್ಚುಕಟ್ಟುವಿನಲ್ಲಿ ಇರುವ ಪರಂಪರ ಸಭಾಂಗಣದಲ್ಲಿ ಕಾಳಿಂಗ ನಾವಡ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಿದ್ದು, ಈ ಸಮಾರಂಭದ ಬಳಿಕ 'ಅಂಧಕ ಮೋಕ್ಷ' ಯಕ್ಷಗಾನ ಪ್ರದರ್ಶನ ಹಮ್ಮಿಕೊಂಡಿದೆ.

ಈ ಯಕ್ಷಗಾನ ಪ್ರಸಂಗವನ್ನು ಅಮೃತ ಸೋಮೇಶ್ವರ ರಚಿಸಿದ್ದಾರೆ. ಹಿಮ್ಮೇಳದಲ್ಲಿ ಸುಬ್ರಾಯ ಹೆಬ್ಬಾರ್, ಅಕ್ಷಯ್ ಆಚಾರ್, ಶ್ರೀನಿವಾಸ ಪ್ರಭು ಪಾಲ್ಗೊಳ್ಳಲಿದ್ದಾರೆ. ಮುಮ್ಮೇಳದಲ್ಲಿ ಅಂಬರೀಷ್ ಭಟ್, ಭರತ್ ಕಾರ್ಕಳ, ದಿನೇಶ್ ಕನ್ನಾರ್, ದೇವರಾಜ ಕರಬ, ವಿನಯ್ ಹೊಸ್ತೋಟ, ಶಶಿಕಾಂತ್ ಆಚಾರ್ಯ ಹಾಲಾಡಿ, ಪೂಜಾ ಆಚಾರ್ಯ, ನಿತ್ಯಾ ಗೌಡ ಹಾಗೂ ವರ್ಣ ಶೆಟ್ಟಿ ಅವರು ರಂಜಿಸಲಿದ್ದಾರೆ.

ಇದಕ್ಕೂ ಮೊದಲು ಯಕ್ಷಗಾನ ಭಾಗವತ ರಾಘವೇಂದ್ರ ಮಯ್ಯ ಹಾಲಾಡಿ ಅವರಿಗೆ ಈ ಸಾಲಿನ 'ಕಾಳಿಂಗ ನಾವಡ ಪ್ರಶಸ್ತಿ' ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

'ಕಿಶೋರ ಕನಕ' ಗಮಕ ಗಾಯನ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಇದೇ 12ರಂದು ಬೆಳಿಗ್ಗೆ 10 ಗಂಟೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿರುವ ಸುವರ್ಣ ಸಾಂಸ್ಕೃತಿಕ ಸಮುಚ್ಚಯದಲ್ಲಿ ಕಿಶೋರ ಕನಕ ಕಾವ್ಯ ಗಮಕ ಗಾಯನ ಸ್ಪರ್ಧೆ ಹಮ್ಮಿಕೊಂಡಿದೆ.

ಕನಕದಾಸರ ಕಾವ್ಯಗಳನ್ನು ಗಮಕ ಕಲೆ ಮೂಲಕ ಯುವಜನರಿಗೆ ತಲುಪಿಸುವ ಅಗತ್ಯವಿದೆ. ಆದ್ದರಿಂದ ಗಮಕ ಕಲೆಯನ್ನು ಪ್ರೋತ್ಸಾಹಿಸುವುದರ ಜತೆಗೆ, ಬಾಲ್ಯದಲ್ಲಿಯೇ ಅಭಿರುಚಿ ಬೆಳೆಸಲು 10ರಿಂದ 15 ವರ್ಷದೊಳಗಿನವರಿಗೆ ಈ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಕೇಂದ್ರದ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಐದು ಡಿಸಿಸಿಗೆ ಅಧ್ಯಕ್ಷರ ನೇಮಕ

ಬೆಂಗಳೂರು: ನಗರದ ಐದು ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಆದೇಶ ಹೊರಡಿಸಿದ್ದಾರೆ.

ಬೆಂಗಳೂರು ಪೂರ್ವ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಡಿ.ಕೆ. ಮೋಹನ್ ಬಾಬು, ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಹನುಮಂತ ರಾಯಪ್ಪ, ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಅಬ್ದುಲ್ ವಾಜಿದ್, ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಒ. ಮಂಜುನಾಥ್ ಹಾಗೂ ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಕೆ. ನಂದಕುಮಾರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಅಲೆಮಾರಿಗಳಿಗಾಗಿ ಹೋರಾಟ

ಪ್ರಜಾವಾಣಿ ಚಿತ್ರ



ಅಲೆಮಾರಿ ಸಮುದಾಯಗಳಿಗೆ ಶೇ 1ರಷ್ಟು ಪ್ರತ್ಯೇಕ ಮೀಸಲಾತಿ ನೀಡಬೇಕೆಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು

'ಉಗ್ರಪ್ಪ ಮಾತು ಕಾಂಗ್ರೆಸ್ ಗೊಂದಲಕ್ಕೆ ಸಾಕ್ಷಿ'

ಬೆಂಗಳೂರು: 'ಮತ್ತೊಬ್ಬರ ಅನ್ನದ ತಟ್ಟೆಗೆ ಕೈ ಹಾಕಬಾರದು ಎಂದು ಕಾಂಗ್ರೆಸ್ ನಾಯಕ ವಿ.ಎಸ್.ಉಗ್ರಪ್ಪ ಅವರು ಬಹಿರಂಗ ಸಭೆಯಲ್ಲೇ ಹೇಳಿದ್ದಾರೆ. ಇದು ಕಾಂಗ್ರೆಸ್ ಪಕ್ಷದಲ್ಲಿ ಜಾತಿವಾರು ಸಮೀಕ್ಷೆಯ ಕುರಿತ ಅಸಮಾಧಾನ ಮತ್ತು ಗೊಂದಲಕ್ಕೆ ಇರುವ ಸಾಕ್ಷಿ' ಎಂದು ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಹೇಳಿದ್ದಾರೆ.

ಜಾತಿ– ಜಾತಿಗಳ ಮಧ್ಯೆ ಇನ್ನಷ್ಟು ಕಂದಕ ಸೃಷ್ಟಿಸಬಾರದು ಎಂಬುದು ಎಚ್ಚರಿಕೆಯಾಗಿದೆ ಎಂದಿರುವ ಅವರು, 'ಸಿದ್ದರಾಮಯ್ಯ ಅವರು ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸಬಾರದು ಮತ್ತು ವಾಲ್ಮೀಕಿ ಸಮುದಾಯದ ಪಾಲು ಕಡಿಮೆ ಮಾಡಬಾರದು ಎಂಬ ಕೂಗು ಆಡಳಿತ ಪಕ್ಷದಿಂದಲೇ ಬಂದಿದೆ. ಸ್ವಂತ ಜಾತಿಯ ಹಿತ ಕಾಪಾಡುವುದಕ್ಕಾಗಿ ವಾಲ್ಮೀಕಿ ಸಮುದಾಯದ ಹಿತ ಬಲಿ ಕೊಡಬಾರದು' ಎಂದಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ
ಗುರುವಾರ, ಅಕ್ಟೋಬರ್ 9, 2025
prajavani.net prajavani www.prajavani.net



ಆಹಾರ ಬೇಟೆ...
ಪಶ್ಚಿಮ ಬಂಗಾಳದ ನಾದಿಯಾದಲ್ಲಿ ಬಿಳಿ ಕತ್ತಿನ ಮಿಂಚುಳ್ಳಿಯು ಓತಿಕ್ಯಾತವನ್ನು ಬೇಟೆಯಾಡಿದ ಕ್ಷಣವು ಸೆರೆಯಾಗಿದ್ದು ಹೀಗೆ



'ಯುದ್ಧ ನಿಲ್ಲಿಸಿ'
ಗಾಜಾದ ಮೇಲೆ ನಡೆಯುತ್ತಿರುವ ದಾಳಿಯನ್ನು ಖಂಡಿಸಿ ಸಿಪಿಐ ವತಿಯಿಂದ ಚೆನ್ನೈನಲ್ಲಿ ಬುಧವಾರ ಪ್ರತಿಭಟನೆ ನಡೆಯಿತು

ಎನ್‌ಡಿಎ: 15 ಕ್ಷೇತ್ರಗಳಿಗೆ ಮಾಂಝಿ ಪಟ್ಟು 5
ಮೂವರು ವಿಜ್ಞಾನಿಗಳಿಗೆ ರಸಾಯನ ವಿಜ್ಞಾನ ನೊಬೆಲ್ 8


12.54 ಲಕ್ಷ ಹೆಕ್ಟೇರ್ ಬೆಳೆ ಹಾನಿ

ನೈರುತ್ಯ ಮುಂಗಾರು: ರೈತರ ಪರಿಹಾರಕ್ಕೆ ₹2,000 ಕೋಟಿ–ಕೃಷ್ಣ ಬೈರೇಗೌಡ

ಪ್ರತಿ ಹೆಕ್ಟೇರ್‌ಗೆ ಪರಿಹಾರ ಎಷ್ಟು

₹17,000	ಮಳೆಯಾಶ್ರಿತ ಬೆಳೆ
₹25,500	ನೀರಾವರಿ ಬೆಳೆ
₹31,000	ದೀರ್ಘಕಾಲಿಕ ಬೆಳೆ

ಅತಿ ಹೆಚ್ಚು ಹಾನಿಯಾದ ಜಿಲ್ಲೆಗಳು (ಹಾನಿ ಹೆಕ್ಟೇರ್‌ಗಳಲ್ಲಿ)



ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಪ್ರವಾಹ ಪೀಡಿತ ಪ್ರದೇಶದ ರೈತರ ಬೆಳೆ ಹಾನಿಗೆ ಪರಿಹಾರ ಪಾವತಿಗಾಗಿ ₹2,000 ಕೋಟಿ ನಿಗದಿ ಮಾಡಲಾಗಿದ್ದು, 30 ದಿನಗಳ ಒಳಗೆ ರೈತರ ಖಾತೆಗಳಿಗೆ ಪರಿಹಾರದ ಮೊತ್ತ ಪಾವತಿ ಆಗಲಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ನೈರುತ್ಯ ಮುಂಗಾರು ಅವಧಿಯಲ್ಲಿ ಮಳೆ ಮತ್ತು ಪ್ರವಾಹದಿಂದಾಗಿ ಒಟ್ಟು 12.54 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆ ಹಾನಿಯಾಗಿದೆ. ಬೆಳೆ ಹಾನಿ ಕುರಿತು ಜಂಟಿ ಸಮೀಕ್ಷೆ ಪೂರ್ಣಗೊಳಿಸಿದ 9 ಜಿಲ್ಲೆಗಳಲ್ಲಿನ 5.29 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ಹಾನಿಗೆ ಮೊದಲ ಸುತ್ತಿನ ಪರಿಹಾರ ಪಾವತಿ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಸೆಪ್ಟೆಂಬರ್ ಮೊದಲ ವಾರದವರೆಗೆ ಸುರಿದ ಭಾರಿ ಮಳೆಯಿಂದಾಗಿ ಕೃಷಿ ಮತ್ತು ತೋಟಗಾರಿಕೆ ಬೆಳೆ ಪ್ರದೇಶಗಳು ಜಲಾವೃತಗೊಂಡು ಸುಮಾರು 5.29 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ಬೆಳೆ ನಷ್ಟವಾದ ಜಿಲ್ಲೆಗಳು ಜಂಟಿ ಸಮೀಕ್ಷೆ ಪೂರ್ಣಗೊಳಿಸಿ ಬೆಳೆ ಹಾನಿ ಪರಿಹಾರ ಪಾವತಿಗೆ ಸಿದ್ಧವಾಗಿದ್ದವು. ತದನಂತರ ಸೆಪ್ಟೆಂಬರ್ ತಿಂಗಳ ಕೊನೆಯಲ್ಲಿ ಸುರಿದ ಮಳೆ ಹಾಗೂ ಮಹಾರಾಷ್ಟ್ರ ಭಾಗದ ಜಲಾಶಯಗಳಿಂದ ಹೊರ ಹರಿಸಲಾದ ನದಿ ಪ್ರವಾಹದಿಂದ ಕಲಬುರಗಿ, ಯಾದಗಿರಿ, ಬೀದರ್ ಮತ್ತು ವಿಜಯಪುರ ಜಿಲ್ಲೆಗಳಲ್ಲಿ 7.24 ಲಕ್ಷ ಹೆಕ್ಟೇರ್ ಬೆಳೆ ನಷ್ಟಕ್ಕೆ ಕಾರಣವಾಯಿತು ಎಂದು ಹೇಳಿದ್ದಾರೆ.

ಈ ನಾಲ್ಕು ಜಿಲ್ಲೆಗಳ ಬೆಳೆ ಹಾನಿ ಜಂಟಿ ಸಮೀಕ್ಷೆಯನ್ನು ಪುನಃ ಮಾಡಬೇಕಾದ ಅಗತ್ಯವಿದೆ. ಬೆಳೆ ಹಾನಿ ಪ್ರದೇಶ ಪರಿಷ್ಕರಣೆ-ಗೊಳ್ಳಲಿದ್ದು, 7.24 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯ ಜಂಟಿ ಸಮೀಕ್ಷೆಯು ಪ್ರಗತಿಯಲ್ಲಿದೆ. 10 ದಿನಗಳಲ್ಲಿ ಬೆಳೆ ಹಾನಿ ಪರಿಹಾರ ಪಾವತಿಸಲಾಗುವುದು. ಒಟ್ಟಾರೆ 2025ರ ನೈರುತ್ಯ ಮುಂಗಾರಿನಲ್ಲಿ ಸುಮಾರು 12.54 ಲಕ್ಷ ಹೆಕ್ಟೇರ್ ಬೆಳೆ ಹಾನಿ ಆಗಿರುವುದು ಕಂಡು ಬಂದಿದೆ ಎಂದು ತಿಳಿಸಿದ್ದಾರೆ.

ರಾಜ್ಯ ಸರ್ಕಾರ ಪ್ರತಿ ಹೆಕ್ಟೇರ್‌ಗೆ ₹8,500 ಹೆಚ್ಚುವರಿ ಪಾವತಿ ಮಾಡಲಿದೆ ಎಂದೂ ಹೇಳಿದ್ದಾರೆ.





ಆಧಾರ್ ಜೋಡಣೆ ಹೊಂದಿದ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಮತ್ತು ತ್ವರಿತ ಪಾವತಿ ವ್ಯವಸ್ಥೆಯೊಂದಿಗೆ ಬೆಳೆ ಹಾನಿ ಪರಿಹಾರ ಪಾವತಿ ಮಾಡುತ್ತೇವೆ
ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಸಿನಿ ಮಾತು...

ಚಿತ್ರ: ಎಎಫ್‌ಪಿ



ಭಾರತ ಪ್ರವಾಸದಲ್ಲಿರುವ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಮುಂಬೈನಲ್ಲಿರುವ ಯಶ್‌ರಾಜ್ ಫಿಲ್ಮ್ಸ್‌ಗೆ ಬುಧವಾರ ಭೇಟಿ ನೀಡಿದ ವೇಳೆ ನಟಿ ರಾಣಿ ಮುಖರ್ಜಿ ಅವರೊಂದಿಗೆ ಮಾತುಕತೆಯಲ್ಲಿ ತೊಡಗಿದ್ದ ಕ್ಷಣ

ಜಾತಿ ಪ್ರಮಾಣಪತ್ರ ಸಲೀಸು

ನೇಮಕಾತಿ ಆರಂಭಿಸಲು ಇದ್ದ ತೊಡಕು ನಿವಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಹಂಚಿಕೆ ಮಾಡಿ ಈಗಾಗಲೇ ಹೊರಡಿಸಿರುವ ಆದೇಶಕ್ಕೆ ಪೂರಕವಾಗಿ ಮೂಲ ಜಾತಿ, ಪ್ರವರ್ಗದಡಿ ಜಾತಿ ಪ್ರಮಾಣಪತ್ರ ಪಡೆಯಲು ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಒಳ ಮೀಸಲಾತಿ ಜಾರಿಯಾಗಿದ್ದರೂ ಜಾತಿ ಪ್ರಮಾಣಪತ್ರ ನೀಡಲು ತಂತ್ರಾಂಶ ಅಭಿವೃದ್ಧಿಪಡಿಸಿರಲಿಲ್ಲ. ಇದರಿಂದ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಹೊಸ ತಾಗಿ ಜಾತಿ ಪ್ರಮಾಣಪತ್ರ ಪಡೆಯಲು ಸಾಧ್ಯವಾಗಿರಲಿಲ್ಲ. ಹೀಗಾಗಿ, ನೇಮಕಾತಿ ಪ್ರಕ್ರಿಯೆ ಆರಂಭಿಸಲು ಅಡ್ಡಿಯಾಗಿತ್ತು. ಇದನ್ನು ನಿವಾರಿಸುವತ್ತ ಸರ್ಕಾರ ಮುಂದಡಿ ಇಟ್ಟಿದೆ.

ಒಳ ಮೀಸಲು

ಪರಿಶಿಷ್ಟ ಜಾತಿಗಳನ್ನು 'ಪ್ರವರ್ಗ–ಎ', 'ಪ್ರವರ್ಗ –ಬಿ', 'ಪ್ರವರ್ಗ–ಸಿ' ಎಂದು ಮೂರು ಪ್ರವರ್ಗಗಳಡಿ ವರ್ಗೀಕರಿಸಿ ಒಳ ಮೀಸಲಾತಿ ಹಂಚಿಕೆ ಮಾಡಲಾಗಿದೆ. ಅದರ ಅನ್ವಯ ಜಾತಿ ಪ್ರಮಾಣಪತ್ರ ಪಡೆಯಲು ಅಗತ್ಯವಿರುವ ನಿಯಮಗಳನ್ನು ಸಮಾಜ ಕಲ್ಯಾಣ ಇಲಾಖೆ ರೂಪಿಸಿದೆ. ಒಳ ಮೀಸಲಾತಿ ಸಮೀಕ್ಷೆಯಲ್ಲಿ ಮೂಲ ಜಾತಿ ತಿಳಿಸದವರಿಗೂ ಜಾತಿ ಪ್ರಮಾಣಪತ್ರ ಪಡೆಯಲು ಇರುವ ಅಡ್ಡಿ ನಿವಾರಿಸಲಾಗಿದೆ.

ಸುತ್ತೋಲೆಯಲ್ಲಿರುವ ಅಂಶಗಳಂತೆ ಪರಿಶಿಷ್ಟ ಜಾತಿಯವರಿಗೆ ಜಾತಿ ಪ್ರಮಾಣ ಪತ್ರ ನೀಡಲು ಕ್ರಮ ವಹಿಸಬೇಕು ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸಮಾಜ ಕಲ್ಯಾಣ ಇಲಾಖೆ ಸೂಚಿಸಿದೆ. 2B

ಮೂಲ ಜಾತಿ ತಿಳಿಸದವರಿಗೂ ದಾರಿ

ಮೂಲ ಜಾತಿಯನ್ನು ತಿಳಿಸದೆ ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕಕ್ಕೆ ಸೇರಿದ ಅಭ್ಯರ್ಥಿಗಳು 'ಪ್ರವರ್ಗ –ಎ' ಅಥವಾ 'ಪ್ರವರ್ಗ– ಬಿ' ಆಯ್ಕೆ ಮಾಡಿಕೊಂಡು ಸ್ಪಷ್ಟವಾಗಿ ನಮೂದಿಸಿ, ಮುಚ್ಚಳಿಕೆ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು.

ಇಂತಹ ಅರ್ಜಿಗಳನ್ನು ಆಧರಿಸಿ ಜಾತಿ ಪ್ರಮಾಣಪತ್ರ ನೀಡುವ ಪ್ರಾಧಿಕಾರಗಳು 'ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ, ಮುಂತಾದವುಗಳ ಮೀಸಲಾತಿ) ಕಾಯ್ದೆ 1990ರ ತಿದ್ದುಪಡಿ ಕಾಯ್ದೆ 2024ರಂತೆ ನಿಯಮಗಳನ್ನು ಪರಿಶೀಲಿಸಬೇಕು. ಅಭ್ಯರ್ಥಿಗಳು ಪರಿಶಿಷ್ಟ ಜಾತಿಗೆ ಸೇರಿರುವ ಬಗ್ಗೆ ಖಚಿತಪಡಿಸಿಕೊಂಡು, ಅಭ್ಯರ್ಥಿಯು ಮುಚ್ಚಳಿಕೆ ಪತ್ರದಲ್ಲಿ ಘೋಷಿಸಿರುವ ಪ್ರವರ್ಗವನ್ನು ನಮೂದಿಸಿ ಪರಿಶಿಷ್ಟ ಜಾತಿ ಪ್ರಮಾಣಪತ್ರ ನೀಡಬೇಕು. ಆದಿ ಕರ್ನಾಟಕಕ್ಕೆ ಸೇರಿದ ಅಭ್ಯರ್ಥಿಯಾಗಿದ್ದರೆ ಅಫಿದವಿತ್‌ನಲ್ಲಿ ಘೋಷಿಸಿದ ಆಧಾರದಲ್ಲಿ 'ಆದಿ ಕರ್ನಾಟಕ ('ಪ್ರವರ್ಗ– ಎ' ಅಥವಾ 'ಪ್ರವರ್ಗ ಬಿ')' ಎಂದು ನಮೂದಿಸಿ ಜಾತಿ ಪ್ರಮಾಣಪತ್ರ ನೀಡಬೇಕು. ಆದಿ ದ್ರಾವಿಡ ಮತ್ತು ಆದಿ ಆಂಧ್ರ ಅಭ್ಯರ್ಥಿಗಳಿಗೂ ಇದೇ ರೀತಿ ಜಾತಿ ಪ್ರಮಾಣಪತ್ರ ನೀಡಬೇಕು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ. 2B

ಸಿಜೆಐ ಪ್ರಕರಣ : ಭಾಸ್ಕರ್ ರಾವ್ ವಿವಾದ

ಪ್ರಜಾವಾಣಿ ವಾರ್ತೆ



ಭಾಸ್ಕರ್ ರಾವ್

ಬೆಂಗಳೂರು: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ್ದ ಪ್ರಕರಣದ ವಿಚಾರದಲ್ಲಿ ಬಿಜೆಪಿ ಮುಖಂಡ, ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಅವರು ನೀಡಿದ್ದ ಹೇಳಿಕೆಗೆ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಅವರು ಕ್ಷಮೆಯಾಚಿಸಿದ್ದಾರೆ.

ವಕೀಲನ 'ಧೈರ್ಯ'ವನ್ನು ಮೆಚ್ಚಿ ಭಾಸ್ಕರ್ ಅವರು ತಮ್ಮ 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದ್ದರು. ಆ ಪೋಸ್ಟ್ ಗಮನಿಸಿದ್ದ ಹಲವರು ಭಾಸ್ಕರ್ ಅವರನ್ನು ಟೀಕಿಸಿದ್ದರು. 8

ಧೈರ್ಯ ಮೆಚ್ಚುವೆ...

ಇದು ಕಾನೂನಿನ ಪ್ರಕಾರ ತಪ್ಪು ಎನಿಸಿದ್ದರೂ ಈ ವಯಸ್ಸಿನಲ್ಲಿ ಯಾವುದೇ ಪರಿಣಾಮ ಲೆಕ್ಕಿಸದೆ ನಿಲುವು ತೆಗೆದುಕೊಂಡು ಅದರಲ್ಲಿ ದೃಢವಾಗಿರುವ ನಿಮ್ಮ ಧೈರ್ಯ ಮೆಚ್ಚುತ್ತೇನೆ

ವಕೀಲ ರಾಕೇಶ್ ಕಿಶೋರ್ ಪೋಸ್ಟ್‌ಗೆ ಭಾಸ್ಕರ್ ರಾವ್ ಪ್ರತಿಕ್ರಿಯೆ

ನೋವಾಗಿದ್ದರೆ ಕ್ಷಮಿಸಿ...

ಕೃತ್ಯ ಎಸಗಿದ ವ್ಯಕ್ತಿಯ ನಡೆ ಆಘಾತವನ್ನು ಉಂಟು ಮಾಡಿದೆ. ಸುಪ್ರೀಂ ಕೋರ್ಟ್, ಮುಖ್ಯ ನ್ಯಾಯಮೂರ್ತಿ ಅಥವಾ ಯಾವುದೇ ಸಮುದಾಯವನ್ನು ಅವಮಾನಿಸಿಲ್ಲ. ನನ್ನ ಪೋಸ್ಟ್‌ನಿಂದ ನೋವಾಗಿದ್ದರೆ ಕ್ಷಮಿಸಿ

ಭಾಸ್ಕರ್ ರಾವ್ ಕ್ಷಮೆಯಾಚಿಸಿದ ಪೋಸ್ಟ್

'ಯಶಸ್ವಿನಿ' ಇದ್ದರೆ 'ಆಯುಷ್ಮಾನ್'ಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶಸ್ವಿನಿ ಯೋಜನೆಯ ಫಲಾನುಭವಿಗಳನ್ನು 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' (ಎಬಿ–ಎಆರ್‌ಕೆ) ಯೋಜನೆಯಿಂದ ಹೊರಗಿಡುವಂತೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಸಹಕಾರ ಇಲಾಖೆಯಿಂದ ಯಶಸ್ವಿನಿ ಹಾಗೂ ಆರೋಗ್ಯ ಇಲಾಖೆಯಿಂದ ಎಬಿ–ಎಆರ್‌ಕೆ ಅನುಷ್ಠಾನಗೊಳಿಸಲಾಗಿದೆ. ಅನೇಕ ಕುಟುಂಬಗಳು ಎರಡೂ ಯೋಜನೆಯ ಫಲಾನುಭವಿಗಳಾಗಿವೆ. ಎರಡೂ ಯೋಜನೆಗಳು ಪ್ರತಿ ಕುಟುಂಬಕ್ಕೆ ವಾರ್ಷಿಕ ತಲಾ ₹ 5 ಲಕ್ಷದವರೆಗೆ ಆರೋಗ್ಯ ರಕ್ಷಣೆಯನ್ನು ಒದಗಿಸುತ್ತವೆ. ಆದ್ದರಿಂದ ಎರಡೂ ಯೋಜನೆಗಳ ಫಲಾನುಭವಿಗಳಾಗಿರುವವರು ಯಶಸ್ವಿನಿ ಯೋಜನೆಯಡಿಯೇ ಪ್ರಯೋಜನ ಪಡೆಯಬೇಕು.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ಎರಡೂ ಯೋಜನೆಗಳ ಅನುಷ್ಠಾನದ ನಿರ್ವಹಣೆ ಮಾಡುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಸಂಬಂಧಿಸಿದಂತೆ ಶಿಫಾರಸು ಮಾಡುವಾಗ, ಯಶಸ್ವಿನಿಯಡಿ ಚಿಕಿತ್ಸೆ ಪಡೆಯುವಂತೆ ಹಿಂಬರಹ ನೀಡಬೇಕು. ಈ ಎರಡೂ ಯೋಜನೆಯ ಫಲಾನುಭವಿಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು ಎಂದು ಹೇಳಲಾಗಿದೆ.

ರಾಜ್ಯದಲ್ಲಿ 41.51 ಲಕ್ಷ ಯಶಸ್ವಿನಿ ಫಲಾನುಭವಿಗಳಾಗಿದ್ದು, 41.09 ಲಕ್ಷ ಮಂದಿ ಆಧಾರ್ ಹೊಂದಿದ್ದಾರೆ. ಇವರಲ್ಲಿ 35.71 ಲಕ್ಷ ಮಂದಿ ಎರಡೂ ಯೋಜನೆಗಳ ಫಲಾನುಭವಿಗಳಾಗಿದ್ದಾರೆ.

ಚಿಟಿಕೆ ಸುದ್ದಿ

ಹುಲಿ ಹತ್ಯೆ ಪ್ರಕರಣ: ಒಬ್ಬ ಆರೋಪಿ ಶರಣು

ಹನೂರು: ಮಲೆ ಮಹದೇಶ್ವರ ವನ್ಯಧಾಮದಲ್ಲಿ ಈಚೆಗೆ ಹುಲಿ ಹತ್ಯೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ ಸಿದ್ದರಾಜು ಬುಧವಾರ ಶರಣಾಗಿದ್ದಾನೆ.

ನಾಪತ್ತೆಯಾಗಿದ್ದ ಆರೋಪಿಯನ್ನು ಕುಟುಂಬಸ್ಥರೇ ತಂದೊಪ್ಪಿಸಿದ್ದಾರೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

ಹನೂರು ಬಫರ್ ವಲಯದ ಆನೆ ಕಾರ್ಯ ಪಡೆಯ ಹೊರಗುತ್ತಿಗೆ ನೌಕರ ಸೆ.30ರಂದು ಪಚ್ಚೆದೊಡ್ಡಿ ಗ್ರಾಮದಲ್ಲಿ ಹುಲಿ ಸತ್ತಿರುವುದನ್ನು ಗಮನಿಸಿದರೂ ಇಲಾಖೆಗೆ ಮಾಹಿತಿ ನೀಡದೆ ಹುಲಿ ಹತ್ಯೆಗೆ ಆರೋಪಿಗೆ ಮಾಹಿತಿ ನೀಡಿ, ಪ್ರಕರಣದಲ್ಲಿ ತಪ್ಪಿಸಿಕೊಳ್ಳಲು ಸಹಾಯ ನೀಡಿರುವ ಆರೋಪ ಎದುರಿಸುತ್ತಿದ್ದಾರೆ.

ಭೋವಿ ನಿಗಮ ರಾಮಪ್ಪ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನಕ್ಕೆ ಎಂ. ರಾಮಪ್ಪ ಅವರನ್ನು ನೇಮಿಸಿ ಆದೇಶ ಹೊರಡಿಸುವಂತೆ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದ್ದಾರೆ.

ಕಾಂಪೋಸ್ಟ್ ಅಭಿವೃದ್ಧಿ ನಿಗಮಕ್ಕೆ ಎ.ಎನ್. ನಟರಾಜ್ ಗೌಡ, ಮೈಸೂರಿನಲ್ಲಿರುವ ಮೃಗಾಲಯ ಪ್ರಾಧಿಕಾರಕ್ಕೆ ಎನ್. ರಂಗಸ್ವಾಮಿ, ಹುಬ್ಬಳ್ಳಿಯಲ್ಲಿರುವ ಕೃಷ್ಣ ಅಭಿವೃದ್ಧಿ ನಿಗಮಕ್ಕೆ ಬಿ. ನಾಗೇಂದ್ರಕುಮಾರ್ ಅವರನ್ನು ನೇಮಿಸಿ ಆದೇಶ ಹೊರಡಿಸುವಂತೆಯೂ ಅವರು ಸೂಚಿಸಿದ್ದಾರೆ.

ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದ ಎಸ್. ರವಿಕುಮಾರ್ ಅವರು ಭ್ರಷ್ಟಾಚಾರದ ಆರೋಪದ ಕಾರಣಕ್ಕೆ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ಹುಲಿ ಕೊಂದವರ ಬಿಡಬೇಡಿ'

ಜವಾಬ್ದಾರಿಯಿಂದ ಕೆಲಸ ಮಾಡಿ: ಅರಣ್ಯ ಸಿಬ್ಬಂದಿಗೆ ಸಿದ್ದರಾಮಯ್ಯ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುಲಿ, ಆನೆ ಸೇರಿದಂತೆ ವನ್ಯಜೀವಿಗಳನ್ನು ಹತ್ಯೆ ಮಾಡಿದವರು ಎಷ್ಟೇ ಪ್ರಭಾವಿಗಳಿದ್ದರೂ, ಅವರನ್ನು ಸುಮ್ಮನೆ ಬಿಡಬೇಡಿ. ಅಂತಹವರಿಗೆ ಕಠಿಣ ಶಿಕ್ಷೆ ಆಗಲೇಬೇಕು. ಅರಣ್ಯ ಅಧಿಕಾರಿಗಳು ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬುಧವಾರ ನಡೆದ 71ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಅರಣ್ಯ ಇಲಾಖೆಯ 25 ಸಿಬ್ಬಂದಿಗೆ 'ಮುಖ್ಯಮಂತ್ರಿ ಪದಕ' ಪ್ರದಾನ ಮಾಡಿದ ಬಳಿಕ ಅವರು ಮಾತನಾಡಿದರು.

'ದೇಶದಲ್ಲೇ ಅತಿ ಹೆಚ್ಚು ಆನೆಗಳಿರುವ ರಾಜ್ಯ ನಮ್ಮದು. ಹುಲಿ, ಚಿರತೆ ಹೆಚ್ಚಿರುವ ಎರಡನೇ ರಾಜ್ಯವೂ ಹೌದು. ಆದರೆ, ವನ್ಯಜೀವಿ–ಮಾನವ ಸಂಘರ್ಷ ಪ್ರಕರಣಗಳು ಹೆಚ್ಚಾಗಿವೆ. ಹುಲಿ, ಆನೆಗಳನ್ನು ಹತ್ಯೆ ಮಾಡಲಾಗುತ್ತಿದೆ. ಕೆಲವೇ ದಿನಗಳಲ್ಲಿ ಆರು ಹುಲಿಗಳನ್ನು ವಿಷ ಹಾಕಿ ಕೊಲ್ಲಲಾಗಿದೆ. ದನ ಸಾಯಿಸಿದ ಕಾರಣಕ್ಕೆ, ಹುಲಿಯನ್ನೇ ಕೊಲ್ಲುವುದನ್ನು ಒಪ್ಪಲಾಗದು. ಅಂತಹವರ ವಿರುದ್ಧ ಕಠಿಣ ಕ್ರಮ ಆಗಲೇಬೇಕು' ಎಂದು ಹೇಳಿದರು.

ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡಿ, 'ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಯೋಜನೆ ಸಿದ್ಧಪಡಿಸಿ ಇದಕ್ಕೆ ಅನುದಾನ ಪಡೆದುಕೊಳ್ಳುತ್ತಿದ್ದೇವೆ. ಸೇಡಿನಿಂದ ಹುಲಿ ಹತ್ಯೆ ಮಾಡಿದ ಪ್ರಕರಣದಲ್ಲಿ ಈಗಾಗಲೇ ಹಲವರನ್ನು ಬಂಧಿಸಲಾಗಿದೆ. ಅಲ್ಲದೇ ಅರಣ್ಯದಂಚಿನಲ್ಲಿ ಸಂಘರ್ಷ ತಪ್ಪಿಸಲೆಂದೇ ಜನಸಂಪರ್ಕ ಸಭೆಗಳನ್ನು ಮಾಡುವಂತೆ ಸೂಚಿಸಿದ್ದೇವೆ' ಎಂದರು.

ಅರಣ್ಯ, ವನ್ಯಜೀವಿ ರಾಯಭಾರಿಯಾಗಿ ನೇಮಕವಾಗಿರುವ ಕ್ರಿಕೆಟಿಗ ಅನಿಲ್ ಕುಂಬ್ಳೆ ಮತ್ತು ಅರಣ್ಯಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ ಒಡಂಬಡಿಕೆಗೆ ಸಹಿ ಹಾಕಿದರು.

> ಪೊಲೀಸರಿಗೆ ಇರುವ ಹಾಗೆ ಅರಣ್ಯ ಇಲಾಖೆ ಅಧಿಕಾರಿ, ಸಿಬ್ಬಂದಿಗೂ ರಾಷ್ಟ್ರಪತಿ ಪದಕ ನೀಡುವಂತೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಬೇಕು
> **ಅನಿಲ್ ಕುಂಬ್ಳೆ**
> ರಾಯಭಾರಿ, ಅರಣ್ಯ ಇಲಾಖೆ

ಆಯ್ಕೆ ಪಟ್ಟಿ

ಅರಣ್ಯ ಇಲಾಖೆಯ ಗಸ್ತು ವನಪಾಲಕರ ಹುದ್ದೆಗಳಿಗೆ ಆಯ್ಕೆಯಾಗಿರುವ 514 ಮಂದಿಯ ಪಟ್ಟಿಯನ್ನು ಸಿದ್ದರಾಮಯ್ಯ ಬಿಡುಗಡೆ ಮಾಡಿದರು.



ದಸರಾದಲ್ಲಿ ಭಾಗಿಯಾದ ಧೀಮ ಆನೆಯ ಮಾವುತ ಗುಂಡಣ್ಣ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪದಕ ಪ್ರದಾನ ಮಾಡಿದರು. ಅರಣ್ಯ ಇಲಾಖೆ ರಾಯಭಾರಿ ಅನಿಲ್ ಕುಂಬ್ಳೆ, ಸಚಿವ ಈಶ್ವರ ಖಂಡ್ರೆ ಇದ್ದರು

ಮುಖ್ಯಮಂತ್ರಿ ಪದಕ ಪುರಸ್ಕೃತರು

ಎಸ್.ಪ್ರಶಾಂತ್(ಡಿಆರ್‌ಎಫ್‌ಒ, ಬಳ್ಳಾರಿ), ಎಂ.ಕೆ.ಹೊನ್ನುರಸ್ವಾಮಿ(ಡಿಆರ್‌ಎಫ್‌ಒ, ವಿಜಯನಗರ), ಎಂ.ಪ್ರಕಾಶ್(ಅರಣ್ಯ ರಕ್ಷಕ, ಬೆಂಗಳೂರು ಗ್ರಾಮಾಂತರ), ಎಂ.ಜೆ.ಅಶ್ವಿನ್(ಅರಣ್ಯ ರಕ್ಷಕ, ಬೆಂಗಳೂರು), ಪಿ.ಎಚ್. ಕಿರಣ್‌ಕುಮಾರ್(ಆರ್‌ಎಫ್‌ಒ, ಕೋಲಾರ), ರಮೇಶ್ ಜೋಶ್(ಅರಣ್ಯ ರಕ್ಷಕ, ಬೆಳಗಾವಿ), ಸಂಜೀವ್ ಸಂಸುದ್ದಿ(ಆರ್‌ಎಫ್‌ಒ, ಗೋಕಾಕ್), ಗುರುರಾಜ್ ಗೌಡ(ಡಿಆರ್‌ಎಫ್‌ಒ, ಉತ್ತರ ಕನ್ನಡ), ಶಿವಾನಂದ ನಿಂಗಾಣಿ(ಆರ್‌ಎಫ್‌ಒ, ಶಿರಸಿ), ವಿಠಲ್ ವೀರಪ್ಪ ಶಿರಗಾವಿ(ಅರಣ್ಯ ರಕ್ಷಕ, ಎಂಎಂಹಿಲ್ ವಿಭಾಗ), ಸಿ.ಕಿರಣ್‌ಕುಮಾರ್(ಡಿಆರ್‌ಎಫ್‌ಒ, ಕಾವೇರಿ ವನ್ಯಜೀವಿ ವಿಭಾಗ), ಖಲಂದರ್(ಆರ್‌ಎಫ್‌ಒ, ಚಿಕ್ಕಮಗಳೂರು), ಹನುಮಂತಪ್ಪ ಉಪ್ಪಾರ್(ಅರಣ್ಯ ರಕ್ಷಕ, ಹಾವೇರಿ), ಶಿವಪ್ಪ ತಳವಾರ(ಡಿಆರ್‌ಎಫ್‌ಒ ಹಾವೇರಿ), ಸುಭಾಷ್ ಕುಮಾರ್(ಡಿಆರ್‌ಎಫ್‌ಒ, ಹಾಸನ), ಎಸ್.ಆರ್.ಅರ್ಜುನ್(ಡಿಆರ್‌ಎಫ್‌ಒ, ಹಾಸನ), ಹಾಮದ್(ಡಿಆರ್‌ಎಫ್‌ಒ, ಕಲಬುರಗಿ), ಐಕ್ಬಾಲ್ ಗನಿ(-ಡಿಆರ್‌ಎಫ್‌ಒ, ಕುಶಾಲನಗರ), ಸಚಿನ್ ನಿಂಬಾಳಕರ್(ಡಿಆರ್‌ಎಫ್‌ಒ, ವಿರಾಜಪೇಟೆ), ಪಿ.ಜಿತೇಶ್(ಅರಣ್ಯ ರಕ್ಷಕ, ಮಂಗಳೂರು), ಗುಂಡಣ್ಣ (ಆನೆ ಮಾವುತ, ನಾಗರಹೊಳೆ), ಸಿದ್ದರಾಜು(ಆರ್‌ಎಫ್‌ಒ, ನಾಗರಹೊಳೆ), ಪ್ರದೀಪ್ ಎಂ ನಾಯ್ಕ್, ಎಂ.ಸಲೀಂ(ಅರಣ್ಯ ರಕ್ಷಕರು, ಶಿವಮೊಗ್ಗ), ಡಾ.ರಮೇಶ್ (ಪಶುವೈದ್ಯ, ನಾಗರಹೊಳೆ).

'ತಿಮರೋಡಿ ತಲೆ ಮರೆಸಿಕೊಂಡಿದ್ದಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯಿಂದ ಒಂದು ವರ್ಷದ ಅವಧಿಯ ಗಡಿಪಾರು ಆದೇಶ ಎದುರಿಸುತ್ತಿರುವ ಮಹೇಶ್ ಶೆಟ್ಟಿ ತಿಮರೋಡಿ ಸದ್ಯ ತಲೆ ಮರೆಸಿಕೊಂಡಿದ್ದು, ನಿರೀಕ್ಷಣಾ ಜಾಮೀನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ' ಎಂದು ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ಅರುಹಿದರು.

ತಮ್ಮನ್ನು ಗಡಿಪಾರು ಮಾಡಿ ಪುತ್ತೂರು ಉಪ ವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಹೊರಡಿಸಿರುವ ಆದೇಶ ಪ್ರಶ್ನಿಸಿ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ತಿಮರೋಡಿ ಪರ ಹೈಕೋರ್ಟ್ ವಕೀಲ ಎಂ.ಆರ್. ಬಾಲಕೃಷ್ಣ, 'ಅರ್ಜಿದಾರರು ನಿರೀಕ್ಷಣಾ ಜಾಮೀನು ಕೋರಿ ವಿಚಾರಣಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ಇದೇ 9ರಂದು ವಿಚಾರಣೆಗೆ ನಿಗದಿಯಾಗಿದೆ. ಆದ್ದರಿಂದ, ಈ ಅರ್ಜಿಯ ವಿಚಾರಣೆ ಮುಂದೂಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಪ್ರತಿಯಾಗಿ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಕರ್ನಾಟಕ ಪೊಲೀಸ್ ಕಾಯ್ದೆ ಕಲಂ 59ರ ಪ್ರಕಾರ ಗಡಿಪಾರು ಆದೇಶ ಹೊರಡಿಸಿದ 30 ದಿನಗಳ ಒಳಗೆ ಬಾಧಿತ ವ್ಯಕ್ತಿಗೆ ಆದೇಶವನ್ನು ಪ್ರಶ್ನಿಸಿ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಆದರೆ, ಅರ್ಜಿದಾರರು ನೇರವಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಅರ್ಜಿಯು ವಿಚಾರಣಾ ಮಾನ್ಯತೆ ಹೊಂದಿಲ್ಲ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ನಿರೀಕ್ಷಣಾ ಜಾಮೀನು ಅರ್ಜಿ ಕುರಿತಂತೆ ವಿಚಾರಣಾ ನ್ಯಾಯಾಲಯದಲ್ಲಿ ಏನಾಗಲಿದೆ ಎಂಬುದನ್ನು ಕಾದು ನೋಡೋಣ. ನೀವು (ಅರ್ಜಿದಾರರು) ಕಲಂ 59ರ ಪ್ರಕಾರ ಮೊದಲು ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿ. ನಂತರ ಇಲ್ಲಿಗೆ ಬನ್ನಿ. ಯಾವುದೇ ಅವಸರ ಬೇಡ' ಎಂದು ತಿಮರೋಡಿ ಪರ ವಕೀಲರಿಗೆ ಮೌಖಿಕವಾಗಿ ಸೂಚಿಸಿತು. ಅರ್ಜಿಯ ಅಂತಿಮ ವಿಚಾರಣೆಯನ್ನು ಇದೇ 13ಕ್ಕೆ ಮುಂದೂಡಿ ನಿಗದಿಪಡಿಸಿದ ನ್ಯಾಯಪೀಠ, ಗಡಿಪಾರು ಆದೇಶ ಸಂಬಂಧ ಬಲವಂತದ ಕ್ರಮ ಜರುಗಿಸದಂತೆ ಈ ಹಿಂದೆ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಮುಂದಿನ ವಿಚಾರಣೆವರೆಗೆ ವಿಸ್ತರಿಸಿತು.

ಒಳಮೀಸಲು: ಪ್ರಮಾಣಪತ್ರ ಸಲೀಸು

ಎರಡನೇ ಮುಖಪುಟದಿಂದ...

ಸುತ್ತೋಲೆಯಲ್ಲಿ ಏನಿದೆ?: ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಸಂವಿಧಾನದ ವಿಧಿ 15 ಮತ್ತು 16ರ ಅನ್ವಯ ಶಿಕ್ಷಣ ಮತ್ತು ಉದ್ಯೋಗದಲ್ಲಿ ಒಳ ಮೀಸಲಾತಿ ಕಲ್ಪಿಸಲು 'ಪ್ರವರ್ಗ-ಎ' ಪಟ್ಟಿಯಲ್ಲಿ 16 ಜಾತಿಗಳು, 'ಪ್ರವರ್ಗ-ಬಿ' ಪಟ್ಟಿಯಲ್ಲಿ 19 ಜಾತಿಗಳು ಹಾಗೂ 'ಪ್ರವರ್ಗ-ಸಿ' ಪಟ್ಟಿಯಲ್ಲಿ 63 ಜಾತಿಗಳನ್ನು ಸೇರಿಸಿ ವರ್ಗೀಕರಿಸಲಾಗಿದೆ. ಮೂಲ ಜಾತಿ ತಿಳಿಸದೆ ಆದಿ ಆಂಧ್ರ, ಆದಿ ದ್ರಾವಿಡ, ಆದಿ ಕರ್ನಾಟಕ ಎಂದು ನಮೂದಿಸಿದ ಮೂರು ಸಮುದಾಯಗಳವರು 'ಪ್ರವರ್ಗ- ಎ' ಅಥವಾ ಪ್ರವರ್ಗ 'ಬಿ' ಅಡಿ ಮೀಸಲಾತಿ ಸೌಲಭ್ಯ ಪಡೆಯಬಹುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಸಮುದಾಯ ಹೊರತುಪಡಿಸಿ ಉಳಿದ 98 ಜಾತಿಗಳ ಜನರು ಈಗಾಗಲೇ ಜಾತಿಯನ್ನು ನಮೂದಿಸಿ ಜಾತಿ ಪ್ರಮಾಣಪತ್ರ ಪಡೆದಿದ್ದಾರೆ. ಅದೇ ಜಾತಿ ಪ್ರಮಾಣಪತ್ರವನ್ನು ಸಂಬಂಧಪಟ್ಟ ಪ್ರವರ್ಗದೊಂದಿಗೆ ಮೀಸಲಾತಿ ಪಡೆಯಲು ಬಳಸಬಹುದು. ಜಾತಿ ಪ್ರಮಾಣಪತ್ರಗಳನ್ನು ಆಯಾ ಜಾತಿಗಳಿಗೆ ಸಂಬಂಧಿಸಿದ ಪ್ರವರ್ಗದಡಿಯಲ್ಲೇ ಅಟಲ್ ಜೀ ಜನಸ್ನೇಹಿ ಕೇಂದ್ರದ ತಂತ್ರಾಂಶದಲ್ಲಿ ಅಳವಡಿಸಿಕೊಂಡು ಜಾತಿ ಪ್ರಮಾಣಪತ್ರ ನೀಡಬೇಕು ಎಂದು ನಿರ್ದೇಶನ ನೀಡಲಾಗಿದೆ.

ಅಭ್ಯರ್ಥಿಯು ಕೊರಚ ಎಂದು ಜಾತಿ ಪ್ರಮಾಣಪತ್ರ ಪಡೆದಿದ್ದರೆ, ಈ ಸಮುದಾಯವನ್ನು 'ಪ್ರವರ್ಗ-ಸಿ'ಯಲ್ಲಿ ವರ್ಗೀಕರಿಸಿರುವುದರಿಂದ ನಾಡ ಕಚೇರಿ ಅಥವಾ ಅಟಲ್ ಜೀ ಜನಸ್ನೇಹಿ ಕೇಂದ್ರದವರು ಜಾತಿ ಪ್ರಮಾಣಪತ್ರವನ್ನು 'ಕೊರಚ (ಪ್ರವರ್ಗ-ಸಿ)' ಎಂದು ನೀಡಬೇಕು. ಅಭ್ಯರ್ಥಿಯು ಪರೆಯನ್, ಪರೆಯ ಎಂದು ಈಗಾಗಲೇ ಪ್ರಮಾಣಪತ್ರ ಪಡೆದಿದ್ದರೆ, ಈ ಸಮುದಾಯವನ್ನು 'ಪ್ರವರ್ಗ- ಬಿ'ಯಲ್ಲಿ ವರ್ಗೀಕರಿರುವುದರಿಂದ ಪ್ರಮಾಣಪತ್ರವನ್ನು 'ಪರೆಯನ್, ಪರೆಯ (ಪ್ರವರ್ಗ-ಬಿ)' ಎಂದು ನೀಡಲು ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಈಗಾಗಲೇ ಆದಿ ಆಂಧ್ರ, ಆದಿ ದ್ರಾವಿಡ, ಆದಿ ಕರ್ನಾಟಕ ಹೆಸರಿನಲ್ಲಿ ಜಾತಿ ಪ್ರಮಾಣಪತ್ರ ಪಡೆದವರು ತಮ್ಮ ಮೂಲ ಜಾತಿಯನ್ನು ನಮೂದಿಸಿ ಪ್ರವರ್ಗ 'ಎ' ಅಥವಾ ಪ್ರವರ್ಗ 'ಬಿ' ಅಡಿ ಮೀಸಲಾತಿ ಸೌಲಭ್ಯ ಪಡೆಯಬಹುದು. ಉದಾಹರಣೆಗೆ, ಒಬ್ಬ ಅಭ್ಯರ್ಥಿಯು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣಪತ್ರ ಪಡೆದಿದ್ದು, ಮೂಲ ಜಾತಿಯು 'ಹೊಲೆಯ' ಎಂದು ಇದ್ದರೆ, ಹೊಸತಾಗಿ ಪಡೆಯುವ ಜಾತಿ ಪ್ರಮಾಣಪತ್ರದಲ್ಲಿ 'ಆದಿ ಕರ್ನಾಟಕ (ಹೊಲೆಯ/ಪ್ರವರ್ಗ ಬಿ)', ಮೂಲಜಾತಿಯು 'ಮಾದಿಗ' ಎಂದು ಇದ್ದರೆ 'ಆದಿ ಕರ್ನಾಟಕ (ಮಾದಿಗ/ಪ್ರವರ್ಗ ಬಿ)' ಎಂದು ಜಾತಿ ಪ್ರಮಾಣ ಪತ್ರ ನೀಡಬೇಕು. ಆದಿ ದ್ರಾವಿಡ ಮತ್ತು ಆದಿ ಆಂಧ್ರ ಅಭ್ಯರ್ಥಿಗಳು ಇದೇ ರೀತಿ ಜಾತಿ ಪ್ರಮಾಣಪತ್ರ ಪಡೆಯಬಹುದು.

ಮೂಲ ಜಾತಿ ತಿಳಿಸದವರಿಗೂ ದಾರಿ

ಎರಡನೇ ಮುಖಪುಟದಿಂದ...

ಹೀಗೆ ಜಾತಿ ಪ್ರಮಾಣಪತ್ರ ಪಡೆದಿದ್ದರೆ, ನಂತರ ಅದೇ ಪ್ರವರ್ಗ ಅವರ ಕುಟುಂಬಕ್ಕೆ ಶಾಶ್ವತವಾಗಿ ಮುಂದುವರಿಯಲಿದೆ. ಯಾವುದೇ ಕಾರಣಕ್ಕೂ ಬದಲಿಸಲು ಅವಕಾಶ ಇಲ್ಲ ಎಂದೂ ಸ್ಪಷ್ಟಪಡಿಸಲಾಗಿದೆ.

ಎಚ್‌ಡಿಕೆ ವಿರುದ್ಧ ಆರೋಪ: ಸಮಗ್ರ ವರದಿಗೆ ಆದೇಶ

ಒಂದನೇ ಪುಟದಿಂದ...

'ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಮಂಜುನಾಥ್ ಪ್ರಸಾದ್ ಅವರು 2020ರ ಜೂನ್ 6ರಂದು ನೀಡಿರುವ ವರದಿ, ರಾಮನಗರ ಜಿಲ್ಲಾಧಿಕಾರಿ 2020ರ ಏಪ್ರಿಲ್ 7ರಂದು ನೀಡಿರುವ ವರದಿ ಮತ್ತು ಅಂದಿನ ಲೋಕಾಯುಕ್ತ ನ್ಯಾಯಮೂರ್ತಿ ವಿಶ್ವನಾಥ ಶೆಟ್ಟಿ ಅವರು 2021ರ ಮಾರ್ಚ್ 3ರಂದು ನೀಡಿದ್ದ ವರದಿಗಳೆಲ್ಲಾ ಕುಮಾರಸ್ವಾಮಿ ಅವರ ಪರವಾಗಿವೆ' ಎಂದರು.

ಪ್ರಕರಣದ ಇತರೆ ಪ್ರತಿವಾದಿಗಳಾದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರ ಪತ್ನಿ ಕೆ.ಜಿ.ಪ್ರಮೀಳಾ ಹಾಗೂ ಪುತ್ರ ಡಿ.ಟಿ ಸಂತೋಷ್ ಪರ ವಾದ ಮಂಡಿಸಿದ ಹೈಕೋರ್ಟ್‌ನ ಹಿರಿಯ ವಕೀಲ ಟಿ.ಸುನಿಲ್ ರಾವ್ 'ಎಸ್‌ಐಟಿ ಕೊಟ್ಟಿರುವ ನೋಟಿಸ್ ಸಾಂವಿಧಾನಿಕವಾಗಿ ತಪ್ಪು ನಡೆಯಿಂದ ಕೂಡಿದೆ' ಎಂದು ಪ್ರತಿಪಾದಿಸಿದರು.

ಕೆಲಕಾಲ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ವಿವಾದಿತ ಜಮೀನಿಗೆ ಸಂಬಂಧಿಸಿದಂತೆ ರಾಮನಗರ ಜಿಲ್ಲಾಧಿಕಾರಿ ಸಮಗ್ರ ವರದಿ ಸಲ್ಲಿಸಬೇಕು' ಎಂದು ನಿರ್ದೇಶಿಸಿತು. ಅಂತೆಯೇ, ಈ ಹಿಂದಿನ ವಿಚಾರಣೆಯಲ್ಲೇ ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ನೀಡಿದ್ದ ಮಧ್ಯಂತರ ತಡೆ ಆದೇಶವನ್ನು ಇದೇ 27ರವರೆಗೆ ವಿಸ್ತರಿಸಿ ವಿಚಾರಣೆ ಮುಂದೂಡಿತು. ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ, ಮಹಮ್ಮದ್ ಜಾಫರ್ ಶಾ ಮತ್ತು ಕುಮಾರಸ್ವಾಮಿ ಪರ ವಕಾಲತ್ತು ವಹಿಸಿರುವ ಹೈಕೋರ್ಟ್ ವಕೀಲ ಎ.ವಿ.ನಿಶಾಂತ್ ಹಾಜರಿದ್ದರು.

ಪ್ರಕರಣವೇನು?: 'ಎಚ್.ಡಿ.ಕುಮಾರಸ್ವಾಮಿ, ಅವರ ಸಂಬಂಧಿಯೂ ಆದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಸೇರಿದಂತೆ ಇತರರು ರಾಮನಗರ ತಾಲ್ಲೂಕು ಬಿಡದಿ ಹೋಬಳಿಯ ಕೇತಗಾನಹಳ್ಳಿ ಸರ್ವೆ ನಂಬರ್ 8, 9, 10, 16, 17 ಮತ್ತು 79ರಲ್ಲಿ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿಯ ಅನುಸಾರ ಕ್ರಮ ಕೈಗೊಳ್ಳಬೇಕು ಎಂದು 2020ರಲ್ಲಿ ಹೈಕೋರ್ಟ್ ಆದೇಶಿಸಿತ್ತು.

'ಈ ಆದೇಶವನ್ನು ಜಾರಿಗೊಳಿಸಿಲ್ಲ' ಎಂದು ಸಮಾಜ ಪರಿವರ್ತನಾ ಸಮುದಾಯದ ಎಸ್.ಆರ್.ಹಿರೇಮಠ ಅವರು, ರಾಜ್ಯ ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದಾರೆ. ಹೀಗಾಗಿ ಐಎಎಸ್ ಅಧಿಕಾರಿ ಅಮ್ಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ 2025ರ ಜನವರಿ 28ರಂದು ಆದೇಶಿಸಲಾಗಿತ್ತು.

ಅ.16ಕ್ಕೆ ವಿಜಯಪುರ ಬಂದ್‌ಗೆ ಕರೆ

ವಿಜಯಪುರ: ಸುಪ್ರೀಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ(ಸಿಜೆಐ) ಬಿ.ಆರ್. ಗವಾಯಿ ಅವರ ಮೇಲೆ ವಕೀಲ ರಾಕೇಶ್ ಕಿಶೋರ್ ಎಂಬಾತ ಶೂ ಎಸೆಯಲು ಯತ್ನಿಸಿದ ಘಟನೆ ಖಂಡಿಸಿ ಅಕ್ಟೋಬರ್ 16ರಂದು ವಿಜಯಪುರ ನಗರ ಬಂದ್‌ಗೆ ದಲಿತ, ಅಲ್ಪಸಂಖ್ಯಾತ, ಹಿಂದುಳಿದ ಸಂಘಟನೆಗಳ ಒಕ್ಕೂಟ ಕರೆ ನೀಡಿದೆ.

'ಕೆರೆ ಬಫರ್ ವಲಯ: ವಿವರಣೆ ಶೀಘ್ರ'

ಬೆಂಗಳೂರು: ಕೆರೆಗಳ ಬಫರ್ ವಲಯಕ್ಕೆ ಸಂಬಂಧಿಸಿದ ತಿದ್ದುಪಡಿ ಮಸೂದೆ ಕುರಿತಂತೆ ಕಾನೂನು ತಜ್ಞರ ಸಲಹೆಯೊಂದಿಗೆ ರಾಜ್ಯಪಾಲರಿಗೆ ವಿವರಣೆಯನ್ನು ಶೀಘ್ರವೇ ಸಲ್ಲಿಸಲಾಗುವುದು ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ತಿಳಿಸಿದ್ದಾರೆ.

'ಬೆಂಗಳೂರಿನ ಸಂಸ್ಥೆಯೊಂದರ ದೂರನ್ನು ಆಧರಿಸಿ, ರಾಜ್ಯಪಾಲರು ವಿವರಣೆ ಕೇಳಿದ್ದಾರೆ' ಎಂದು ಹೇಳಿದ್ದಾರೆ.


ತಿದ್ದೋಲೆ: 'ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಮಸೂದೆ- 2025ಕ್ಕೆ ತಿದ್ದೋಲೆಯನ್ನು ತರಲಾಗಿದೆ' ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ತಿಳಿಸಿದ್ದಾರೆ.

ಕೆರೆಯ ಕಂದಾಯ ಗಡಿಯಿಂದ ಬಫರ್ ವಲಯವನ್ನು ಮೀಟರ್‌ಗಳಲ್ಲಿ ನಿಗದಿಪಡಿಸಲಾಗಿದೆ.

ಪರಿಷ್ಕರಣೆಯಂತೆ, 5 ಗುಂಟೆವರೆಗಿನ ಕೆರೆಗಳಿಗೆ ಬಫರ್ ವಲಯ ಇರುವುದಿಲ್ಲ. 100ಕ್ಕೂ ಹೆಚ್ಚು ಎಕರೆಯ ಕೆರೆಗೆ 30 ಮೀಟರ್ ಬಫರ್ ವಲಯ ನಿಗದಿಪಡಿಸಲಾಗಿದೆ.

ನಿಧನ ವಾರ್ತೆ

ಕೃ. ನರಹರಿ



ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿಂದಿನ ಕ್ಷೇತ್ರೀಯ ಕಾರ್ಯವಾಹ, ವಿಧಾನ ಪರಿಷತ್ತಿನ ಮಾಜಿ ಸದಸ್ಯ ಕೃ.ನರಹರಿ (93) ಬುಧವಾರ ನಿಧನರಾದರು.

ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಅಖಿಲ ಭಾರತೀಯ ಅಧ್ಯಕ್ಷರಾಗಿ, ದಿ ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಮೈಸೂರಿನವರಾದ ಕೃ. ನರಹರಿಯವರು ಬಿ.ಎಸ್‌ಸಿ, ಬಿ.ಇ ಪದವೀಧರರಾಗಿದ್ದು, ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ 24 ವರ್ಷ ಪ್ರಾಧ್ಯಾಪಕರಾಗಿದ್ದರು. ಬಳಿಕ ಸ್ವಯಂ ನಿವೃತ್ತಿ ಪಡೆದು, ವಿಧಾನ ಪರಿಷತ್‌ನಲ್ಲಿ ಸತತ 18 ವರ್ಷ ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

ಆರ್‌ಎಸ್‌ಎಸ್ ಪ್ರಚಾರಕ, ಮುಖ್ಯ ಶಿಕ್ಷಕ, ಶಾಖಾ ಕಾರ್ಯವಾಹ, ನಗರ ಕಾರ್ಯವಾಹ, ಭಾಗ ಕಾರ್ಯವಾಹ, ವಿಭಾಗ ಕಾರ್ಯವಾಹ, ಪ್ರಾಂತ ಕಾರ್ಯವಾಹ, ಕ್ಷೇತ್ರೀಯ ಕಾರ್ಯವಾಹ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ಸಂಘದ ಸಹ ಸಂಘ ಸಂಸ್ಥೆಗಳಾದ ಭಾರತೀಯ ಶಿಕ್ಷಣ ಮಂಡಳ, ಮಾಧ್ಯಮಿಕ ಶಿಕ್ಷಕ ಸಂಘದಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ರಾಷ್ಟ್ರೋತ್ಥಾನ ಪರಿಷತ್, ಮಿಥಿಕ್ ಸೊಸೈಟಿ, ಜನಸೇವಾ ವಿದ್ಯಾಕೇಂದ್ರಗಳ ಮಾರ್ಗದರ್ಶಕರಾಗಿದ್ದರು.

ಶ್ರೀರಾಂಪುರದ ಅವರ ಮನೆ 'ಚೈತನ್ಯ'ದಲ್ಲಿ ಬುಧವಾರ ಮಧ್ಯಾಹ್ನ 2.30ರವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಸಂಸದ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ವಿಧಾನಸಭೆ ವಿರೋಧ ಪಕ್ಷ ನಾಯಕ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಸಹಿತ ಅನೇಕರು ಅಂತಿಮ ದರ್ಶನ ಪಡೆದರು.

ಹರಿಶ್ಚಂದ್ರ ಘಾಟ್ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು.

ನೀರು, ವಿದ್ಯುತ್ ಸಂಪರ್ಕ: ಇಂದು ತೀರ್ಮಾನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರ (ಸಿಸಿ) ಹಾಗೂ ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ಇಲ್ಲದಿರುವ ಕಟ್ಟಡಗಳಿಗೆ ವಿದ್ಯುತ್ ಮತ್ತು ನೀರು ಸಂಪರ್ಕ ನೀಡುವ ಬಗ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಯಾವುದೇ ತೀರ್ಮಾನ ಆಗಿಲ್ಲ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ರಾಜ್ಯದ ಇತರೆಡೆಗಳಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ನೀರು ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಇರುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಈ ಸಭೆ ಕರೆಯಲಾಗಿತ್ತು.

‘ಗುರುವಾರ (ಅ.9) ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳಲು ನಿರ್ಧರಿಸಲಾಯಿತು. ಈ ಬಗ್ಗೆ ಪ್ರಸ್ತಾವ ಸಲ್ಲಿಸುವಂತೆ ಕಾನೂನು ಸಚಿವ ಎಚ್‌.ಕೆ.ಪಾಟೀಲ ಮತ್ತು ಇತರ ಇಲಾಖೆಗಳ ಸಚಿವರಿಗೆ ಮುಖ್ಯಮಂತ್ರಿ ಸೂಚಿಸಿದರು’ ಎಂದು ಸಭೆಯ ಬಳಿಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

‘30X40 ಅಡಿ ಅಳತೆಯ ನಿವೇಶನದಲ್ಲಿ ನಿರ್ಮಿಸಿದ ಕಟ್ಟಡಗಳಿಗೆ ಅನುಮತಿ ನೀಡಲು ತೀರ್ಮಾನ ಮಾಡಿದ್ದೇವೆ. ಇದರ ಅನುಷ್ಠಾನಕ್ಕೆ ಇಂಧನ ಇಲಾಖೆಗೆ ಕಾನೂನಿನ ಅಡೆತಡೆಗಳಿವೆ. ಈ ಅಡೆತಡೆಗಳನ್ನು ನಿವಾರಿಸಲು ಚರ್ಚೆ ನಡೆಸಲಾಯಿತು’ ಎಂದು ಅವರು ಹೇಳಿದರು.

‘ಈ ವಿಚಾರವಾಗಿ ಹಲವು ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳಿಗೆ ಸುಪ್ರೀಂ ಕೋರ್ಟ್ ನ್ಯಾಯಾಂಗ ನಿಂದನೆಯ ನೋಟಿಸ್ ಜಾರಿ ಮಾಡಿದೆ. ತಮಿಳುನಾಡಿನಿಂದ ಈ ಕುರಿತ ಮಾಹಿತಿಯನ್ನು ಪಡೆದಿದ್ದೇವೆ. ಕಾನೂನು ಚೌಕಟ್ಟಿನಲ್ಲಿ ದಾರಿ ಹುಡುಕುತ್ತಿದ್ದೇವೆ. ಜಿಬಿಎ ಮಾತ್ರವಲ್ಲದೇ ಇಡೀ ರಾಜ್ಯಕ್ಕೆ ಅನ್ವಯ ಆಗುವಂತೆ ಮಾಡಲು ಕಾನೂನು ತಜ್ಞರ ಜತೆ ಚರ್ಚಿಸಿ, ಪ್ರಸ್ತಾವನೆ ಸಲ್ಲಿಸಲು ಕಾನೂನು ಇಲಾಖೆಗೆ ಸೂಚಿಸಿದ್ದೇವೆ’ ಎಂದು ಶಿವಕುಮಾರ್ ಹೇಳಿದರು.

ನಗರದಲ್ಲಿ ಇಂದು

ರೈತ ಉತ್ಪಾದಕ ಸಂಸ್ಥೆಗಳ ಸಮ್ಮೇಳನ: ಉದ್ಘಾಟನೆ: ಎನ್‌.ಚಲುವರಾಯಸ್ವಾಮಿ, ಪ್ರಾಸ್ತಾವಿಕ ನುಡಿ: ಸಿ.ಎನ್‌. ಶಿವಪ್ರಕಾಶ್,ಅತಿಥಿಗಳು: ಬಿ.ಎಚ್‌.ಹರೀಶ್,ವೈ. ಸಯೀದ್ ಅಹ್ಮದ್, ನಟರಾಜ್ ಜಾನಕಿರಾಮ್, ದಯಾನಂದ ರೆಡ್ಡಿ, ಎಸ್‌. ಸೆಲ್ವಕುಮಾರ್, ವೈ.ಎಸ್‌.ಪಾಟೀಲ, ಆಯೋಜನೆ: ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಹಾಗೂ ರಫ್ತು ನಿಗಮ (ಕೆಪೆಕ್), ಸ್ಥಳ: ಟೌನ್‌ಹಾಲ್, ಜೆ.ಸಿ.ರಸ್ತೆ, ಬೆಳಿಗ್ಗೆ 10

60ನೇ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಜಿ. ಪರಮೇಶ್ವರ, ಅತಿಥಿಗಳು: ಎನ್‌. ಚಲುವರಾಯಸ್ವಾಮಿ, ಮಂಗಿ ಲಾಲ್ ಜೌಟ್, ಅಧ್ಯಕ್ಷತೆ: ಎಸ್‌.ವಿ. ಸುರೇಶ, ಆಯೋಜನೆ ಹಾಗೂ ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಸಭಾಂಗಣ, ಜಿಕೆವಿಕೆ ಆವರಣ, ಕೃಷಿ ವಿಶ್ವವಿದ್ಯಾಲಯ, ಮಧ್ಯಾಹ್ನ 2.30

‘ನೀರಿದ್ದರೆ ನಾಳೆ-ಜಲವೇ ಜಗದ ಜೀವಾಳ’ ಕಾರ್ಯಕ್ರಮ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಶೋಭಾ ಕರಂದ್ಲಾಜೆ, ವಿ.ಸೋಮಣ್ಣ, ಬಸವರಾಜ ಹೊರಟ್ಟಿ, ಡಿ.ಕೆ.ಶಿವಕುಮಾರ್, ಯು.ಟಿ.ಖಾದರ್, ಎನ್‌.ಎಸ್‌.ಬೋಸರಾಜು, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 4

‘ತ್ಯಾಗಿ’ ನಾಟಕ ಪ್ರದರ್ಶನ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ರಾಮಲಿಂಗಾರೆಡ್ಡಿ, ಆಯೋಜನೆ: ಪ್ರತಿಭಾ ಕಲಾನಿಕೇತನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ವಾದ್ಯ ಸಂಗೀತ: ಕೊಳಲು: ರಾಘವೇಂದ್ರ ಶೃಂಗೇರಿ, ಕೆ.ವಿ. ಶ್ರೇಯಸ್, ಪಿಟೀಲು: ಜಿ.ವಿ. ಶ್ರೀಹರ್ಷ, ಮೃದಂಗ: ಅನಿರುದ್ಧ ವಾಸುದೇವ್, ತಬಲಾ: ನಟರಾಜ್ ಶೃಂಗೇರಿ, ಕೀಬೋರ್ಡ್: ಟಿ.ಎಸ್‌. ರಮೇಶ್, ತಂಡ: ದಾಸ್ವಾದ ತಂಡ, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 5.15

ಪು.ತಿ. ನರಸಿಂಹಾಚಾರ್ ವಿರಚಿತ ‘ಶ್ರೀಹರಿ ಚರಿತೆ’ ಬಗ್ಗೆ ವಾಚನ: ಸುಬ್ರಹ್ಮಣ್ಯ ಭಟ್, ವ್ಯಾಖ್ಯಾನ: ಆರ್‌.ಎಸ್‌. ಪ್ರಗಲ್ಭ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಎಚ್‌.ಸಿದ್ದಯ್ಯ ರಸ್ತೆ, ಹೊಂಬೇಗೌಡ ನಗರ, ಸಂಜೆ 6.30

ಹರಿನಾಮ ಘೋಷ: ಗಾಯನ: ಸೌಜನ್ಯ ಎಸ್‌. ಆಚಾರ್, ಕೀಬೋರ್ಡ್: ಗಣೇಶ್ ಪ್ರಸಾದ್, ತಬಲಾ: ಪ್ರೀತಮ್ ಹಳಿಬಂಡಿ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in



ಔಷಧ ಕೊರತೆ ನೀಗಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳಲ್ಲಿ ಶೇ 75ರಷ್ಟು ಔಷಧಗಳು ಮಾತ್ರ ಸಿಗುತ್ತಿವೆ. ಉಳಿದ ಶೇ 25ರಷ್ಟು ಔಷಧಗಳನ್ನು ಹೊರಗಿನಿಂದ ಖರೀದಿಸಬೇಕಾಗಿದ್ದು, ಈ ಕೊರತೆಯನ್ನು ನೀಗಿಸಬೇಕು ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಒತ್ತಾಯಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಗಳ ಅವ್ಯವಸ್ಥೆಯ ಕುರಿತು ದೂರುಗಳು ಬಂದ ಕಾರಣ ಬುಧವಾರ ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು. ಬಡವರು ಔಷಧದ ಅಂಗಡಿಗಳಿಗೆ ಹೋಗಿ ಖರೀದಿಸುವ ಶಕ್ತಿ ಹೊಂದಿರುವುದಿಲ್ಲ. ಸರ್ಕಾರ ಇದನ್ನು ಸೂಕ್ಷ್ಮವಾಗಿ ಗಮನಿಸಬೇಕು ಮತ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

‘ಎಂಜಿನಿಯರ್‌ಗಳ ನೇಮಕಾತಿ ಮರು ಪರಿಶೀಲಿಸಿ’

ಪ್ರಜಾವಾಣಿ ವಾರ್ತೆ



ಪುರುಷೋತ್ತಮ ಬಿಳಿಮಲೆ

ಬೆಂಗಳೂರು: ‘ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಸಂಸ್ಥೆಯ ಟ್ರೈನಿ ಎಂಜಿನಿಯರ್‌ಗಳ ನೇಮಕಾತಿ ಪ್ರಕ್ರಿಯೆಯನ್ನು ಕೂಡಲೇ ಮರುಪರಿಶೀಲಿಸಿ, ಕನ್ನಡಿಗರಿಗೆ ನ್ಯಾಯ ದೊರಕಿಸಿಕೊಡಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಪತ್ರ ಬರೆದಿದ್ದಾರೆ. ‘ಬಿಇಎಲ್ ಸಂಸ್ಥೆಯು ಇತ್ತೀಚೆಗೆ ತನ್ನ ಬೆಂಗಳೂರು ಕೇಂದ್ರಕ್ಕೆ ಟ್ರೈನಿ ಎಂಜಿನಿಯರ್‌ಗಳ ನೇಮಕಾತಿಗೆ ಪ್ರಕಟಣೆ ಹೊರಡಿಸಿದೆ. ಈ ನೇಮಕಾತಿ ಅಧಿಸೂಚನೆ ಕೇವಲ ಆಂಗ್ಲ ಮತ್ತು ಹಿಂದಿ ಭಾಷೆಯಲ್ಲಿದೆ. ಸ್ಥಳೀಯ ಕನ್ನಡಿಗರಿಗೆ ಯಾವ ಅವಕಾಶವೂ ದೊರೆಯದ ರೀತಿಯಲ್ಲಿ ಈ ಅಧಿಸೂಚನೆ ಸಿದ್ಧಗೊಂಡಿದೆ’ ಎಂದಿದ್ದಾರೆ.

‘ಸಂವಿಧಾನದ ಒಕ್ಕೂಟ ತತ್ವವನ್ನು ಈ ಅಧಿಸೂಚನೆ ಗಾಳಿಗೆ ತೂರಿದೆ. ಬಿಇಎಲ್ ಸಂಸ್ಥೆಯು ಬೆಳೆಯಲು ಕನ್ನಡಿಗರು ಕಾರಣಕರ್ತರಾಗಿದ್ದಾರೆ. ಹಾಗಾಗಿ, ಸಮತೋಲಿತ ನೇಮಕಾತಿ ಪ್ರಕ್ರಿಯೆಯು ರಾಷ್ಟ್ರೀಯ ಏಕತೆಯನ್ನು ಪ್ರೋತ್ಸಾಹಿಸುತ್ತದೆ’ ಎಂದು ಹೇಳಿದ್ದಾರೆ.





ಆರ್.ಅಶೋಕ ಬೆಂಗಾವಲು ವಾಹನದ ಚಾಲಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಶರಣಪ್ಪ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಪೊಲೀಸ್ ಬೆಂಗಾವಲು ವಾಹನದ ಚಾಲಕ (ನಗರ ಸಶಸ್ತ್ರ ಮೀಸಲು ಪೊಲೀಸ್ ಪಡೆ) ಶರಣಪ್ಪ (34) ಅವರು ಬುಧವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಾಪೂಜಿ ನಗರದ ಬಾಡಿಗೆ ಮನೆಯಲ್ಲಿ ಶರಣಪ್ಪ ಅವರು ಪತ್ನಿ ಶೈಲಶ್ರೀ ಹಾಗೂ ಇಬ್ಬರು ಹೆಣ್ಣು ಮಕ್ಕಳ ಜತೆಗೆ ನೆಲಸಿದ್ದರು. ಶೈಲಶ್ರೀ ಅವರು ಮಾಗಡಿ ರಸ್ತೆ ಸಂಚಾರ ಪೊಲೀಸ್ ಠಾಣೆಯಲ್ಲಿ ಕಾನ್‌ಸ್ಟೆಬಲ್ ಆಗಿ ಕೆಲಸ ಮಾಡುತ್ತಿದ್ದಾರೆ.

ಮನೆಯಲ್ಲಿ ಯಾರೂ ಇಲ್ಲದ ವೇಳೆ ಅವರು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ಮೂಲತಃ ಕಲಬುರಗಿ ಜಿಲ್ಲೆಯ ಶರಣಪ್ಪ ಅವರು ಕಳೆದ ಎರಡೂವರೆ ವರ್ಷದಿಂದ ಅಶೋಕ್ ಬೆಂಗಾವಲು ವಾಹನ ಚಾಲಕರಾಗಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ರಾಷ್ಟ್ರ ನಿರ್ಮಾಣದಲ್ಲಿ ಭಾಗಿಯಾಗಿ'

ಬೆಂಗಳೂರು ವಿ.ವಿ ಘಟಿಕೋತ್ಸವದಲ್ಲಿ ಪ್ರಹ್ಲಾದ್ ರಾಮರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಪಡೆಯುವುದು ಜೀವನದ ಕೊನೆಯ ಘಟ್ಟವಲ್ಲ. ಕಲಿಕೆ ಎಂದಿಗೂ ಕೊನೆಗೊಳ್ಳುವುದಿಲ್ಲ. ಇದು ಬದುಕಿನ ಮುಂದಿನ ಅಧ್ಯಾಯದ ಆರಂಭ. ಮಹಾನ್ ಸಾಧನೆ ಮಾಡುವ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ನೀವು ಭಾಗಿಗಳಾಗಬೇಕು ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯದ (ಡಿಆರ್‌ಡಿಎಲ್) ಮಾಜಿ ನಿರ್ದೇಶಕ ಪ್ರಹ್ಲಾದ್ ರಾಮರಾವ್ ತಿಳಿಸಿದರು.

ಬುಧವಾರ ನಡೆದ ಬೆಂಗಳೂರು ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಶಕ್ತಿ ಕೇವಲ ವಯಸ್ಸಿನಲ್ಲಿಲ್ಲ. ಶಿಕ್ಷಣ, ಜ್ಞಾನದಲ್ಲಿಯೂ ಇಲ್ಲ. ಸ್ಪಷ್ಟ ನಿರ್ಧಾರ, ಸವಾಲುಗಳನ್ನು ಎದುರಿಸುವ ಚಾಕಚಕ್ಯತೆ, ಸಮಸ್ಯೆ ಪರಿಹರಿಸುವ ಬದ್ಧತೆ, ಕಠಿಣ ಪರಿಶ್ರಮದಲ್ಲಿ ನಿಮ್ಮ ಶಕ್ತಿ ಇದೆ. ಧೈರ್ಯಶಾಲಿ ಮನಸ್ಸಿನಲ್ಲಿದೆ ಎಂದು ವಿವರಿಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, 'ಶಿಕ್ಷಣದ ಉದ್ದೇಶ ಜ್ಞಾನ ಗಳಿಸುವುದಷ್ಟೇ ಅಲ್ಲ. ಗಳಿಸಿದ ಜ್ಞಾನ ಸಮಾಜದ ಕಲ್ಯಾಣಕ್ಕಾಗಿ ಉಪಯೋಗವಾಗಬೇಕು. ಇಂದು ಪದವಿ ಪಡೆದವರೆಲ್ಲ ಸಮಾಜ ಮತ್ತು ರಾಷ್ಟ್ರದ ಹಿತಕ್ಕಾಗಿ ಕೆಲಸ ಮಾಡಬೇಕು' ಎಂದು ಸಲಹೆ ನೀಡಿದರು.

ವಿಶ್ವವಿದ್ಯಾಲಯಗಳು ಸಂಶೋಧನೆ, ನಾವೀನ್ಯತೆ, ಸ್ಥಳೀಯ ಭಾಷೆಗಳ ಮೂಲಕ ಉನ್ನತ ಶಿಕ್ಷಣ ಪ್ರಚಾರ, ಪರಿಸರ ಸಂರಕ್ಷಣೆ ಮತ್ತು ಸ್ವಚ್ಛತಾ ಅಭಿಯಾನಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಹೇಳಿದರು.

ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಮಾತನಾಡಿ, 'ಅವಕಾಶಗಳು ಬಹಳಷ್ಟಿವೆ. ಆದರೆ, ನೀವೇ ಅವನ್ನು ಹುಡುಕಿಕೊಂಡು ಹೋಗಿ ಬದುಕು ರೂಪಿಸಿಕೊಳ್ಳಬೇಕು. ಸೋಲು, ಸವಾಲುಗಳನ್ನು ಎದುರಿಸಲು ಕಲಿಯಬೇಕು' ಎಂದು ಸಲಹೆ ನೀಡಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಂ.ಎಸ್. ಜಯಕರ್ ಉಪಸ್ಥಿತರಿದ್ದರು. ಘಟಿಕೋತ್ಸವದಲ್ಲಿ 9,878 ವಿದ್ಯಾರ್ಥಿಗಳು, 13,510 ವಿದ್ಯಾರ್ಥಿನಿಯರು ಸೇರಿ 23,388 ಮಂದಿಗೆ ಪದವಿ, 64 ಪುರುಷ ಹಾಗೂ 76 ಮಹಿಳಾ ಅಭ್ಯರ್ಥಿಗಳು ಸೇರಿ 140 ಮಂದಿಗೆ ಪಿಎಚ್‌.ಡಿ ಪದವಿ ಪ್ರದಾನ ಮಾಡಲಾಯಿತು.

ಗೌರವ ಡಾಕ್ಟರೇಟ್

ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಯನ್ನು ವಿಧಾನ ಪರಿಷತ್ ಮಾಜಿ ಸದಸ್ಯ ಡಿ. ಮಾದೇಗೌಡ ಮತ್ತು ಜೆ.ಪಿ.ಅಗ್ರಿ ಜೆನೆಟಿಕ್ಸ್ ಸಂಸ್ಥಾಪಕ ಟಿ.ಬಿ. ಪ್ರಸನ್ನ ಸ್ವೀಕರಿಸಿದರು. ಗೌರವ ಡಾಕ್ಟರೇಟ್‌ಗೆ ಪಾತ್ರರಾಗಿದ್ದ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಗೈರು ಹಾಜರಾಗಿದ್ದರು.



ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರಸನ್ನ ಟಿ.ಬಿ. ಮತ್ತು ಡಿ, ಮಾದೇಗೌಡ ಅವರಿಗೆ ಗೌರವ ಡಾಕ್ಟರೇಟ್ ಅನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರದಾನ ಮಾಡಿದರು — ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಜೈಲಿನ ಇಬ್ಬರ ಅಮಾನತು

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ರೌಡಿಶೀಟರ್ ಜನ್ಮದಿನ ಆಚರಣೆಗೆ ನೆರವು ನೀಡಿದ್ದ ಪ್ರಕರಣದಲ್ಲಿ ಕಾರಾಗೃಹದ ಮುಖ್ಯ ವೀಕ್ಷಕ ಹಾಗೂ ವೀಕ್ಷಕನನ್ನು ಅಮಾನತು ಮಾಡಲಾಗಿದೆ. ಉಳಿದ ಐವರನ್ನು ಗುರುವಾರ ಅಮಾನತು ಮಾಡುವ ಸಾಧ್ಯತೆ ಇದೆ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಮೂಲಗಳು ತಿಳಿಸಿವೆ.

ವಿಚಾರಣಾಧೀನ ಕೈದಿಯಾಗಿರುವ ಸರ್ಜಾಪುರದ ರೌಡಿಶೀಟರ್ ಶ್ರೀನಿವಾಸ್ ಅಲಿಯಾಸ್ ಗುಬ್ಬಚ್ಚಿ ಸೀನ ಜನ್ಮದಿನ ಆಚರಣೆ ನಡೆಸಿದ್ದ ವಿಡಿಯೊ ಹಾಗೂ ಫೋಟೊಗಳು ಜಾಲತಾಣಗಳಲ್ಲಿ ಹರಿದಾಡಿದ್ದವು. ಅದರ ಬೆನ್ನಲ್ಲೇ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಮಹಾನಿರ್ದೇಶಕ ಬಿ.ದಯಾನಂದ ಅವರು ತನಿಖೆಗೆ ಆದೇಶಿಸಿದ್ದರು.

ಇಲಾಖೆಯ ಉಪ ಮಹಾನಿರೀಕ್ಷಕಿ ಕೆ.ಸಿ.ದಿವ್ಯಾ ಅವರು (ದಕ್ಷಿಣ ವಲಯ) ಅ.10ರಂದು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು.

'ಪ್ರಕರಣದಲ್ಲಿ ಏಳು ಸಿಬ್ಬಂದಿ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿದೆ. ಜೈಲಿನ ಮುಖ್ಯ ವೀಕ್ಷಕ ಹಾಗೂ ವೀಕ್ಷಕನನ್ನು ಅಮಾನತು ಮಾಡಲಾಗಿದೆ. ಸಹಾಯಕ ಅಧೀಕ್ಷಕ, ಇಬ್ಬರು ಜೈಲರ್ ಹಾಗೂ ಇಬ್ಬರು ಸಹಾಯಕ ಜೈಲರ್‌ಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ತನಿಖಾ ತಂಡವು ಶಿಫಾರಸು ಮಾಡಿದೆ' ಎಂದು ಮೂಲಗಳು ತಿಳಿಸಿವೆ.

ಎನ್‌ಸಿಆರ್ ದಾಖಲು: ಜೈಲಿನ ಅಧಿಕಾರಿಗಳು ನೀಡಿದ ದೂರಿನ ಅನ್ವಯ ರೌಡಿಶೀಟರ್ ಶ್ರೀನಿವಾಸ್ ಅಲಿಯಾಸ್ ಗುಬ್ಬಚ್ಚಿ ಸೀನ ಮತ್ತು ಈತನ ಸಹಚರರ ವಿರುದ್ಧ ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಎನ್‌ಸಿಆರ್(ಗಂಭೀರ ಸ್ವರೂಪವಲ್ಲದ ಪ್ರಕರಣ) ದಾಖಲಿಸಿದ್ದಾರೆ.



ಜನವರಿಯಲ್ಲಿ ಸರ್ಜಾಪುರದ ರೌಡಿ ವೆಂಕಟೇಶ್ ಎಂಬುವರನ್ನು ಕೊಲೆ ಮಾಡಿದ್ದ ಪ್ರಕರಣದಲ್ಲಿ ಶ್ರೀನಿವಾಸ್ ಹಾಗೂ ಸಹಚರರು ಜೈಲು ಸೇರಿದ್ದಾರೆ. ಜನ್ಮದಿನವನ್ನು ಆಚರಿಸಿಕೊಂಡಿದ್ದ ವಿಡಿಯೊವನ್ನು ಸಾಗರ್ ಎಂಬ ಹೆಸರಿನ 'ಎಕ್ಸ್' ಖಾತೆಯಲ್ಲಿ ಹಂಚಿಕೊಳ್ಳಲಾಗಿತ್ತು.

'ಆಜಾದ್ ಕಾಶ್ಮೀರ' ಬರಹವಿದ್ದ ಶರ್ಟ್ ಧರಿಸಿ ಓಡಾಟ: ವಿಚಾರಣೆ

ಬೆಂಗಳೂರು: 'ಆಜಾದ್ ಕಾಶ್ಮೀರ' ಎಂಬ ಬರಹವಿದ್ದ ಟೀ-ಶರ್ಟ್ ಧರಿಸಿಕೊಂಡು ಓಡಾಡುತ್ತಿದ್ದ ಯುವಕನ ವಿರುದ್ಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಠಾಣೆಯ ಪಿಎಸ್‌ಐ ಮೋಹನ್‌ಕುಮಾರ್ ಅವರು ನೀಡಿದ ದೂರು ಆಧರಿಸಿ ಕೆಂಗುಂಟೆ ವೃತ್ತದ ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿ ಇನಾಯತ್ ಅಮೀನ್ (20) ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 196 ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿದ್ಯಾರ್ಥಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

'ತನಗೆ ಬೇರೊಬ್ಬರು ಟೀ-ಶರ್ಟ್ ನೀಡಿದ್ದರು. ಹಿಂಬದಿಯಲ್ಲಿ 'ಆಜಾದ್ ಕಾಶ್ಮೀರ' ಎನ್ನುವ ಬರಹ ಇದ್ದುದು ಗಮನಕ್ಕೆ ಬಂದಿರಲಿಲ್ಲ' ಎಂಬುದಾಗಿ ವಿದ್ಯಾರ್ಥಿ ಹೇಳಿಕೆ ನೀಡಿದ್ದಾನೆ ಎಂದು ಗೊತ್ತಾಗಿದೆ.

'ಯುವಕನಿಗೆ ಎಚ್ಚರಿಕೆ ನೀಡಿ ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮೋಹನ್ ಕುಮಾರ್ ಅವರು ಠಾಣೆಯಲ್ಲಿ ಸಾಮಾಜಿಕ ಜಾಲತಾಣ ವಿಭಾಗದ ನೋಡಲ್ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಸೆ.23ರಂದು ಬೆಳಿಗ್ಗೆ 10ರ ಸುಮಾರಿಗೆ ಸಾಮಾಜಿಕ ಜಾಲತಾಣಗಳಲ್ಲಿನ ಪೋಸ್ಟ್ ಪರಿಶೀಲನೆ ನಡೆಸುತ್ತಿದ್ದ ವೇಳೆ, ಇನ್‌ಸ್ಟಾಗ್ರಾಂ ಖಾತೆಯಲ್ಲಿ ಅಪ್‌ಲೋಡ್ ಮಾಡಿದ್ದ ವಿಡಿಯೊವೊಂದು ಗಮನಕ್ಕೆ ಬಂದಿತ್ತು. ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಕುಳಿತಿದ್ದ ವಿದ್ಯಾರ್ಥಿ ಧರಿಸಿದ್ದ ಟೀ-ಶರ್ಟ್‌ನಲ್ಲಿ ಆಜಾದ್ ಕಾಶ್ಮೀರ ಎಂದು ಬರೆಯಲಾಗಿತ್ತು. ಸಮಾಜದ ಸಾಮರಸ್ಯಕ್ಕೆ ಧಕ್ಕೆ ತರುವ ಕೃತ್ಯದಲ್ಲಿ ಭಾಗಿಯಾದ ಆರೋಪದಡಿ ಆತನ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಬಡತನ ಮೀರಿದ ಪ್ರತಿಭೆಗಳಿಗೆ ಪದಕದ ಗರಿ

ಬೆಂಗಳೂರು ವಿ.ವಿ: ಪದಕ ಪಡೆದ ಬೀದಿಬದಿ ವ್ಯಾಪಾರಿ ಮಗಳು, ಆಟೊ ಡ್ರೈವರ್ ಮಗ, ರೈತನ ಮಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಬೀದಿಬದಿ ವ್ಯಾಪಾರಿಯ ಮಗಳು 11 ಚಿನ್ನದ ಪದಕ, ಆಟೊ ಚಾಲಕನ ಮಗ ಹಾಗೂ ರೈತನ ಮಗಳು ತಲಾ ಏಳು ಚಿನ್ನದ ಪದಕ ಪಡೆದು ಪ್ರತಿಭೆಗೆ ಬಡತನದ ಹಂಗಿಲ್ಲ ಎಂದು ಸಾಬೀತುಪಡಿಸಿದ್ದಾರೆ.

ಎಂ.ಎ. ಕನ್ನಡ ವಿಭಾಗದಲ್ಲಿ ಪ್ರೇಮಾ ಎಸ್. 11 ಚಿನ್ನದ ಪದಕಗಳನ್ನು ಪಡೆದರು. ಅವರ ತಂದೆ ಜಾಲಹಳ್ಳಿ ಕ್ರಾಸ್ ನಿವಾಸಿ ಶರಣಪ್ಪ ಮುದಿಯಪ್ಪ ಮುಕ್ಕಣ್ಣವರ್ ಬೀದಿಬದಿ ವ್ಯಾಪಾರಿ. ತಾಯಿ ಸಾವಿತ್ರಿ ಬೇರೆಯವರ ಮನೆಯಲ್ಲಿ ಚಪಾತಿ ತಯಾರಿಸಿ ಹೋಟೆಲ್‌ಗಳಿಗೆ ನೀಡುವ ಕೆಲಸ ಮಾಡುತ್ತಾರೆ.

'ಬಿ.ಇಡಿ ಮಾಡ್ತಾ ಇದ್ದೇನೆ. ಪಿಎಚ್‌.ಡಿ. ಮಾಡಬೇಕು. ಸಹಾಯಕ ಪ್ರಾಧ್ಯಾಪಕಿ ಆಗಬೇಕು' ಎಂದು ಪ್ರೇಮಾ ತನ್ನ ಕನಸುಗಳನ್ನು ಹಂಚಿಕೊಂಡರು. 'ನಾವಂತೂ ಓದಿಲ್ಲ. ಮಗಳು ಪ್ರೇಮಾ, ಮಗ ಪ್ರಶಾಂತ್ ಆದರೂ ಓದಲಿ' ಎಂದು ಹೆತ್ತವರು ಅಭಿಮಾನದಿಂದ ಹೇಳಿಕೊಂಡರು.

ಎಂ.ಎಸ್‌ಸಿ ರಸಾಯನ ವಿಜ್ಞಾನ ವಿಭಾಗದಲ್ಲಿ ವಿದ್ಯಾಶ್ರೀ ಬಿ.ಎಸ್. ಏಳು ಪದಕಗಳನ್ನು ಪಡೆದಿದ್ದಾರೆ. ಇವರ ತಂದೆ ಸೋಮಶೇಖರ್ ಎ. ಮತ್ತು ತಾಯಿ ರೂಪಾ ದೇವಿ ಕೋಲಾರ ಜಿಲ್ಲೆಯ ಬೆಳಮಾರನಹಳ್ಳಿಯಲ್ಲಿ ಕೃಷಿಕರಾಗಿದ್ದಾರೆ.

'ಪಿಎಚ್‌.ಡಿ ಮಾಡಬೇಕು. ಪ್ರಾಧ್ಯಾಪಕಿಯಾಗಬೇಕು' ಎಂದು ಮಗಳು ಕನಸು ಇಟ್ಟುಕೊಂಡಿದ್ದರೆ, ಇಷ್ಟು ಓದಿಸಿದ್ದೇ ಕಷ್ಟದಲ್ಲಿ, ಇನ್ನು ಎಲ್ಲಿಯಾದರೂ ಉದ್ಯೋಗ ಹುಡುಕಬೇಕು' ಎಂದು ಹೆತ್ತವರು ಹೇಳಿಕೊಂಡರು.

ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಹೇಮಂತ್ ಎ.ಎಸ್. ಏಳು ಚಿನ್ನದ ಪದಕ ಪಡೆದಿದ್ದಾರೆ. ಇವರು ಶಿವಮೊಗ್ಗದ ಅಬ್ಬಲಗೆರೆ ಗ್ರಾಮದ ಕಲ್ಲಗಂಗೂರು ನಿವಾಸಿ ಶಿವಕುಮಾರ್–ಭಾಗ್ಯಲಕ್ಷ್ಮೀ ದಂಪತಿಯ ಮಗ. ಶಿವಕುಮಾರ್ ಆಟೊ ಚಾಲಕರಾಗಿ ದುಡಿದು ಕುಟುಂಬವನ್ನು ಸಾಕುತ್ತಿದ್ದಾರೆ. ಭಾಗ್ಯಲಕ್ಷ್ಮೀ ಗೃಹಿಣಿ.

'ಸರ್ಕಾರಿ ಉದ್ಯೋಗಕ್ಕಾಗಿ ಪರೀಕ್ಷೆ ಬರೆಯಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ. ಜೊತೆಗೆ ಶೋಭಾ ಲಿಮಿಟೆಡ್ ಎಂಬ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ' ಎಂದು ಹೇಮಂತ್ ತಿಳಿಸಿದರು.

ಏಳು ಪದಕಗಳನ್ನು ಪಡೆದವರಲ್ಲಿ ರುಫಿಯಾ ಕೆ.ಎಂ. ಕೂಡ ಒಬ್ಬರು. ಅವರು ಎಂ.ಎಸ್‌ಸಿ ಭೌತವಿಜ್ಞಾನದಲ್ಲಿ ಈ ಸಾಧನೆ ಮಾಡಿದ್ದಾರೆ. ತಂದೆ ಕೆಎಸ್‌ಆರ್‌ಟಿಸಿಯಲ್ಲಿ ಸಂಚಾರ ನಿಯಂತ್ರಣಾಧಿಕಾರಿ. ತಾಯಿ ನಹೀದಾ ನುಜ್ರತ್ ಗೃಹಿಣಿಯಾಗಿದ್ದಾರೆ. ಚಿಂತಾಮಣಿಯ ರುಫಿಯಾ 'ಪ್ರಾಧ್ಯಾಪಕಿಯಾಗಬೇಕು' ಎಂಬ ಗುರಿ ಇಟ್ಟುಕೊಂಡಿದ್ದಾರೆ.



ಚಿನ್ನದ ಪದಕ ಪಡೆದ ಹೇಮಂತ್ ಎ.ಎಸ್., ವಿದ್ಯಾಶ್ರೀ ಬಿ.ಎಸ್., ಪ್ರೇಮಾ ಎಸ್., ರುಫಿಯಾ ಕೆ.ಎಂ. ಪರಸ್ಪರ ಅಭಿನಂದಿಸಿ ಸಂಭ್ರಮಿಸಿದರು — ಪ್ರಜಾವಾಣಿ ಚಿತ್ರ



ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ರ್‍ಯಾಂಕ್ ಪಡೆದ ಯುನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್ ಕಾಲೇಜಿನ ವಿದ್ಯಾರ್ಥಿಗಳು

ಯುನಿವರ್ಸಲ್ ಕಾಲೇಜಿಗೆ ರ್‍ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಯುನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್‌ನ ವಿದ್ಯಾರ್ಥಿಗಳು ಅತ್ಯುತ್ತಮ ರ್‍ಯಾಂಕ್ ಮತ್ತು ನಗದು ಬಹುಮಾನಗಳನ್ನು ಪಡೆದಿದ್ದಾರೆ.

ಬಿ.ಎ. ವಿಭಾಗದಲ್ಲಿ ಕೆ.ಎಸ್. ವಿಷ್ಣು ಕುಮಾರ್ ಜಾನ್ ಎಫ್. ಕೆನಡಿ ಸ್ಮಾರಕ ಚಿನ್ನದ ಪದಕ, ಎನ್. ಅನಂತಾಚಾರ್ ಸ್ಮಾರಕ ಚಿನ್ನದ ಪದಕ, ಎಂಇಎಸ್ ಕಾಲೇಜು ರಜತ ಮಹೋತ್ಸವ ಬಹುಮಾನ ಪಡೆದಿದ್ದಾರೆ.

ಪಲ್ನಾಟಿ ಕಾವ್ಯ ಅವರು ಎಂ. ಶ್ರೀನಿವಾಸ ಅಯ್ಯಂಗಾರ್ ಮತ್ತು ದೊರೆಸಾಲಮ್ಮ ಸ್ಮಾರಕ ಚಿನ್ನದ ಪದಕ, ಕೆನರಾ ಬ್ಯಾಂಕ್ ವಜ್ರ ಮಹೋತ್ಸವ ಸ್ಮಾರಕ ಬಹುಮಾನ, ಟಿ. ಶಿವಣ್ಣ ಅಭಿನಂದನಾ ಸಮಿತಿ ಚಿನ್ನದ ಪದಕ ಪಡೆದರು. ಧನ್ಯ ರೆಡ್ಡಿ ಎಸ್. ಅವರು ಮಿಸೆಸ್ ಮೇರಿ ಕೋದಂಡ ರಾವ್ ಬಹುಮಾನ ಸ್ವೀಕರಿಸಿದರೆ, ಸಾರ್ವಿನಾ ಪಿ. ಅವರು ಕೆನರಾ ಬ್ಯಾಂಕ್ ವಜ್ರಮಹೋತ್ಸವ ಬಹುಮಾನ ಗಳಿಸಿದರು ಎಂದು ಯುನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್ ಕಾಲೇಜಿನ ಚೇರ್ಮನ್ ಆರ್. ಉಪೇಂದ್ರ ಶೆಟ್ಟಿ ತಿಳಿಸಿದ್ದಾರೆ.

'ಕುತಂತ್ರ ಬಹಿರಂಗಗೊಳ್ಳಲಿ'

ಪ್ರಜಾವಾಣಿ ವಾರ್ತೆ



ರಮೇಶ್ ಬಾಬು

ಬೆಂಗಳೂರು: 'ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಮೇಲೆ ಶೂ ಎಸೆಯುವ ಯತ್ನವು ಮನುವಾದದ ಬೆಂಬಲಿಗರ ಷಡ್ಯಂತ್ರದ ಭಾಗ. ಇದರ ಹಿಂದಿರುವ ಕೈಗಳನ್ನು ಪತ್ತೆ ಮಾಡಲು ಉನ್ನತ ಮಟ್ಟದ ತನಿಖೆ ನಡೆಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯಲಾಗಿದೆ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಕುರಿತು ಉನ್ನತ ಮಟ್ಟದ ನ್ಯಾಯಾಂಗ ತನಿಖೆ ಆಗಬೇಕು' ಎಂದರು.

'ಇಡೀ ದೇಶದಲ್ಲಿ ಯಾವುದೇ ಸಣ್ಣ ಘಟನೆಯಾದರೂ ಪ್ರಚಾರದ ಉದ್ದೇಶಕ್ಕಾದರೂ ಪ್ರಧಾನಿ 'ಎಕ್ಸ್' ಮಾಡುತ್ತಾರೆ. ಆದರೆ, ಶೂ ಎಸೆತ ಘಟನೆಯಾದ ಆರು ಗಂಟೆಗಳ ನಂತರ ಪ್ರತಿಕ್ರಿಯೆ ನೀಡಿದ್ದಾರೆ' ಎಂದರು.

'ಗ್ವಾಲಿಯರ್ ವಕೀಲರ ಸಂಘದ ಮಾಜಿ ಅಧ್ಯಕ್ಷ ಅನಿಲ್ ಮಿಶ್ರಾ ಎನ್ನುವ ವ್ಯಕ್ತಿ ಅಂಬೇಡ್ಕರ್ ಅವರು ಕೊಳಕು ಮನಸ್ಸಿನ ವ್ಯಕ್ತಿ ಎಂದಿದ್ದಾರೆ. ಬಿಜೆಪಿ ಸಿದ್ಧಾಂತ ಎಂದಿಗೂ ಪರಿಶಿಷ್ಟ ಜಾತಿ, ಪಂಗಡದ ಪರವಾಗಿಲ್ಲ' ಎಂದು ತಿಳಿಸಿದರು.

'ಸಿಜೆಗೆ ತಮ್ಮ ಮಾತುಗಳನ್ನು ಹಿಂಪಡೆಯಲು ಹೇಳೋಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಪ್ರಕರಣವೊಂದರ ವಿಚಾರಣೆ ವೇಳೆ ಮೌಖಿಕವಾಗಿ ಆ ರೀತಿ ಮಾತನಾಡಬಾರದಿತ್ತು. ಅವರು ಆಡಿರುವ ತಮ್ಮ ಮಾತುಗಳನ್ನು ಹಿಂತೆಗೆಯಲು ಹೇಳೋಣ' ಎಂದು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ನುಡಿದರು.

ತೆರೆದ ನ್ಯಾಯಾಲಯದಲ್ಲಿ ಕಲಾಪದ ವೇಳೆ ಮುಖ್ಯ ನ್ಯಾ. ಗವಾಯಿ ಅವರಿಗೆ ಸುಪ್ರೀಂ ಕೋರ್ಟ್ ವಕೀಲ ರಾಕೇಶ್ ಶೂ ಎಸೆಯಲು ಯತ್ನಿಸಿದ್ದನ್ನು ಖಂಡಿಸಿ ಬುಧವಾರ ಹೈಕೋರ್ಟ್‌ನ 'ಗೋಲ್ಡನ್ ಗೇಟ್' ಮುಂಭಾಗ 'ಬೆಂಗಳೂರು ವಕೀಲರ ಸಂಘ' ಪ್ರತಿಭಟನೆ ನಡೆಸಿತು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, 'ವಕೀಲರು ಶೂ ಎಸೆಯಲು ಯತ್ನಿಸಿದ ಕೃತ್ಯವು ಪ್ರಜಾಪ್ರಭುತ್ವದ ಕಂಬಗಳನ್ನು ಅಲ್ಲಾಡಿಸುವ ಅಪಾಯಕಾರಿ ಪ್ರಯತ್ನ. ಇದನ್ನು ಸಹಿಸಲು ಆಗದು. ಯಾರು ಏನೇ ಹೇಳಿದರೂ ಈ ಘಟನೆ ಇತಿಹಾಸದಲ್ಲಿ ಕಪ್ಪುಚುಕ್ಕೆಯಾಗಿ ಉಳಿಯುತ್ತದೆ' ಎಂದು ವಿಷಾದಿಸಿದರು.

ಸಂಘದ ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ್ ಮಾತನಾಡಿ, 'ನ್ಯಾಯಾಂಗವನ್ನು ದುರ್ಬಲಗೊಳಿಸಲು ಅನೇಕ ಬಾರಿ ಹಲ್ಲೆಗಳು ನಡೆದಿವೆ. ಅಧಿಕಾರಸ್ಥರು ಸ್ವತಂತ್ರ ನ್ಯಾಯಾಂಗದ ಗಟ್ಟಿ ವ್ಯವಸ್ಥೆಯನ್ನು ಯಾವತ್ತೂ ಸಹಿಸುವುದಿಲ್ಲ' ಎಂದರು. ಪ್ರತಿಭಟನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎಚ್‌.ವಿ.ಪ್ರವೀಣ್ ಗೌಡ, ಉಪಾಧ್ಯಕ್ಷ ಸಿ.ಎಸ್.ಗಿರೀಶ್ ಕುಮಾರ್, ಖಜಾಂಚಿ ಶ್ವೇತಾ ರವಿಶಂಕರ್, ಸಂಘದ ಪದಾಧಿಕಾರಿಗಳಾದ ಕೆ.ಚಂದ್ರಕಾಂತ ಪಾಟೀಲ ಎಸ್.ರಾಜು, ಎಂ.ಚಾಮರಾಜ, ಆತ್ಮ ವಿ.ಹಿರೇಮಠ, ಪಿ.ಅರವಿಂದ ಕಾಮತ್, ತಮ್ಮಯ್ಯ ಮತ್ತು ಪದಾಂಕಿತ ಹಿರಿಯ ಡಿ.ಎಲ್.ಜಗದೀಶ್, ಜಿ.ಆರ್.ಮೋಹನ್, ವೆಂಕಟೇಶ ದೊಡ್ಡೇರಿ, ಮುನಿಗಂಗಪ್ಪ ಇದ್ದರು.

ಶೂ ಎಸೆಯಲು ಯತ್ನ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ವಕೀಲರೊಬ್ಬರು ಶೂ ಎಸೆಯಲು ಯತ್ನಿಸಿದ ಕೃತ್ಯ ಖಂಡಿಸಿ ನಗರದಲ್ಲಿ ಸರಣಿ ಪ್ರತಿಭಟನೆಗಳು ನಡೆದವು.

ಸ್ವಾತಂತ್ರ್ಯ ಉದ್ಯಾನದಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದಿಂದ ಶೂ ಎಸೆಯಲು ಯತ್ನಿಸಿದ ವಕೀಲರ ಪ್ರತಿಕೃತಿ ದಹನ ಮಾಡಲಾಯಿತು.

ಈ ವೇಳೆ ಮಾತನಾಡಿದ ಆರ್‌ಪಿಐ ರಾಷ್ಟ್ರೀಯ ಕಾರ್ಯಾಧ್ಯಕ್ಷ ಎಂ.ವೆಂಕಟಸ್ವಾಮಿ, 'ದೇವಸ್ಥಾನವೊಂದರ ತೀರ್ಪಿನ ವಿಚಾರದಲ್ಲಿ ಅಸಮಾಧಾನಗೊಂಡ ವಕೀಲ ರಾಜೇಶ್ ಕಿಶೋರ್ ಕಾನೂನು ರೀತಿಯಲ್ಲಿ ಪ್ರಶ್ನಿಸಲು ಅವಕಾಶ ವಿದ್ದರೂ ಶೂ ಎಸೆಯಲು ಯತ್ನಿಸಿದ ಕೃತ್ಯವನ್ನು ಯಾವುದೇ ನಾಗರಿಕ ಸಮಾಜ ಒಪ್ಪುವುದಿಲ್ಲ. ಈ ಕುರಿತು ಕೇಂದ್ರ ಸರ್ಕಾರ ಸಮಗ್ರ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

ಸಂಜೆ ಪ್ರಗತಿಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು. ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ, ಭೀಮ ವಾದ), ಎಸ್‌ಎಫ್‌ಐ, ಡಿವೈಎಫ್‌ಐ, ಎಐಎಸ್‌ಎಫ್, ಎಐವೈಎಫ್, ಬಂಡಾಯ ಸಾಹಿತ್ಯ ಸಂಘಟನೆ, ಸಮುದಾಯ ಕರ್ನಾಟಕ, ಸೌಹಾರ್ದ ಕರ್ನಾಟಕ, ಕರ್ನಾಟಕ ಜನಶಕ್ತಿ, ಮಾನವ ಬಂಧುತ್ವ ವೇದಿಕೆ, ಸಾಂಸ್ಕೃತಿಕ ವೇದಿಕೆ, ಅಖಿಲ ಕರ್ನಾಟಕ ಸೂಫಿ ಸಂತರ ಸಂಘ, ಸಂವಿಧಾನ ಓದು ಸಂಘಟನೆಯ ಪ್ರಮುಖರು ಭಾಗಿಯಾದರು.

ದಸಂಸ ಮುಖಂಡ ಮಾವಳ್ಳಿ ಶಂಕರ್, 'ಮುಖ್ಯ ನ್ಯಾಯಮೂರ್ತಿಗಳು ಕ್ಷಮಾದಾನ ನೀಡಿದ್ದರೂ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಕ್ರಮಕೈಗೊಳ್ಳಬೇಕು. ಸಂವಿಧಾನ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರು ಇಂತಹ ವಿಚಾರದಲ್ಲಿ ಏಕತೆ ಪ್ರದರ್ಶಿಸಬೇಕು' ಎಂದು ಹೇಳಿದರು.

ವಕೀಲ ರವಿವರ್ಮಕುಮಾರ್, ಎಸ್‌.ಜಿ.ಸಿದ್ದರಾಮಯ್ಯ, ಸಿದ್ದನಗೌಡ ಪಾಟೀಲ್, ಕೆ.ವಿ.ನಾಗರಾಜಮೂರ್ತಿ, ಸಿ.ರಾಜಶೇಖರಮೂರ್ತಿ, ಇಂದೂಧರ ಹೊನ್ನಾಪುರ ಮತ್ತಿತರರು ಹಾಜರಿದ್ದರು.

ಹೈಕೋರ್ಟ್‌ನ ಎದುರು ಕರ್ನಾಟಕ ರಾಜ್ಯ ಎಸ್ಸಿ ಎಸ್ಟಿ ವಕೀಲರ ಸಂಘ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ನೇತೃತ್ವದಲ್ಲಿ ಪ್ರತ್ಯೇಕ ಪ್ರತಿಭಟನೆ ನಡೆಸಲಾಯಿತು.

ವಕೀಲರಾದ ಸಿ.ಎಸ್.ದ್ವಾರಕಾನಾಥ್, ಟಿ.ನರಸಿಂಹಮೂರ್ತಿ, ಎಚ್‌.ಸಿ.ಉಮೇಶ್, ಎಂ.ಯುವರಾಜ್ ಮತ್ತಿತರರು ಹಾಜರಿದ್ದರು.



ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಸದಸ್ಯರು ಹಲ್ಲೆಯನ್ನು ಖಂಡಿಸಿ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಕೃತಿ ದಹಿಸಿದರು — ಪ್ರಜಾವಾಣಿ ಚಿತ್ರ

ಸಾಕುಪ್ರಾಣಿಗಳ ಆಹಾರವೆಂದು ವಿದೇಶದಿಂದ ಡ್ರಗ್ಸ್ ಆಮದು

₹23.84 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ



ನಜೀರ್ ಮೊಹಮ್ಮದ್

ಬೆಂಗಳೂರು: ಪರಪ್ಪನ ಅಗ್ರಹಾರ, ಕೆ.ಜಿ.ನಗರ ಹಾಗೂ ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪೊಲೀಸರು ನಡೆಸಿದ ಡ್ರಗ್ಸ್ ವಿರುದ್ಧದ ಕಾರ್ಯಾಚರಣೆಯಲ್ಲಿ ಇಬ್ಬರು ವಿದೇಶಿ ಪೆಡ್ಲರ್‌ಗಳು ಸೇರಿ ಆರು ಮಂದಿಯನ್ನು ಬಂಧಿಸಿದ್ದಾರೆ.

ಬಂಧಿತರಿಂದ ವಿವಿಧ ಮಾದರಿಯ ₹23.84 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

9 ತಿಂಗಳಲ್ಲಿ ₹81 ಕೋಟಿ ಮೌಲ್ಯದ ಡ್ರಗ್ಸ್ ವಶ

ಡ್ರಗ್ಸ್ ಮಾರಾಟಗಾರರ ವಿರುದ್ಧ ನಗರದಲ್ಲಿ ನಿರಂತರ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕಳೆದ ಒಂಬತ್ತು ತಿಂಗಳಲ್ಲಿ ₹81 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ. 711 ಪ್ರಕರಣ ದಾಖಲು ಮಾಡಲಾಗಿದೆ. ಡ್ರಗ್ಸ್ ಪೆಡ್ಲರ್‌ಗಳು, ವಿತರಕರು, ಅಂತರರಾಜ್ಯ ಹಾಗೂ ಅಂತರರಾಷ್ಟ್ರೀಯ ಜಾಲಗಳ ವಿರುದ್ಧ ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಸೀಮಾಂತ್‌ಕುಮಾರ್ ಸಿಂಗ್ ಹೇಳಿದರು.

ಕಳೆದ ಒಂಬತ್ತು ತಿಂಗಳಲ್ಲಿ 35 ವಿದೇಶಿ ಡ್ರಗ್ಸ್ ಪೆಡ್ಲರ್‌ಗಳೂ ಸೇರಿದಂತೆ 1,048 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪರಪ್ಪನ ಅಗ್ರಹಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ದಾಳಿ ನಡೆಸಿ, ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿ ತನ್ನ ಸಂಬಂಧಿಯ ನೆರವು ಪಡೆದು ಡ್ರಗ್ಸ್ ಮಾರಾಟ ಮಾಡುತ್ತಿದ್ದ. ಬಂಧಿತನಿಂದ ಎಂಡಿಎಂಎ ಕ್ರಿಸ್ಟಲ್ ಹಾಗೂ ಅಫೀಮು ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಕೆ.ಜಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯ ವಿದೇಶಿ ಅಂಚೆ ಕಚೇರಿಯಲ್ಲಿ ಅನುಮಾನಾಸ್ಪದ ಬಾಕ್ಸ್‌ಗಳು ಬಂದಿರುವ ಮಾಹಿತಿ ಬಂದಿತ್ತು. ಶ್ವಾನದಳದ ಜತೆಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ ಬಾಕ್ಸ್‌ಗಳಲ್ಲಿ ₹4 ಕೋಟಿ ಮೊತ್ತದ ಹೈಡ್ರೊ ಗಾಂಜಾ ಪತ್ತೆಯಾಗಿದೆ. ಸಾಕುಪ್ರಾಣಿಗಳಿಗೆ ನೀಡುವ ಆಹಾರವೆಂದು ವಿದೇಶದಿಂದ ಡ್ರಗ್ಸ್ ಅನ್ನು ಆರೋಪಿಗಳು ತರಿಸಿಕೊಳ್ಳುತ್ತಿದ್ದರು. ಈ ಪ್ರಕರಣದಲ್ಲಿ ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಮತ್ತೊಂದು ಪ್ರಕರಣದಲ್ಲಿ ಕೆ.ಜಿ ನಗರ ಠಾಣೆಯ ಪೊಲೀಸರು ನಜೀರ್ ಮೊಹಮ್ಮದ್ ಹಾಗೂ ರಶೀದ್ ಎಂಬುವರನ್ನು ಬಂಧಿಸಿದ್ದಾರೆ.

ಆರೋಪಿಗಳು ಥಾಯ್ಲೆಂಡ್ ಹಾಗೂ ಜರ್ಮನಿಯಿಂದ ನಕಲಿ ಹೆಸರಿನಲ್ಲಿ ಕ್ರಿಪ್ಟೊ ಕರೆನ್ಸಿ ಮೂಲಕ ಹೈಡ್ರೊ ಗಾಂಜಾ ಖರೀದಿಸಿ ನಗರದಲ್ಲಿ ಮಾರಾಟ ಮಾಡುತ್ತಿದ್ದರು. ಡ್ರಗ್ಸ್ ಆರ್ಡರ್ ಮಾಡಿದ್ದ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕೊತ್ತನೂರು ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ ಡ್ರಗ್ಸ್ ಪೆಡ್ಲರ್‌ಗಳಾದ ಸುಡಾನ್ ದೇಶದ ಜಾರ್‌ಗುವಾನ್ ಸಲ್ಲಾಹೆಲ್ದಿನ್ ಅಬುರೈ ಇಲಾಸನ್ ಹಾಗೂ ಮಾರ್ವ ಇಸಮ್ ಒಸ್ಮಾನ್ ವೀಡಾ ಎಂಬ ಮಹಿಳಾ ಪೆಡ್ಲರ್‌ಗಳನ್ನು ಬಂಧಿಸಲಾಗಿದೆ.

ಬಾತ್ಮೀದಾರರು ನೀಡಿದ ಖಚಿತ ಮಾಹಿತಿ ಆಧರಿಸಿ ಎನ್‌ಜಿ ಗೊಲ್ಲಹಳ್ಳಿಯ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿರುವ ಸುಡಾನ್ ದೇಶದ ಮಹಿಳೆಯರಿಬ್ಬರು ಡ್ರಗ್ಸ್ ಪೆಡ್ಲಿಂಗ್ ನಡೆಸುತ್ತಿರುವ ಮಾಹಿತಿ ಬಂದಿತ್ತು. ಇದನ್ನು ಆಧರಿಸಿ ಕಾರ್ಯಾಚರಣೆ ನಡೆಸಿದಾಗ ಫ್ಲ್ಯಾಟ್‌ನಲ್ಲಿ 4 ಕೆ.ಜಿ. ಎಂಡಿಎಂಎ ಕ್ರಿಸ್ಟಲ್ ಪತ್ತೆಯಾಗಿತ್ತು. ಅದನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

‘ಬಿಗ್‌ಬಾಸ್‌- ಪಿಸಿಬಿಗೆ ಸಂಬಂಧವಿಲ್ಲ’

ಸಮಯಾವಕಾಶ: ಡಿ.ಸಿ.ಗೆ ಅಧಿಕಾರ ಇಲ್ಲ ರಾಜಕೀಯ ಇಲ್ಲ– ನರೇಂದ್ರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಡದಿಯ ಜಾಲಿವುಡ್ ಸ್ಟುಡಿಯೋಸ್ ಆ್ಯಂಡ್ ಅಡ್ವೆಂಚರ್ಸ್‌ಗೆ ಬೀಗಮುದ್ರೆ ಹಾಕಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಪಿಸಿಬಿ) ಆದೇಶ ಹೊರಡಿಸಿದ್ದು, ‘ಬಿಗ್‌ಬಾಸ್’ ಕಾರ್ಯಕ್ರಮಕ್ಕೂ ಇದಕ್ಕೂ ಸಂಬಂಧ ಇಲ್ಲ’ ಎಂದು ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಸ್ಪಷ್ಟಪಡಿಸಿದರು.

‘ಜಾಲಿವುಡ್ ಸ್ಟುಡಿಯೋಸ್ 30 ಎಕರೆ ಪ್ರದೇಶದಲ್ಲಿದೆ. ‘ರೆಡ್ ಝೋನ್’ನಲ್ಲಿರುವ ಆ ಪ್ರದೇಶದಲ್ಲಿ ಜಲಮಾಲಿನ್ಯ ಸೇರಿದಂತೆ ಇತರೆ ಮಾಲಿನ್ಯವಾಗುತ್ತಿರುವುದಕ್ಕೆ ಬೀಗ ಹಾಕಲಾಗಿದೆ. ಅಲ್ಲಿ ನಡೆಯುತ್ತಿರುವ ‘ಬಿಗ್‌ಬಾಸ್’ ಕಾರ್ಯಕ್ರಮಕ್ಕೂ ಮಂಡಳಿಯ ಕ್ರಮಕ್ಕೂ ಯಾವುದೇ ಸಂಬಂಧ ಇಲ್ಲ’ ಎಂದು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

‘ಜಾಲಿವುಡ್ ಸ್ಟುಡಿಯೋಸ್‌ಗೆ 2024ರಿಂದ ಮೂರು ನೋಟಿಸ್ ನೀಡಿ, ಅಂತಿಮವಾಗಿ ಬೀಗಮುದ್ರೆಯ ಆದೇಶವನ್ನು ಹೊರಡಿಸಲಾಗಿದೆ. ಈ ಬಗ್ಗೆ, ಸಮಯಾವಕಾಶ ಸೇರಿದಂತೆ ಯಾವುದೇ ರೀತಿಯ ಕ್ರಮವಾಗಬೇಕಿದ್ದರೆ ಮಾಲಿನ್ಯ ನಿಯಂತ್ರಣ ಮಂಡಳಿಯವರಿಗೇ ಆ ಸಂಸ್ಥೆಯವರು ಮನವಿ ಸಲ್ಲಿಸಬೇಕು. ಮನವಿ ಜೊತೆಗೆ, ಎಲ್ಲ ಕ್ರಮ ಕೈಗೊಳ್ಳುವ ಪ್ರಮಾಣಪತ್ರ, ಪರಿಸರ ಶುಲ್ಕ ಪಾವತಿಸಿದರೆ ಅದನ್ನು ಪರಿಶೀಲಿಸಲಾಗುತ್ತದೆ. 90 ದಿನ ಸಮಯಾವಕಾಶ ನೀಡಲು ಕಾನೂನಿನಲ್ಲಿ ಅವಕಾಶವಿದೆ’ ಎಂದರು.

‘ಜಾಲಿವುಡ್ ಸಂಸ್ಥೆಯವರು ಬೆಂಗಳೂರು ದಕ್ಷಿಣ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿದ್ದಾರೆ’ ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ನರೇಂದ್ರಸ್ವಾಮಿ, ‘ಮಾಲಿನ್ಯ ನಿಯಂತ್ರಣ ಮಂಡಳಿಗೆ ಅವರು ಮನವಿ ಸಲ್ಲಿಸಬೇಕು. ಮಂಡಳಿ ಆದೇಶ ಹೊರಡಿಸಿರುವುದರಿಂದ ಬೇರೆ ಯಾರಿಗೋ ಮನವಿ ಸಲ್ಲಿಸಿದರೆ ಅದು ಪ್ರಯೋಜನಕ್ಕೆ ಬರುವುದಿಲ್ಲ’ ಎಂದರು.

ವಿಭಿನ್ನ ಹೇಳಿಕೆ

ಅವಕಾಶ ಕೊಡಲು ಸೂಚನೆ: ಡಿಕೆಶಿ

- ಬಿಗ್‌ಬಾಸ್ ಕಾರ್ಯಕ್ರಮ ನಡೆಯುವ ಜಾಲಿವುಡ್ ಸ್ಟುಡಿಯೊವನ್ನು ಉದ್ಘಾಟನೆ ಮಾಡಿದ್ದೇ ನಾನು
- ಉದ್ಯೋಗ ಮುಖ್ಯ, ಖಾಸಗಿಯವರು ಹೂಡಿಕೆ ಮಾಡಿರುತ್ತಾರೆ. ಬೆಂಗಳೂರು ದಕ್ಷಿಣ ಜಿಲ್ಲಾಧಿಕಾರಿ ಮತ್ತು ಎಸ್‌ಪಿಗೆ ಫೋನ್ ಮಾಡಿ, ಅವರಿಗೆ ಅವಕಾಶ ಮಾಡಿಕೊಡಲು ಹೇಳಿದ್ದೇನೆ
- ಬಿಗ್‌ಬಾಸ್ ಒಂದೇ ಅಲ್ಲ, ಎಲ್ಲಾ ಮನರಂಜನಾ ಕಾರ್ಯಕ್ರಮಗಳೂ ನಡೆಯಬೇಕು. ಖಾಸಗಿಯವರು ಏನೋ ತಪ್ಪು ಮಾಡಿರುತ್ತಾರೆ, ಅದನ್ನು ಸರಿ ಮಾಡಿಕೊಳ್ಳಿ ಎಂದು ಸೂಚಿಸಿ ಅವಕಾಶ ಕೊಡಬೇಕು

ಮಂಡಳಿಗೇ ಮನವಿ ಮಾಡಿ: ನರೇಂದ್ರಸ್ವಾಮಿ

- ಜಾಲಿವುಡ್ ಸ್ಟುಡಿಯೋಸ್ ಆ್ಯಂಡ್ ಅಡ್ವೆಂಚರ್ಸ್ ಪಾರ್ಕ್‌ಗೆ ಯಾವುದೇ ರೀತಿಯ ಅವಕಾಶ ಬೇಕಿದ್ದರೆ ಮಂಡಳಿಗೇ ಮನವಿ ಮಾಡಿಕೊಳ್ಳಬೇಕು
- ಡಿ.ಕೆ. ಶಿವಕುಮಾರ್ ಅವರು ಯಾವ ಸಂದರ್ಭದಲ್ಲಿ ಜಾಲಿವುಡ್ ಸಂಸ್ಥೆಗೆ ಕಾಲಾವಕಾಶ ನೀಡಲಾಗುತ್ತದೆ ಎಂದು ಹೇಳಿದ್ದಾರೋ ಅದು ನನಗೆ ಗೊತ್ತಿಲ್ಲ.
- ಬಿಗ್‌ಬಾಸ್ ಕಾರ್ಯಕ್ರಮಕ್ಕೆ ನೋಟಿಸ್ ನೀಡಿಲ್ಲ. ಅವರಿಗೆ ಮೋಸವಾಗಿದ್ದರೆ, ಕಾರಣ ಜಾಲಿವುಡ್ ಸ್ಟುಡಿಯೋಸ್

‘ಬಿಗ್ ಬಾಸ್’ ಮನೆ ಬೀಗ ತೆರೆಯಲು ಡಿಸಿಎಂ ಸೂಚನೆ

ಒಂದನೇ ಪುಟದಿಂದ...

ರಜೆ ಲೆಕ್ಕಿಸದೆ ಬೀಗ: ನಿಯಮ ಉಲ್ಲಂಘನೆ ಕಾರಣಕ್ಕೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಾಲಿವುಡ್ ಮುಚ್ಚುವಂತೆ ಅ. 6ರಂದು ಜಿಲ್ಲಾಡಳಿತಕ್ಕೆ ಸೂಚನೆ ನೀಡಿತ್ತು. ಮಾರನೇಯ ದಿನ ವಾಲ್ಮೀಕಿ ಜಯಂತಿ ಪ್ರಯುಕ್ತ ಸರ್ಕಾರಿ ರಜೆ ಇದ್ದರೂ, ಜಿಲ್ಲಾಡಳಿತವು ಪೊಲೀಸರ ನೆರವಿನೊಂದಿಗೆ ಜಾಲಿವುಡ್‌ಗೆ ಬೀಗ ಹಾಕಿತ್ತು.

ಬಿಗ್ ಬಾಸ್ ಷೋ ಸ್ಥಗಿತಕ್ಕೆ ಸೂಚಿಸಿ, ಸ್ಪರ್ಧಿಗಳು ಸೇರಿದಂತೆ ಜಾಲಿವುಡ್‌ನಲ್ಲಿದ್ದ ಪ್ರವಾಸಿಗರು ಹಾಗೂ ಸಿಬ್ಬಂದಿಯನ್ನು ಸಹ ಹೊರಕ್ಕೆ ಕಳಿಸಿತ್ತು. ಆಯೋಜಕರು ಸ್ಪರ್ಧಿಗಳಿಗೆ ಸಮೀಪದ ಈಗಲ್ಟನ್ ರೆಸಾರ್ಟ್‌ನಲ್ಲಿ ತಾತ್ಕಾಲಿಕವಾಗಿ ವಾಸ್ತವ್ಯ ವ್ಯವಸ್ಥೆ ಮಾಡಿದ್ದರು.

ಕಾಲಾವಕಾಶ ಕೋರಿದ್ದರು: ನಿಯಮ ಉಲ್ಲಂಘನೆ ಸರಿಪಡಿಸಿಕೊಳ್ಳಲು 15 ದಿನ ಕಾಲಾವಕಾಶ ನೀಡುವಂತೆ ಜಾಲಿವುಡ್ ಆಡಳಿತ ಮಂಡಳಿಯವರು ಬುಧವಾರ ವಿಡೀ ಜಿಲ್ಲಾಧಿಕಾರಿ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದುಂಬಾಲು ಬಿದ್ದಿದ್ದರು.

ವಿಷಯ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಅವರ ಅಂಗಳ ತಲುಪಿತ್ತು. ಕಾಲಾವಕಾಶ ನೀಡಬೇಕೋ ಬೇಡವೋ ಎಂಬ ಕುರಿತು ಡಿಸಿಎಂ ಮತ್ತು ಮಂಡಳಿ ಅಧ್ಯಕ್ಷರು ಭಿನ್ನ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಸಮಾರಂಭ

1,278 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದ್ವೇಷದಿಂದ ಏನನ್ನೂ ಗೆಲ್ಲುವುದಕ್ಕೆ ಸಾಧ್ಯವಿಲ್ಲ. ಇದು ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸುವುದೇ ಹೊರತು ಪರಿಹಾರ ಕಲ್ಪಿಸುವುದಿಲ್ಲ’ ಎಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಐಐಎಂಬಿ) ಪ್ರಭಾರ ನಿರ್ದೇಶಕ ಡಾ. ಯು. ದಿನೇಶ್ ಕುಮಾರ್ ಹೇಳಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಐಟಿ) ಆಯೋಜಿಸಿದ್ದ 17ನೇ ಪದವಿ ಪ್ರದಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ‘ಪ್ರೀತಿ ಮತ್ತು ಸಹಾನುಭೂತಿಯಿಂದ ಮಾತ್ರ ನಾವು ಮತ್ತೊಬ್ಬರನ್ನು ಗೆಲ್ಲುವುದಕ್ಕೆ ಸಾಧ್ಯ ಎಂಬುದನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು’ ಎಂದು ಹೇಳಿದರು.



ಎಂ.ಆರ್. ಕೋದಂಡರಾಮ್, ಯು. ದಿನೇಶ್ ಕುಮಾರ್, ಎಂ.ಆರ್. ಸೀತಾರಾಂ, ಸಂಪಂಗಿ ರಾಮಯ್ಯ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು

ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಸೀತಾರಾಂ ಮಾತನಾಡಿ, ‘ವಿದ್ಯಾರ್ಥಿಗಳೇ ನಮ್ಮ ವಿದ್ಯಾಸಂಸ್ಥೆಯ ನಿಜವಾದ ರಾಯಭಾರಿಗಳು. ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿ ದೇಶಕ್ಕೆ ಕೀರ್ತಿ ತಂದುಕೊಡಲಿ’ ಎಂದು ಹೇಳಿದರು.

ಬಿ.ಇ, ಬಿ.ಆರ್ಕ್, ಎಂ.ಟೆಕ್, ಎಂ.ಆರ್ಕ್, ಎಂಬಿಎ ಮತ್ತು ಎಂಸಿಎ ಸೇರಿದಂತೆ ವಿವಿಧ ಕೋರ್ಸ್‌ಗಳ 1,278 ವಿದ್ಯಾರ್ಥಿಗಳು ಪದವಿ ಪಡೆದರು. ಗೋಕುಲ ಎಜುಕೇಷನ್ ಫೌಂಡೇಷನ್‌ನ ಉಪಾಧ್ಯಕ್ಷ ಎಂ. ಆರ್.ಜಾನಕಿರಾಮ್, ಕಾರ್ಯದರ್ಶಿ ಎಂ.ಆರ್. ಆನಂದ ರಾಮ್, ನಿರ್ದೇಶಕರಾದ ಎಂ.ಆರ್. ಸಂಪಂಗಿ ರಾಮಯ್ಯ, ಎಂ.ಆರ್. ಕೋದಂಡ ರಾಮ್, ಆರ್‌ಐಟಿ ಪ್ರಾಂಶುಪಾಲ ಡಾ. ಎನ್.ವಿ.ಆರ್.ನಾಯ್ಡು, ಕಾರ್ಯಕಾರಿ ನಿರ್ದೇಶಕ ಡಾ.ಎಚ್.ವಿ.ಪಾರ್ಶ್ವನಾಥ, ಮುಖ್ಯ ಶೈಕ್ಷಣಿಕ ಸಲಹೆಗಾರ ಡಾ. ಕರಿಸಿದ್ದಪ್ಪ ಉಪಸ್ಥಿತರಿದ್ದರು.



> ವೇತನ ಕಡಿಮೆ ಇದ್ದಾಗಲೇ ಸ್ವಲ್ಪವಾದರೂ ಉಳಿತಾಯ ಮಾಡಲು ಪ್ರಯತ್ನಿಸು; ಹೆಚ್ಚು ಗಳಿಸಲು ಆರಂಭಿಸಿದ ನಂತರ ಉಳಿತಾಯ ಮಾಡಲು ಸಾಧ್ಯ ಆಗುವುದಿಲ್ಲ
> **ಜ್ಯಾಕ್ ಬೆನ್ನಿ,** ಅಮೆರಿಕದ ಕಲಾವಿದ

ದುಡ್ಡಿನಂಥಾ ಮಾತು

ಆರ್‌ಇಐಟಿ: ಇದಕ್ಕೆ ಏಕೆ ಮಹತ್ವ?

• ಝ್ರಾಯ್ದ್ ನೋಮಾನ್



ಬಾಡಿಗೆ ವರಮಾನ ತರುವ ಆಸ್ತಿಗಳ ಮೇಲೆ ಹೂಡಿಕೆದಾರರ ಹಣವನ್ನು ತೊಡಗಿಸುವ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳು ಹೂಡಿಕೆದಾರರಿಗೆ ಏಕೆ ಮಹತ್ವದ್ದು? ಇಲ್ಲಿ ಯಾವ ಪ್ರಮಾಣದ ಬೆಳವಣಿಗೆ ನಿರೀಕ್ಷಿಸಬಹುದು? ಈ ವಿಚಾರದ ಬಗ್ಗೆ ಅವಲೋಕನ ನಡೆಸಿದೆ ಈ ಬರಹ

ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳನ್ನು (ಆರ್‌ಇಐಟಿ) ಮ್ಯೂಚುವಲ್ ಫಂಡ್‌ಗಳು 'ಈಕ್ವಿಟಿ'ಯಾಗಿ ಪರಿಗಣಿಸ ಬಹುದು ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಈಚೆಗೆ ಅನುಮತಿ ನೀಡಿದೆ.

ಇದಾದ ನಂತರ, ದೇಶದ ಷೇರುಪೇಟೆಗಳಲ್ಲಿ ನೋಂದಣಿ ಆಗಿರುವ ಆರ್‌ಇಐಟಿಗಳ ಮೌಲ್ಯವು ಕೆಲವು ದಿನಗಳಲ್ಲಿ ಏರಿಕೆ ಕಂಡಿತು. ಇದು ನಿಯಮಗಳಲ್ಲಿನ ಒಂದು ಬದಲಾವಣೆಯಂತೆ ಕಂಡರೂ, ಇದರ ಪರಿಣಾಮವು ಹೂಡಿಕೆದಾರರ ಮೇಲೆ ವ್ಯಾಪಕವಾಗಿರಲಿದೆ. ಸೆಬಿಯ ಈ ತೀರ್ಮಾನವು ಆರ್‌ಇಐಟಿಗಳನ್ನು ಬಂಡವಾಳ ಮಾರುಕಟ್ಟೆಯ ಮುಖ್ಯವಾಹಿನಿಗೆ ತರುತ್ತದೆ, ಮ್ಯೂಚುವಲ್ ಫಂಡ್‌ಗಳು ಇವುಗಳಲ್ಲಿ ಹೆಚ್ಚಿನ ಹಣ ತೊಡಗಿಸಲು ಅವಕಾಶ ಸಿಗುತ್ತದೆ, ಆರ್‌ಇಐಟಿಗಳು ಷೇರುಪೇಟೆ ಸೂಚ್ಯಂಕಗಳ ಭಾಗವಾಗುವ ಸಾಧ್ಯತೆಯೂ ತೆರೆದುಕೊಳ್ಳುತ್ತದೆ. ಭಾರತದ ಹೂಡಿಕೆದಾರರ ಪೋರ್ಟ್‌ಫೋಲಿಯೊದಲ್ಲಿ ಆರ್‌ಇಐಟಿಗಳ ಪಾಲು ಹೆಚ್ಚಳ ಕಾಣಲಿದೆ.

ರಿಯಲ್ ಎಸ್ಟೇಟ್ ವಲಯವನ್ನು ಸಂಪತ್ತಿನ ಚುಕ್ಕಾಣಿ ಎಂಬಂತೆ ದಶಕಗಳಿಂದಲೂ ಕಾಣಲಾಗಿದೆ. ಆದರೆ ರಿಯಲ್ ಎಸ್ಟೇಟ್ ಆಸ್ತಿಗಳ ಮಾಲೀಕತ್ವವು ಹೆಚ್ಚಿನ ಮಟ್ಟದಲ್ಲಿ ಇದ್ದಿದ್ದು ಭಾರಿ ಪ್ರಮಾಣದ ಬಂಡವಾಳ ಹೊಂದಿರುವವರಲ್ಲಿ ಮಾತ್ರ. ಸಾಂಪ್ರದಾಯಿಕವಾದ ಆಸ್ತಿಗಳ ಮೇಲೆ ಹೂಡಿಕೆ ಮಾಡಲು ದೊಡ್ಡ ಮೊತ್ತ ಬೇಕಾಗುತ್ತಿತ್ತು, ಅಂತಹ ಆಸ್ತಿಗಳನ್ನು ತಕ್ಷಣಕ್ಕೆ ಮಾರಾಟ ಮಾಡಿ ಹೂಡಿಕೆಯ ನಗದೀಕರಣ ಕಷ್ಟವಾಗಿತ್ತು.

ಆದರೆ ಆರ್‌ಇಐಟಿಗಳು ಈ ವಾಸ್ತವಗಳನ್ನು ಬದಲಾಯಿಸಲು ಆರಂಭಿಸಿವೆ. ವಾಣಿಜ್ಯ ಚಟುವಟಿಕೆಗಳು ಹೆಚ್ಚಿರುವ, ಅತ್ಯಾಧುನಿಕ ಸೌಲಭ್ಯಗಳು ಇರುವ ಕಚೇರಿ ಸ್ಥಳಗಳನ್ನು (ಗ್ರೇಡ್ ಎ), ರಿಟೇಲ್ ಮಾರಾಟ ಸ್ಥಳಗಳನ್ನು, ವರಮಾನ ತಂದುಕೊಡುವ ಇತರ ಆಸ್ತಿಗಳನ್ನು ಒಂದೆಡೆ ತಂದು ಸಾಂಸ್ಥಿಕ ಹಾಗೂ ಸಣ್ಣ ಹೂಡಿಕೆದಾರರ ಹಣವನ್ನು ಅವುಗಳ ಮೇಲೆ ತೊಡಗಿಸುವ ಕೆಲಸವನ್ನು ಆರ್‌ಇಐಟಿಗಳು ಮಾಡುತ್ತವೆ. ಇದರ ಪರಿಣಾಮವಾಗಿ, ಹಿಂದೊಂದು ಕಾಲದಲ್ಲಿ ಅಪಾರದರ್ಶಕ ಆಗಿದ್ದ ವಲಯವು ಈಗ ಹೆಚ್ಚು ಪಾರದರ್ಶಕ ಆಗುತ್ತಿದೆ. ಈ ವಲಯವು ಈಗ ಸಣ್ಣ ಹೂಡಿಕೆದಾರರ ಕೈಗೆ ಸಿಗುವಂತೆ ಆಗುತ್ತಿದೆ. ಈಗ ಸಣ್ಣ ಹೂಡಿಕೆದಾರರು ಕೆಲವು ಸಾವಿರ ರೂಪಾಯಿ ಹಣ ಬಳಸಿ, ವಾಣಿಜ್ಯ ಉದ್ದೇಶದ ರಿಯಲ್ ಎಸ್ಟೇಟ್ ಆಸ್ತಿಗಳಲ್ಲಿ ಪಾಲು ಹೊಂದಬಹುದು.

ಹಣದ ನಗದೀಕರಣವು ತಕ್ಷಣಕ್ಕೆ ಆಗುವುದು ಇವುಗಳ ಮುಖ್ಯವಾದ ಪ್ರಯೋಜನ. ಆರ್‌ಇಐಟಿಗಳ ಯೂನಿಟ್‌ಗಳನ್ನು ದೇಶದ ಷೇರುಪೇಟೆಗಳಲ್ಲಿ ಮಾರಾಟ ಮಾಡಬಹುದು, ಖರೀದಿಸಬಹುದು. ಇದರಿಂದಾಗಿ ಹೂಡಿಕೆದಾರರಿಗೆ ಇವುಗಳ ಮೇಲೆ ಹಣ ತೊಡಗಿಸುವುದು, ಇವುಗಳನ್ನು ಮಾರಾಟ ಮಾಡುವುದು ಸುಲಭ. ಆಸ್ತಿಯ ಮೇಲೆ ನೇರ ಮಾಲೀಕತ್ವ ಹೊಂದಿದ್ದರೆ, ಅದರ ಮಾರಾಟ ವಹಿವಾಟು ಬಹಳ ನಿಧಾನವಾಗಿರುತ್ತದೆ. ಅದರಲ್ಲಿ ಪಾಲಿಸಬೇಕಿರುವ ಕಾನೂನು ಪ್ರಕ್ರಿಯೆಗಳು ಬಹಳಷ್ಟು ಇರುತ್ತವೆ.



ಒಂದೇ ಕಟ್ಟಡ ಅಥವಾ ಗೋದಾಮುಗಳನ್ನು ಗುರಿಯಾಗಿಸಿಕೊಂಡ 'ಎಸ್‌ಎಂ ಆರ್‌ಇಐಟಿ'ಗಳು ಹೆಚ್ಚು ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯ ಇರುವ ಹೂಡಿಕೆದಾರರಿಗೆ ಸೂಕ್ತವೆನಿಸುತ್ತವೆ. ಆದರೆ, ಇತರ ಸಾಮಾನ್ಯ ಹೂಡಿಕೆದಾರರಿಗೆ ಆರ್‌ಇಐಟಿಗಳು ಹೆಚ್ಚು ವೈವಿಧ್ಯಮಯವಾದ ಕಚೇರಿಗಳು, ಮಾಲ್‌ಗಳು, ಸರಕು ಸಾಗಣೆ ಸೌಲಭ್ಯಗಳಿಂದ ವರಮಾನ ಸಿಗುವಂತೆ ನೋಡಿಕೊಳ್ಳುತ್ತವೆ. ಇಂದು ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಆರ್‌ಇಐಟಿಗಳ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಹೀಗಾಗಿ ಹೂಡಿಕೆದಾರರಿಗೆ ಇರುವ ಆಯ್ಕೆಗಳು ಸೀಮಿತ. ಆದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ಆಸ್ತಿಗಳು ಆರ್‌ಇಐಟಿಗಳ ವ್ಯಾಪ್ತಿಗೆ ಬರುವ ನಿರೀಕ್ಷೆ ಇದೆ.

ಜಾಗತಿಕ ಸಾಮರ್ಥ್ಯ ಕೇಂದ್ರ (ಜಿಸಿಸಿ) ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಕಚೇರಿ ಸ್ಥಳಗಳಿಗೆ ಬೇಡಿಕೆ ಕೂಡ ಹೆಚ್ಚಾಗುತ್ತಿದೆ. ಇದರಿಂದಾಗಿ ಆರ್‌ಇಐಟಿಗಳ ನೆಲಗಟ್ಟು ಭದ್ರವಾಗುತ್ತಿದೆ. ಮೈಂಡ್‌ಸ್ಪೇಸ್‌ನಂತಹ ಆರ್‌ಇಐಟಿಗಳು ಜಾಗತಿಕ ಸಾಮರ್ಥ್ಯ ಕೇಂದ್ರಗಳಿಗೆ ತಮ್ಮ ಸ್ಥಳವನ್ನು ಗಣನೀಯ ಪ್ರಮಾಣದಲ್ಲಿ ಬಾಡಿಗೆಗೆ ನೀಡಿವೆ. ಈಚೆಗೆ ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ನಾಲೆಜ್ ರಿಯಾಲ್ಟಿ ಟ್ರಸ್ಟ್ ಮುಂಬೈ, ಬೆಂಗಳೂರು, ಹೈದರಾಬಾದ್‌ನಲ್ಲಿ ವರಮಾನ ಬರುವ ಆಸ್ತಿಗಳನ್ನು ಹೊಂದಿದ್ದು, ಕಚೇರಿ ಸ್ಥಳಗಳಿಗೆ ಇರುವ ಬೇಡಿಕೆಗೆ ಅನುಗುಣವಾಗಿ ದೇಶದ ಆರ್‌ಇಐಟಿಗಳು ಹೇಗೆ ಬೆಳೆಯುತ್ತಿವೆ ಎಂಬುದನ್ನು ತೋರಿಸುತ್ತಿದೆ.

ಹೂಡಿಕೆದಾರರು ಇಲ್ಲಿರುವ ರಿಸ್ಕ್‌ಗಳನ್ನು ಸ್ಪಷ್ಟತೆಯೊಂದಿಗೆ ಅಂದಾಜು ಮಾಡಿಕೊಳ್ಳಬೇಕು. ಬಡ್ಡಿ ದರದ ಏರಿಳಿತಗಳು ಮೌಲ್ಯದ ಮೇಲೆ ಪ್ರಭಾವ ಬೀರಬಲ್ಲವು, ಕೆಲವು ಮಾರುಕಟ್ಟೆಗಳಲ್ಲಿ ಬಾಡಿಗೆ ಸ್ಥಳಗಳು ಬೇಡಿಕೆಗಿಂತ ಹೆಚ್ಚಿದ್ದರೆ ಅದು ಬಾಡಿಗೆ ವರಮಾನದ ಹೆಚ್ಚಳಕ್ಕೆ ಅಡ್ಡಿಯಾಗಬಲ್ಲದು. ಕಚೇರಿ ಸ್ಥಳ, ಮಾಲ್, ಸರಕು ಸಾಗಣೆ ಕೇಂದ್ರಗಳಲ್ಲಿ ಆರ್‌ಇಐಟಿಗಳು ಹೂಡಿಕೆ ಮಾಡಿದ್ದರೆ ಈ ಸಮಸ್ಯೆಯು ತೀವ್ರವಾಗಿ ಕಾಡುವುದಿಲ್ಲ.

ಆರ್‌ಇಐಟಿಗಳು ಈಕ್ವಿಟಿ ಹೂಡಿಕೆ ಹಾಗೂ ನಿಶ್ಚಿತ ವರಮಾನದ ಹೂಡಿಕೆಗಳ ನಡುವಿನ ಹೂಡಿಕೆಯ ರೂಪದಲ್ಲಿ ಕಾಣುತ್ತವೆ. ಆರ್‌ಇಐಟಿಗಳು ಸ್ಥಿರವಾದ ವರಮಾನವನ್ನು, ಬಂಡವಾಳದ ಮೌಲ್ಯ ವೃದ್ಧಿಯ ಸಾಧ್ಯತೆಯನ್ನೂ ಹೂಡಿಕೆದಾರರಿಗೆ ಒದಗಿಸುತ್ತವೆ.

ಈಗ ಆರ್‌ಇಐಟಿಗಳನ್ನು 'ಈಕ್ವಿಟಿ' ಎಂದು ಪರಿಗಣಿಸಲು ಸೆಬಿ ಅವಕಾಶ ಕಲ್ಪಿಸಿರುವುದರ ಪರಿಣಾಮವಾಗಿ ಪಿಂಚಣಿ ನಿಧಿಗಳು, ವಿಮಾ ಕಂಪನಿಗಳು ಹಾಗೂ ಮ್ಯೂಚುವಲ್ ಫಂಡ್‌ಗಳು ಇವುಗಳ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಹಣ ತೊಡಗಿಸುವ ಸಾಧ್ಯತೆ ಇರುತ್ತದೆ. ಇದುವರೆಗೆ ಈ ವರ್ಗದ ಹೂಡಿಕೆದಾರರಿಗೆ ಆರ್‌ಇಐಟಿಗಳ ಮೇಲೆ ಹೆಚ್ಚು ಹಣ ತೊಡಗಿಸಲು ಮಿತಿ ಇತ್ತು, ಏಕೆಂದರೆ ಇವುಗಳನ್ನು 'ಪರ್ಯಾಯ ಹೂಡಿಕೆ'ಗಳು ಎಂದು ಪರಿಗಣಿಸಲಾಗಿತ್ತು.

ಈಗ ಇವುಗಳನ್ನು ಈಕ್ವಿಟಿ ಎಂದು ಪರಿಗಣಿಸಲು ಅವಕಾಶ ದೊರೆತಿರುವ ಕಾರಣದಿಂದಾಗಿ, ಇವುಗಳಲ್ಲಿ ತೊಡಗಿಸಲು ಮೀಸಲಿರಿಸುವ ಮೊತ್ತ ಹೆಚ್ಚಲಿದೆ. ಆಗ ರಿಯಲ್ ಎಸ್ಟೇಟ್ ಉದ್ಯಮಕ್ಕೆ ದೀರ್ಘಾವಧಿಯ ಬಂಡವಾಳವನ್ನು ಒದಗಿಸಬಲ್ಲ ಹಣದ ಹರಿವು ಕೂಡ ಲಭ್ಯವಾಗಲಿದೆ.

ಜಗತ್ತಿನಲ್ಲಿ ಏನಾಯಿತು? ಇಲ್ಲಿ ಏನಾಗಬಹುದು?: ಆರ್‌ಇಐಟಿಗಳ ವಿಚಾರದಲ್ಲಿ ಜಾಗತಿಕ ಮಟ್ಟದಲ್ಲಿ ಏನಾಯಿತು ಎಂಬುದರ ಅವಲೋಕನವು ಭಾರತದಲ್ಲಿ ಇವುಗಳು ಮುಂದೆ ಏನಾಗಬಹುದು ಎಂಬುದರ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಅಮೆರಿಕದಲ್ಲಿ ಆರ್‌ಇಐಟಿಗಳು ಆರು ದಶಕಗಳಿಂದ ಗಟ್ಟಿಯಾಗಿ ಬೇರುಬಿಟ್ಟಿವೆ. ಅವು ಅಲ್ಲಿ ಇಂದು ಶತಕೋಟಿ ಡಾಲರ್‌ಗಳ ಮೊತ್ತದ ಆಸ್ತಿಯನ್ನು ನಿರ್ವಹಿಸುತ್ತಿವೆ. ಸಿಂಗಪುರದಲ್ಲಿ ಆರ್‌ಇಐಟಿಗಳನ್ನು ಬಳಸಿ ಅಲ್ಲಿನ ನಗರ ಅರ್ಥ ವ್ಯವಸ್ಥೆಗೆ ದೇಶಿ ಹಾಗೂ ವಿದೇಶಿ ಬಂಡವಾಳ ಬರುವಂತೆ ಮಾಡಲಾಗಿದೆ.

ಭಾರತದಲ್ಲಿ ಆರ್‌ಇಐಟಿಗಳು ಆರಂಭಿಕ ಹಂತದಲ್ಲಿ ಇವೆ. ಗ್ರೇಡ್ ಎ ದರ್ಜೆಯ ಕಚೇರಿ ಸ್ಥಳಗಳಲ್ಲಿ ಚಿಕ್ಕ ಪಾಲು ಮಾತ್ರ ಆರ್‌ಇಐಟಿಗಳ ವ್ಯಾಪ್ತಿಯಲ್ಲಿದೆ. ಆದರೆ ಅಧ್ಯಯನಗಳ ಪ್ರಕಾರ, ಸುಧಾರಣಾ ಕ್ರಮಗಳು ಮುಂದುವರಿದಲ್ಲಿ 2030ರ ವೇಳೆಗೆ ಇಂತಹ ಸ್ಥಳಗಳ ಪೈಕಿ ಶೇ 30ರಷ್ಟು ಪಾಲು ಆರ್‌ಇಐಟಿ ವ್ಯಾಪ್ತಿಗೆ ಬರುವ ನಿರೀಕ್ಷೆ ಇದೆ.

ಒಟ್ಟಾರೆಯಾಗಿ ಹೇಳುವುದಾದರೆ, ಹಿಂದೆ ವಿಶಿಷ್ಟವಾದ ಹೂಡಿಕೆ ಉತ್ಪನ್ನಗಳು ಎಂದು ಗುರುತಿಸಿಕೊಂಡಿದ್ದ ಆರ್‌ಇಐಟಿಗಳು ಈಗ ರಿಯಲ್ ಎಸ್ಟೇಟ್ ಹಾಗೂ ಬಂಡವಾಳ ಮಾರುಕಟ್ಟೆಗಳ ನಡುವಿನ ಸೇತುವೆಯಂತೆ ಕೆಲಸ ಮಾಡುತ್ತಿವೆ. ಇವುಗಳ ವಿಸ್ತರಣೆಯು ದೇಶದ ನಗರ ಪ್ರದೇಶಗಳ ವಿಸ್ತರಣೆಯ ಮೇಲೆ ಪ್ರಭಾವ ಬೀರಲಿದೆ, ಕುಟುಂಬಗಳು ಮತ್ತು ಸಂಸ್ಥೆಗಳ ಉಳಿತಾಯದ ಹಣವು ಉತ್ಪಾದಕ ಆಸ್ತಿಗಳ ಮೇಲೆ ಹೇಗೆ ವಿನಿಯೋಗ ಆಗಲಿದೆ ಎಂಬುದರ ಮೇಲೆ ಪ್ರಭಾವ ಬೀರಲಿದೆ.

ಹೂಡಿಕೆದಾರರು ಸೆಬಿ ನೋಂದಾಯಿತ ಹಣಕಾಸು ಸಲಹೆಗಾರರಿಂದ ಸಲಹೆ ಪಡೆದು, ತಮ್ಮ ಒಟ್ಟು ಹೂಡಿಕೆ ಮೊತ್ತದಲ್ಲಿ ಶೇ 5ರಿಂದ ಶೇ 10ರವರೆಗಿನ ಮೊತ್ತವನ್ನು ಆರ್‌ಇಐಟಿಗಳ ಮೇಲೆ ತೊಡಗಿಸುವ ಬಗ್ಗೆ ಪರಿಗಣಿಸಬಹುದು. ಅದರಲ್ಲೂ ಮುಖ್ಯವಾಗಿ ಹೆಚ್ಚಿನ 'ಗ್ರೇಡ್ ಎ' ಕಚೇರಿ ಸ್ಥಳಗಳು, ದೀರ್ಘಾವಧಿ ಗುತ್ತಿಗೆ ಒಪ್ಪಂದ, ಶಿಸ್ತಿನ ಆಡಳಿತ ನಿರ್ವಹಣೆ ಇರುವ ಆರ್‌ಇಐಟಿಗಳಿಗೆ ಆದ್ಯತೆ ನೀಡಬಹುದು.

ಲೇಖಕ ಕ್ರೆಡಾಯ್ ಬೆಂಗಳೂರು ಇದರ ಅಧ್ಯಕ್ಷ

ಲೆಕ್ಕಾಚಾರದ ರಿಸ್ಕ್

ಸ್ಥಿರವಾದ ವರಮಾನ ಹಾಗೂ ಹೂಡಿಕೆ ಮೌಲ್ಯದಲ್ಲಿ ಹೆಚ್ಚಳದ ಸಾಧ್ಯತೆಯು ಆರ್‌ಇಐಟಿಗಳು ಹೂಡಿಕೆದಾರರನ್ನು ಸೆಳೆಯುವುದಕ್ಕೆ ಪ್ರಮುಖ ಕಾರಣ. ಬಾಡಿಗೆ ಮೂಲಕ ಬರುವ ಹಣದಲ್ಲಿ ಹೆಚ್ಚಿನ ಪಾಲನ್ನು ಇವು ಹೂಡಿಕೆದಾರರಿಗೆ ವಿತರಿಸಲೇಬೇಕು, ಹೀಗಾಗಿ ಇವುಗಳಿಂದ ನೆಚ್ಚಿಕೊಳ್ಳಬಹುದಾದ ವರಮಾನವೊಂದು ಸಿಗುತ್ತದೆ. ಈಚಿನ ತ್ರೈಮಾಸಿಕಗಳಲ್ಲಿ ದೇಶದ ಷೇರುಪೇಟೆ ನೋಂದಾಯಿತ ಆರ್‌ಇಐಟಿಗಳು ₹1,500 ಕೋಟಿಗಿಂತ ಹೆಚ್ಚಿನ ಮೊತ್ತವನ್ನು 2.5 ಲಕ್ಷಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಇರುವ ತಮ್ಮ ಹೂಡಿಕೆದಾರರಿಗೆ ವಿತರಿಸಿವೆ.

ಬಾಡಿಗೆ ವರಮಾನವು ಹೂಡಿಕೆದಾರರಿಗೆ ಹೇಗೆ ಹಣ ತಂದುಕೊಟ್ಟಿದೆ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತಿದೆ. ಬಾಡಿಗೆದಾರರು ಬಿಟ್ಟುಹೋಗದಂತೆ ನೋಡಿಕೊಳ್ಳುವ ಗುತ್ತಿಗೆ ಒಪ್ಪಂದಗಳು, ಬಾಡಿಗೆ ಮೊತ್ತದ ಹೆಚ್ಚಳ, ಬಹುರಾಷ್ಟ್ರೀಯ ಕಂಪನಿಗಳು ಬಾಡಿಗೆಗೆ ಇರುವುದು, ಬಾಡಿಗೆ ವರಮಾನದ ಹಂಚುವಿಕೆಗೆ ಇರುವ ನೀತಿಗಳು ಈ ಹಂಚಿಕೆಗೆ ಕಾರಣ. ಬಾಡಿಗೆ ಮೊತ್ತದ ಏರಿಕೆಯ ಬಗ್ಗೆ ಗುತ್ತಿಗೆ ಒಪ್ಪಂದದಲ್ಲಿ ಉಲ್ಲೇಖ ಇರುವುದು, ವಾಣಿಜ್ಯ ಸ್ಥಳಗಳನ್ನು ಬಾಡಿಗೆಗೆ ಪಡೆಯುವುದು ಹೆಚ್ಚುತ್ತಿರುವುದು ಮತ್ತು ಬಾಡಿಗೆದಾರರು ಹೆಚ್ಚುತ್ತಿರುವುದು ಈ ಬಗೆಯ ಹೂಡಿಕೆಗಳಲ್ಲಿ ಬೆಳವಣಿಗೆಯ ಸಾಧ್ಯತೆಯನ್ನು ಹೆಚ್ಚಿಸುತ್ತವೆ. ಹೀಗಾಗಿ, ಈ ಹೂಡಿಕೆಗಳು ದೀರ್ಘಾವಧಿಯಲ್ಲಿ ಶೇ 12ರಿಂದ ಶೇ 15ರಷ್ಟು ಲಾಭ ತಂದುಕೊಡುವ ಸಾಧ್ಯತೆ ಇದೆ. ಅಲ್ಲದೆ ಇವು ಈಕ್ವಿಟಿ ಹೂಡಿಕೆಗಳಿಗಿಂತ ಹೆಚ್ಚು ಸ್ಥಿರವಾಗಿರುತ್ತವೆ.

ಪ್ಯಾಸಿವ್ ಮ್ಯೂಚುವಲ್ ಫಂಡ್: ಹೆಚ್ಚಿತು ಜನಪ್ರಿಯತೆ, ಹೆಚ್ಚಿದೆ ಹೂಡಿಕೆ

₹12.2 ಲಕ್ಷ ಕೋಟಿ
2025ರವರೆಗೆ ದೇಶದ ಪ್ಯಾಸಿವ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆದಾರರು ತೊಡಗಿಸಿರುವ ಮೊತ್ತ

₹1.9 ಲಕ್ಷ ಕೋಟಿ
2019ರಲ್ಲಿ ಪ್ಯಾಸಿವ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಆಗಿದ್ದ ಮೊತ್ತ

6 ಪಟ್ಟಿಗೂ ಹೆಚ್ಚು
ಆರು ವರ್ಷಗಳ ಅವಧಿಯಲ್ಲಿ ಈ ಬಗೆಯ ಫಂಡ್‌ಗಳಲ್ಲಿನ ಹೂಡಿಕೆಯಲ್ಲಿ ಆಗಿರುವ ಏರಿಕೆ



76% ಇಂಡೆಕ್ಸ್ ಫಂಡ್‌ಗಳು ಹಾಗೂ ಇಟಿಎಫ್‌ಗಳ ಬಗ್ಗೆ ಮಾಹಿತಿ ಇರುವ ಮ್ಯೂಚುವಲ್ ಫಂಡ್ ಹೂಡಿಕೆದಾರರು

68% ಪ್ಯಾಸಿವ್ ಫಂಡ್‌ಗಳ ಬಗ್ಗೆ ಮಾಹಿತಿ ಇರುವವರ ಪೈಕಿ ಕನಿಷ್ಠ ಒಂದಾದರೂ ಪ್ಯಾಸಿವ್ ಫಂಡ್‌ನಲ್ಲಿ ಹಣ ತೊಡಗಿಸಿರುವ ಹೂಡಿಕೆದಾರರ ಪ್ರಮಾಣ (2025ರ ವೇಳೆಗೆ)

61% ಕನಿಷ್ಠ ಒಂದಾದರೂ ಪ್ಯಾಸಿವ್ ಫಂಡ್‌ನಲ್ಲಿ ಹಣ ಹೂಡಿಕೆ ಮಾಡಿದ್ದವರ ಪ್ರಮಾಣ (2023ರ ಅಂಕಿ–ಅಂಶ)

ಪ್ಯಾಸಿವ್ ಫಂಡ್‌ಗಳಲ್ಲಿ ಹೂಡಿಕೆಗೆ ಕಾರಣ ಏನು?


54% ಇಷ್ಟು ಮಂದಿಯ ಪ್ರಕಾರ ಈ ಬಗೆಯ ಫಂಡ್‌ಗಳಲ್ಲಿ ವೆಚ್ಚ ಕಡಿಮೆ ಇರುವುದು ಹೂಡಿಕೆಗೆ ಕಾರಣ

46% ಇವುಗಳಲ್ಲಿ ಹಣ ತೊಡಗಿಸುವುದರಿಂದ ವೈವಿಧ್ಯತೆಯನ್ನು ಸಾಧಿಸಲು ಆಗುತ್ತದೆ ಎಂಬ ಕಾರಣಕ್ಕೆ ಇಷ್ಟು ಮಂದಿಯಿಂದ ಹೂಡಿಕೆ

46% ಈ ಬಗೆಯ ಫಂಡ್‌ಗಳು ಸರಳವಾಗಿವೆ, ಪಾರದರ್ಶಕವಾಗಿವೆ ಎಂಬುದು ಇಷ್ಟು ಪ್ರಮಾಣದ ಹೂಡಿಕೆದಾರರ ಅಭಿಪ್ರಾಯ


29% ಫಂಡ್‌ಗಳಿಂದ ಸಿಗುವ ಲಾಭದ ಪ್ರಮಾಣ ಚೆನ್ನಾಗಿದೆ ಎಂಬುದು ಇಷ್ಟು ಮಂದಿಯ ಅಭಿಪ್ರಾಯ

ಭಾರತೀಯರು ಏಕೆ ಹೂಡಿಕೆ ಮಾಡುತ್ತಿದ್ದಾರೆ?



1. ಹಣಕಾಸಿನ ವಿಚಾರದಲ್ಲಿ ಸ್ವಾವಲಂಬನೆ ಸಾಧಿಸುವ ಉದ್ದೇಶ
2. ನಿವೃತ್ತಿ ನಂತರದ ಜೀವನಕ್ಕೆ
3. ಹಣವನ್ನು ವಿಭಿನ್ನವಾದ ಆಸ್ತಿ ವರ್ಗಗಳಲ್ಲಿ ತೊಡಗಿಸುವ ಉದ್ದೇಶದಿಂದ ಹೂಡಿಕೆ

ದೀರ್ಘಾವಧಿ ಹೂಡಿಕೆಗೆ ಹೆಚ್ಚು ಒಲವು




13% ಒಂದು ಅಥವಾ ಮೂರು ವರ್ಷಗಳ ಅವಧಿಗೆ ಮಾತ್ರ ಹೂಡಿಕೆ ಮಾಡಿದವರ ಪ್ರಮಾಣ

2% ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಹೂಡಿಕೆ ಮಾಡಿದವರು

ಇಷ್ಟು ಪ್ರಮಾಣದ ಹೂಡಿಕೆದಾರರು ಮೂರು ವರ್ಷಗಳಿಗೂ ಹೆಚ್ಚಿನ ಅವಧಿಗೆ ಹಣವನ್ನು ತೊಡಗಿಸುತ್ತಿದ್ದಾರೆ

ಎಷ್ಟು ಪ್ಯಾಸಿವ್ ಫಂಡ್‌ಗಳಲ್ಲಿ ಹಣ ತೊಡಗಿಸಿದ್ದಾರೆ?



17% 5ಕ್ಕಿಂತ ಹೆಚ್ಚು ಪ್ಯಾಸಿವ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದವರು

26% 3ರಿಂದ 5 ಪ್ಯಾಸಿವ್ ಫಂಡ್‌ಗಳಲ್ಲಿ ಹಣ ತೊಡಗಿಸಿದವರು

57% 1ರಿಂದ 3 ಪ್ಯಾಸಿವ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದವರು

- ಈ ವರ್ಷದ ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಸಮೀಕ್ಷೆ ನಡೆಸಲಾಗಿದೆ
- ಮೂರು ಸಾವಿರಕ್ಕೂ ಹೆಚ್ಚು ಮಂದಿಯಿಂದ ಪ್ರತಿಕ್ರಿಯೆ ಪಡೆಯಲಾಗಿದೆ
- ಪ್ರತಿಕ್ರಿಯೆ ನೀಡಿದವರಲ್ಲಿ ಶೇಕಡ 50ಕ್ಕಿಂತ ಹೆಚ್ಚಿನ ಮಂದಿ ಮಹಾನಗರಗಳಿಂದ ದೂರ ಇರುವವರು
- ಸಮೀಕ್ಷೆಯಲ್ಲಿ ಭಾಗಿಯಾದವರೆಲ್ಲರೂ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿರುವವರು

ಆಧಾರ: ಮೋತಿಲಾಲ್ ಓಸ್ವಾಲ್ ಮ್ಯೂಚುವಲ್ ಫಂಡ್ ವರದಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ನಿಯಂತ್ರಣ ಮತ್ತು ಸಹಭಾಗಿತ್ವ

6) ಸಸ್ಯಗಳಲ್ಲಿ ಧನಗುರುತ್ವಾನುವರ್ತನೆಗೆ ಒಂದು ಉದಾಹಣೆ (ಜೂನ್: 2022)
ಎ) ಕಾಂಡದ ಬೆಳವಣಿಗೆ
ಬಿ) ಮಣ್ಣಿನ ಆಳಕ್ಕೆ ಬೇರುಗಳ ಬೆಳವಣಿಗೆ
ಸಿ) ಬಳ್ಳಿಗಳ ಕುಡಿಗಳ ಬೆಳವಣಿಗೆ
ಡಿ) ಬೇರುಗಳ ಮೇಲ್ಮುಖ ಬೆಳವಣಿಗೆ
ಉತ್ತರ:– (ಬಿ) ಮಣ್ಣಿನ ಆಳಕ್ಕೆ ಬೇರುಗಳ ಬೆಳವಣಿಗೆ

7) ಸಸ್ಯಗಳ ಬೆಳವಣಿಗೆಯನ್ನು ಕುಂಠಿತಗೊಳಿಸುವ ಒಂದು ಸಸ್ಯ ಹಾರ್ಮೋನ್ (ಜೂನ್– 2021)
ಎ) ಆಕ್ಸಿಜನ್ ಬಿ) ಜಿಬ್ಬೆರಿಲಿನ್
ಸಿ) ಸೈಟೋಕೈನಿನ್ ಡಿ) ಅಬ್ಸಿಸಿಕ್ ಆಮ್ಲ
ಉತ್ತರ:– (ಡಿ) ಅಬ್ಸಿಸಿಕ್ ಆಮ್ಲ

8) ಮಾನವನ ದೇಹದಲ್ಲಿ ಕಾರ್ಬೋಹೈಡ್ರೇಟ್, ಪ್ರೋಟಿನ್ ಮತ್ತು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ನಿಯಂತ್ರಿಸುವ ಹಾರ್ಮೋನ್ (ಮಾರ್ಚ್– 2021)
ಎ) ಟೆಸ್ಟೋಸ್ಟಿರಾನ್ ಬಿ) ಅಡ್ರಿನಲಿನ್
ಸಿ) ಇನ್ಸುಲಿನ್ ಡಿ) ಥೈರಾಕ್ಸಿನ್

9) ಮೊಳೆಯುತ್ತಿರುವ ಬೀಜವಿರುವ ಕುಂಡವನ್ನು ಒಂದು ಕತ್ತಲೆ ಕೋಣೆಯಲ್ಲಿ ಇಡಲಾಗಿದೆ. ಉರಿಯುತ್ತಿರುವ ಮೇಣದ ಬತ್ತಿಯೊಂದನ್ನು ಅದರ ಸಮೀಪ ಕೆಲವು ದಿನಗಳವರೆಗೆ ಇರಿಸಲಾಗುತ್ತದೆ. ಮೊಳಕೆಯ ಮೇಲ್ಭಾಗವು ಉರಿಯುತ್ತಿರುವ ಮೇಣದ ಬತ್ತಿಯ ಬೆಳಕಿನ ಕಡೆಗೆ ಬಾಗುತ್ತದೆ. ಇದು (ಮಾರ್ಚ್–2021)
ಎ) ರಾಸಾಯನಿಕಾನುವರ್ತನೆ ಬಿ) ದ್ಯುತಿ ಅನುವರ್ತನೆ
ಸಿ) ಗುರುತ್ವಾನುವರ್ತನೆ ಡಿ) ಜಲಾನುವರ್ತನೆ
ಉತ್ತರ:–(ಬಿ) ದ್ಯುತಿ ಅನುವರ್ತನೆ

10) ಥೈರಾಕ್ಸಿನ್ ಹಾರ್ಮೋನ್‌ಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ತಪ್ಪಾದ ಹೇಳಿಕೆ (ಮಾರ್ಚ್–2021)
ಎ) ಇದು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ನಿಯಂತ್ರಿಸುತ್ತದೆ.
ಬಿ) ಇದರ ಕೊರತೆಯಿಂದ ಗಳಗಂಡರೋಗ ಉಂಟಾಗುತ್ತದೆ.
ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಸುವಿಕೆಯಾಗುತ್ತದೆ
ಡಿ) ಆಹಾರದಲ್ಲಿನ ಅಯೋಡಿನ್ ಇದರ ಉತ್ಪಾದನೆಗೆ ಅಗತ್ಯವಾಗಿದೆ
ಉತ್ತರ:(ಸಿ)ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಸುವಿಕೆಯಾಗುತ್ತದೆ

11) ಪರಾವರ್ತಿತ ಪ್ರತಿಕ್ರಿಯೆಯ ಕೇಂದ್ರ......... (ಜೂನ್–2021)
ಎ) ಮಹಾಮಸ್ತಿಷ್ಕ ಬಿ) ಮಿದುಳು ಬಳ್ಳಿ
ಸಿ) ಅನುಮಸ್ತಿಷ್ಕ ಡಿ) ಹೈಪೋಥಲಾಮಸ್
ಉತ್ತರ:– (ಬಿ) ಮಿದುಳು ಬಳ್ಳಿ

12) ನರಕೋಶದಲ್ಲಿ ವಿದ್ಯುತಾವೇಗವು ಚಲಿಸುವ ಸರಿಯಾದ ಮಾರ್ಗ (ಜೂನ್–2021)
ಎ) ಡೆಂಡ್ರೈಟ್ → ಕೋಶಕಾಯ → ಆಕ್ಸಾನ್ → ಆಕ್ಸಾನ್ ತುದಿ
ಬಿ) ಆಕ್ಸಾನ್ → ಆಕ್ಸಾನ್ ತುದಿ→ ಡೆಂಡ್ರೈಟ್→ ಕೋಶಕಾಯ
ಸಿ) ಡೆಂಡ್ರೈಟ್→ ಆಕ್ಸಾನ್ → ಕೋಶಕಾಯ→ ಆಕ್ಸಾನ್ ತುದಿ
ಡಿ) ಕೋಶಕಾಯ→ ಡೆಂಡ್ರೈಟ್→ ಆಕ್ಸಾನ್ ತುದಿ→ ಆಕ್ಸಾನ್
ಉತ್ತರ:–(ಎ) ಡೆಂಡ್ರೈಟ್→ ಕೋಶಕಾಯ→ಆಕ್ಸಾನ್→ಆಕ್ಸಾನ್ ತುದಿ

13) ಎರಡು ನರಕೋಶಗಳ ಮಧ್ಯೆ ಇರುವ ಸ್ಥಳಾವಕಾಶ (ಮಾರ್ಚ್– 2021)
ಎ) ಡೆಂಡ್ರೈಟ್ ಬಿ) ಆಕ್ಸಾನ್
ಸಿ) ಸಂಸರ್ಗ ಡಿ) ಕೋಶಕಾಯ
ಉತ್ತರ:– (ಸಿ) ಸಂಸರ್ಗ

14) ಸಸ್ಯಗಳ ಬೆಳವಣಿಗೆಯನ್ನು ಪ್ರತಿಬಂಧಿಸುವ ಹಾರ್ಮೋನು ಯಾವುದು? (ಜೂನ್– 2022)
ಉತ್ತರ:– ಅಬ್ಸಿಸಿಕ್ ಆಮ್ಲ

15) ಈ ಕೆಳಗಿನ ಸಸ್ಯ ಹಾರ್ಮೋನ್‌ಗಳ ಕಾರ್ಯವನ್ನು ತಿಳಿಸಿ
1) ಆಕ್ಸಿನ್ (2) ಸೈಟೋಕೈನಿನ್ (ಏಪ್ರಿಲ್ –2022)
ಉತ್ತರ:– 1) ಆಕ್ಸಿನ್:– ಪ್ರಮುಖವಾಗಿ ಕಾಂಡಗಳಲ್ಲಿ ಹಾಗೂ ಸಸ್ಯದ ಬಹುತೇಕ ಭಾಗಗಳಲ್ಲಿ ಜೀವಕೋಶಗಳು ಉದ್ದವಾಗಿ ಬೆಳೆಯಲು ಸಹಕಾರಿಯಾಗಿದೆ.
2) ಸೈಟೋಕೈನಿನ್:– ಹಣ್ಣು ಮತ್ತು ಬೀಜಗಳಲ್ಲಿ ಕೋಶವಿಭಜನೆಯನ್ನು ಉತ್ತೇಜಿಸುತ್ತದೆ., ಸಮಗ್ರವಾಗಿ ಸಸ್ಯಗಳ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.

16) ಧನ ಗುರುತ್ವಾನುವರ್ತನೆ ಮತ್ತು ಋಣ ಗುರುತ್ವಾನುವರ್ತನೆಗಳನ್ನು ನಿರೂಪಿಸಿ (ಜುಲೈ–2018)
ಉತ್ತರ:– ಗುರುತ್ವದ ಪ್ರಚೋದನೆಗಳೊಪಟ್ಟು ಸಸ್ಯದ ಭಾಗಗಳು ಆ ಕಡೆ ಬೆಳೆಯುವುದನ್ನು ಗುರುತ್ವಾನುವರ್ತನೆ ಎನ್ನುತ್ತಾರೆ. ಉದಾ:– ಕಾಂಡದ ತುದಿಯ ಗುರುತ್ವ ಬಲಕ್ಕೆ ವಿರುದ್ಧವಾಗಿ ಬೆಳೆಯುವುದನ್ನು ಋಣ ಗುರುತ್ವಾನುವರ್ತನೆ ಎಂದೂ ಬೇರಿನ ತುದಿಗಳು ಗುರುತ್ವ ಬಲದ ಕಡೆಗೆ ಬೆಳೆಯುವುದನ್ನು ಧನ ಗುರುತ್ವಾನುವರ್ತನೆ ಎಂದು ಕರೆಯುವರು.



17) (ಎ)ಬಳ್ಳಿ ಸಸ್ಯವೊಂದು ಬೆಳೆಂದತೆ ನಿರ್ದಿಷ್ಟ ದಿಕ್ಕಿನ ಕಡೆಗೆ ಅದು ಚಲಿಸುತ್ತಿರುವಂತೆ ಕಾಣುತ್ತದೆ ಹೇಗೆ?
(ಬಿ) ಪ್ರಾಣಿಗಳಲ್ಲಿ ರಾಸಾಯನಿಕ ಸಂವಹನದ ಅಗತ್ಯವನ್ನು ವಿವರಿಸಿ (ಜೂನ್– 2023)
ಉತ್ತರ:– (ಎ) ಒಂದು ಸ್ಪರ್ಶಕ್ಕೆ (ಸ್ಪರ್ಶಾನುವರ್ತನೆ) ಬಳ್ಳಿ ಸಸ್ಯಗಳ ಕುಡಿಗಳು ಒಂದು ಆಧಾರದ ಸಂಪರ್ಕಕ್ಕೆ ಬಂದಾಗ ಇದರ ಸುತ್ತ ಸುತ್ತಿಕೊಳ್ಳುತ್ತದೆ ಮತ್ತು ವೇಗವಾಗಿ ಬೆಳೆಯುತ್ತವೆ.
ಬಳ್ಳಿಯ ಕುಡಿಗಳು ಒಂದು ಆಧಾರದ ಸುತ್ತ ಸುತ್ತಿಕೊಂಡಾಗ, ಸಸ್ಯದ ಕುಡಿಗಳ ತುದಿಗಳಲ್ಲಿ ಆಕ್ಸಿನ್ ಹಾರ್ಮೋನ್ ಹೆಚ್ಚಿನ ಸಾಂದ್ರತೆಯಲ್ಲಿ ಸಂಶ್ಲೇಷಣೆಯಾಗುತ್ತದೆ. ಜೀವಕೋಶಗಳು ಉದ್ದವಾಗಲು ಪ್ರಚೋದಿಸುತ್ತದೆ, ಆಗ ಸಸ್ಯವು ನಿರ್ದೇಶಿತ ಬೆಳವಣಿಗೆಯನ್ನು ಚಲನೆಯನ್ನು ಬೆಲಕಿನ ಕಡೆಗೆ ಪ್ರದರ್ಶಿಸುತ್ತದೆ.
(ಬಿ) ಪ್ರಾಣಿಗಳಲ್ಲಿ ರಾಸಾಯನಿಕ ಸಂವಹನದ ಅವಶ್ಯಕತೆ:–
ಪ್ರಾಣಿಗಳ ದೇಹದಲ್ಲಿ ವಿದ್ಯುತ್ ಆವೇಗಗಳು ನರ ಅಂಗಾಂಶಗಳಿಂದ ಸಂಪರ್ಕ ಹೊಂದಿದ ಜೀವಕೋಶಗಳನ್ನು ಮಾತ್ರ ತಲುಪುತ್ತದೆ, ಆದರೆ ಪ್ರತಿಯೊಂದು ಜೀವಕೋಶವನ್ನಲ್ಲ
ನರಕೋಶಗಳು ನಿರಂತರವಾಗಿ ವಿದ್ಯುತ್ ಆವೇಗಗಳನ್ನು ಸೃಷ್ಟಿಸಿ ಸಂವಹನ ಸಾಧಿಸಲು ಸಾಧ್ಯವಿಲ್ಲ, ಆದ್ದರಿಂದ ಪ್ರತಿಯೊಂದು ಜೀವಕೋಶಗಳಿಗೂ ಅಗತ್ಯ ಸಂವೇದನೆಗಳನ್ನು ನಿರಂತರವಾಗಿ ಸಾಗಿಸಲು ರಾಸಾಯನಿಕ ಸಂವಹನ ಅವಶ್ಯಕ.

18) ಕೆಳಗಿನ ಸಂದರ್ಭಗಳನ್ನು ಕಲ್ಪಿಸಿಕೊಳ್ಳಿ
(1) ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು
(2) ದೇಹದಲ್ಲಿ ಏರುಪೇರಾಗುತ್ತಿರುವ ರಕ್ತದ ಒತ್ತಡ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

Coordination Compound


5) What is meant by unidentate, bidentate and ambidentate ligands? Give two examples for each.
Ans: (..........Contd)
Example NO_2^- or ONO^-, CN^- or NC^-
(iii) Bidentate: These are ligands with two donor sites. For example, Ethane-1,2-diamine, Oxalate ion ($C_2O_4^{2-}$)

6. Using IUPAC norms, write the formulas for the following:
(i) Tetrahydroxidozincate(II)
(ii) Potassium tetrachloridopalladate(II)
(iii) Diamminedichloridoplatinum(II)
(iv) Potassium tetracyanonickelate(II)
(v) Pentaamminenitrito-O-cobalt(III)
(vi) Hexaamminecobalt(III) sulphate
(vii) Potassium tri(oxalato)chromate(III)
(viii) Hexaammineplatinum(IV)
(ix) Tetrabromidocuprate(II)
(x) Pentaamminenitrito-N-cobalt(III)
Ans:(i) $[Zn(OH)_4]^{2-}$ (ii) $K_2[Pd Cl_4]$
(iii) $[Pt(NH_3)_2Cl_2]$ (iv) $K_2[Ni(CN)_4]$
(v) $[Co(NO_2)(NH_3)_5]^{2+}$
(vi) $[Co(NH_3)_6]_2(SO_4)_3$
(vii) $K_3[Cr(C_2O_4)_3]$ (viii) $[Pt(NH_3)_6]^{4+}$
(ix) $[Cu(Br)_4]^{2-}$ (x) $[Co(ONO)(NH_3)_5]^{2+}$


7. Using IUPAC norms, write the systematic names of the following:
(i) $[Co(NH_3)_6]Cl_3$ (ii) $[Pt(NH_3)_2Cl(NH_2CH_3)]Cl$
(iii) $[Ti(H_2O)_6]^{3+}$ (iv) $[Co(NH_3)_4Cl(NO_2)]Cl$
(v) $[Mn(H_2O)_6]^{2+}$ (vi) $[NiCl_4]^{2-}$
(vii) $[Ni(NH_3)_6]Cl_2$ (viii) $[Co(en)_3]^{3+}$
(ix) $[Ni(CO)_4]$
Ans: (i) Hexaamminecobalt(III) chloride
(ii) Diamminechlorido (methylamine) platinum(II) chloride
(iii) Hexaquatitanium(III) ion
(iv)Tetraamminichloridonitrito-N-Cobalt(III) chloride
(v) Hexaquamanganese(II) ion
(vi) Tetrachloridonickelate(II) ion
(vii) Hexaamminenickel(II) chloride
(viii) Tris(ethane-1, 2-diamine) cobalt(III) ion
(ix) Tetracarbonylnickel(0)

8. Aqueous copper sulphate solution (blue in colour) gives:
(i) a green precipitate with aqueous potassium fluoride and
(ii) a bright green solution with aqueous potassium chloride. Explain these experimental results.
Ans: The blue colour of the aqueous $CuSO_4$ solution is because of the presence of $[Cu(H_2O)_4]^{2+}$ ions.
(i) So when KF is added, H_2O ligands are replaced by F^- ligands which yield green-coloured $[CuF_4]^{2+}$ ions.
$[Cu(H_2O)_4]^{2+} + 4F^- \longrightarrow [CuF_4]^{2-} + 4H_2O$
(ii) So when KCL is added, H_2O ligands are replaced by Cl^- ligands which yield bright green coloured $[CuCl_4]^{2+}$ ions.
$[Cu(H_2O)_4]^{2+} + 4Cl^- \longrightarrow [CuCl_4]^{2-} + 4H_2O$

9. List various types of isomerism possible for coordination compounds, giving an example of each.
Ans: The various types of isomerism present in coordination compounds are:
(i)Geometrical isomerism:




(ii) Optical isomerism:




(iii) Linkage isomerism: This is found in complexes that have ambidentate ligands. For example, $[Co(NH_3)_5(NO_2)]Cl_2$ and $[Co(NH_3)_5(ONO)]Cl_2$
(iv) Coordination isomerism: This kind of isomerism comes up when ligands are interchanged between anionic and cationic entities of different metal ions present in the complex. For example, $[Cr(NH_3)_6][Co(CN)_6]$
(v) Ionisation isomerism: This is the kind of isomerism where a counter ion takes the place of a ligand inside the coordination sphere. For example, $[Co(NH_3)_5Br]SO_4$ and $[Co(NH_3)_5SO_4]Br$
(vi) Solvate isomerism: $[Cr(H_2O)_5Cl]Cl.H_2O$

10. How many geometrical isomers are possible in the following coordination entities?
(i) $[Cr(C_2O_4)_3]^{3-}$ (ii) $[Co(NH_3)_3Cl_3]$
Ans:(i) In $[Cr(C_2O_4)_3]^{3-}$ no geometric isomers are present because it is a bidentate ligand.



(ii) In $[Co(NH_3)_3Cl_3]$ two isomers are possible.



(Contd..........)

ಎನ್‌ಡಿಎ: 15 ಕ್ಷೇತ್ರಗಳಿಗೆ ಮಾಂಝಿ ಪಟ್ಟು

ಬಿಹಾರ ವಿಧಾನಸಭೆ ಚುನಾವಣೆ: ಸೀಟು ಹಂಚಿಕೆ ಕಗ್ಗಂಟು
ಜೆಡಿಯು 103 ಮತ್ತು ಬಿಜೆಪಿ 102 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ನವದೆಹಲಿ: ಬಿಹಾರ ವಿಧಾನಸಭೆ ಚುನಾವಣೆಗೆ ಸಜ್ಜಾಗುತ್ತಿರುವ ಎನ್‌ಡಿಎ ಮೈತ್ರಿಕೂಟದಲ್ಲಿ ಸೀಟು ಹಂಚಿಕೆ ಕಗ್ಗಂಟು ಮತ್ತಷ್ಟು ಹೆಚ್ಚಿದೆ. ಕೇಂದ್ರ ಸಚಿವ ಮತ್ತು ಎಚ್‌ಎಎಂ ಮುಖ್ಯಸ್ಥ ಜಿತನ್ ರಾಮ್ ಮಾಂಝಿ ಅವರು 'ಅತೃಪ್ತರ ತಂಡ'ಕ್ಕೆ ಬುಧವಾರ ಸೇರಿಕೊಂಡಿದ್ದಾರೆ.

ಎನ್‌ಡಿಎ ಮೈತ್ರಿಕೂಟದಲ್ಲಿ ತಮ್ಮ ಪಕ್ಷಕ್ಕೆ 40 ಕ್ಷೇತ್ರಗಳನ್ನು ನೀಡಬೇಕು ಎಂದು ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರು ಬಿಜೆಪಿ ನಾಯಕರಲ್ಲಿ ಮಂಗಳವಾರ ಮನವಿ ಮಾಡಿದ್ದರು. ಮಾಂಝಿ ಅವರೂ ಪರೋಕ್ಷವಾಗಿ ಅತೃಪ್ತಿ ಹೊರ ಹಾಕಿದ್ದಾರೆ.

ಹಿರಿಯ ಹಿಂದಿ ಕವಿ ರಾಮಧಾರಿ ಸಿಂಗ್ ದಿನಕರ್ ಅವರ 'ರಶ್ಮಿ ರಥಿ' ಯ ಕವಿತೆಯನ್ನು ಉಲ್ಲೇಖಿಸಿ ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. 'ನೀವು ನ್ಯಾಯ ನೀಡುವುದಿದ್ದರೆ, ನಮಗೆ ಅರ್ಧ ನೀಡಿ.ಇಲ್ಲದಿದ್ದರೆ, ನಮಗೆ ಕೇವಲ 15 ಗ್ರಾಮಗಳನ್ನು ನೀಡಿ ಮತ್ತು ಉಳಿದದ್ದನ್ನು ನಿಮ್ಮೊಂದಿಗೆ ಇಟ್ಟುಕೊಳ್ಳಿ' ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

'243 ಸ್ಥಾನಗಳಲ್ಲಿ ಅರ್ಧದಷ್ಟು ಸ್ಪರ್ಧಿಸುವ ಮೂಲಕ ನಮ್ಮ ಪಕ್ಷದ ನೆಲೆ ವಿಸ್ತರಿಸಲು ಬಯಸಿದ್ದೇನೆ. ಆದರೆ, 15 ಸ್ಥಾನಗಳನ್ನು ನೀಡಿದರೂ ಸಂತೋಷ ಪಡುತ್ತೇನೆ' ಎಂದು ಮಾಂಝಿ ಹೇಳಿದ್ದಾರೆ.

ಮೈತ್ರಿಕೂಟದ ಪ್ರಮುಖ ಪಾಲುದಾರರಾದ ಜೆಡಿಯು ಹಾಗೂ ಬಿಜೆಪಿ ಕ್ರಮವಾಗಿ 103 ಮತ್ತು 102 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಸಿದ್ಧತೆ ನಡೆಸಿವೆ. ಉಳಿದ ಮೂರು ಮಿತ್ರ ಪಕ್ಷಗಳಿಗೆ 38 ಸ್ಥಾನಗಳನ್ನು ಬಿಟ್ಟುಕೊಡಲು ಯೋಜಿಸಿವೆ. 'ಚಿರಾಗ್ ಅವರ ಪಕ್ಷಕ್ಕೆ 20 ಸ್ಥಾನಗಳನ್ನು ನೀಡಲಾಗುವುದು. ಮಾಂಝಿ ಮತ್ತು ಉಪೇಂದ್ರ ಕುಶ್ವಾಹ ಅವರಿಗೆ ಕ್ರಮವಾಗಿ 10 ಮತ್ತು ಎಂಟು ಸ್ಥಾನಗಳನ್ನು ನೀಡಲಾಗುವುದು' ಎಂದು ಎನ್‌ಡಿಎ ಮೂಲಗಳು ತಿಳಿಸಿವೆ. ತಮ್ಮ ಪಕ್ಷಕ್ಕೆ ಕನಿಷ್ಠ 15 ಕ್ಷೇತ್ರಗಳನ್ನು ನೀಡಬೇಕು ಎಂಬುದು ಮಾಂಝಿ ಅವರ ಬೇಡಿಕೆ.

ಬಿಜೆಪಿಯತ್ತ ಕಾಂಗ್ರೆಸ್ ಶಾಸಕ: ಇನ್ನೊಂದೆಡೆ, ಮಾಜಿ ಸಚಿವ ಮುರಾರಿ ಪ್ರಸಾದ್ ಗೌತಮ್ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರು ಬಿಜೆಪಿಗೆ ಸೇರಬಹುದು ಎಂಬ ಊಹಾಪೋಹಗಳು ದಟ್ಟವಾಗಿವೆ.

ಅವರು ಕಾಂಗ್ರೆಸ್ ಟಿಕೆಟ್‌ನಲ್ಲಿ ಆಯ್ಕೆಯಾಗಿದ್ದರು. ನಿತೀಶ್ ಕುಮಾರ್ ನೇತೃತ್ವದ ಮಹಾಘಟಬಂಧನ್ ಸರ್ಕಾರದಲ್ಲಿ ಗೌತಮ್ ಸಚಿವರಾಗಿದ್ದರು. ಜೆಡಿಯು ಎನ್‌ಡಿಎಗೆ ಮರಳಿದ ನಂತರ ಗೌತಮ್ ಅವರು ಕಾಂಗ್ರೆಸ್‌ನೊಂದಿಗೆ ಅಂತರ ಕಾಯ್ದುಕೊಂಡಿದ್ದರು. ಅವರನ್ನು ಅನರ್ಹಗೊಳಿಸುವಂತೆ ವಿಧಾನಸಭೆ ಅಧ್ಯಕ್ಷರಿಗೆ ಕಾಂಗ್ರೆಸ್ ಮನವಿ ಸಲ್ಲಿಸಿತ್ತು.

'ನಿತೀಶ್ ಎನ್‌ಡಿಎ ಮುಖ್ಯಮಂತ್ರಿ ಅಭ್ಯರ್ಥಿ'

ಆಡಳಿತಾರೂಢ ಮೈತ್ರಿಕೂಟ ಮತ್ತೊಂದು ಅವಧಿಗೆ ಗೆದ್ದರೆ ಎನ್‌ಡಿಎಯ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬ ಬಗ್ಗೆ ತಿಂಗಳುಗಳಿಂದ ಇದ್ದ ಊಹಾಪೋಹಗಳಿಗೆ ತೆರೆ ಎಳೆದಿರುವ ಬಿಜೆಪಿಯ ಹಿರಿಯ ನಾಯಕ ಮತ್ತು ಕೇಂದ್ರ ಸಚಿವ ಗಿರಿರಾಜ್ ಸಿಂಗ್, 'ನಿತೀಶ್ ಕುಮಾರ್ ಅವರೇ ಎನ್‌ಡಿಎ ಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿ' ಎಂದು ತಿಳಿಸಿದರು.

ಮೈತ್ರಿಕೂಟದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ ಎಂದು ಸ್ಪಷ್ಟಪಡಿಸಿದ ಅವರು, 'ಎನ್‌ಡಿಎಯೊಳಗೆ ಯಾವುದೇ ಬಿರುಕು ಇಲ್ಲ. ಸೀಟು ಹಂಚಿಕೆ ಮಾತುಕತೆಗಳು ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿವೆ ಮತ್ತು ಶೀಘ್ರದಲ್ಲೇ ಔಪಚಾರಿಕ ಘೋಷಣೆ ಮಾಡಲಾಗುವುದು' ಎಂದು ಹೇಳಿದರು.


ಗಿರಿರಾಜ್ ಸಿಂಗ್

ಸೀಟು ಹಂಚಿಕೆ ಹಾಗೂ ಚುನಾವಣಾ ಕಾರ್ಯತಂತ್ರ ರೂಪಿಸುವ ಸಂಬಂಧ ಬಿಜೆಪಿಯ ಹಿರಿಯ ನಾಯಕರು ಎನ್‌ಡಿಎ ಮೈತ್ರಿಕೂಟದ ಸದಸ್ಯರ ಜತೆಗೆ ಬುಧವಾರ ಪ್ರಮುಖ ಸಭೆ ನಡೆಸಿದರು.

25 ಕ್ಷೇತ್ರಗಳಿಗೆ 'ಕೈ' ಅಭ್ಯರ್ಥಿಗಳು ಅಂತಿಮ

ಬಿಹಾರ ವಿಧಾನಸಭಾ ಚುನಾವಣೆಗೆ 25 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಬುಧವಾರ ಅಖೈರುಗೊಳಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಸಂಭಾವ್ಯ ಅಭ್ಯರ್ಥಿಗಳ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆಸಲಾಯಿತು. ಬಹುತೇಕ ಹಾಲಿ ಶಾಸಕರಿಗೆ ಟಿಕೆಟ್ ನೀಡಲು ಸಮ್ಮತಿ ಸೂಚಿಸಲಾಗಿದೆ.

ಖರ್ಗೆ, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ವರ್ಚುವಲ್ ಆಗಿ ಸಭೆಯಲ್ಲಿ ಭಾಗವಹಿಸಿದರು.

ಇಂಡಿಯಾ ಮೈತ್ರಿಕೂಟದಲ್ಲಿ ಸೀಟು ಹಂಚಿಕೆ ಪ್ರಕ್ರಿಯೆ ಅಂತಿಮಗೊಂಡಿಲ್ಲ. ಕಳೆದ ಬಾರಿ ಪಕ್ಷವು 70 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಈ ಸಲ 70 ಸ್ಥಾನಗಳನ್ನು ಬಿಟ್ಟುಕೊಡಲು ಆರ್‌ಜೆಡಿ ಸಮ್ಮತಿಸಿಲ್ಲ. 55-60 ಸ್ಥಾನಗಳಿಗೆ ತೃಪ್ತಿಪಡಲು ಕಾಂಗ್ರೆಸ್ ಸಿದ್ಧವಿದೆ. ಪ್ರಸ್ತುತ 40 ಕ್ಷೇತ್ರಗಳ ಬಗ್ಗೆ ಆರ್‌ಜೆಡಿ–ಕಾಂಗ್ರೆಸ್ ಸಹಮತಕ್ಕೆ ಬಂದಿವೆ. ಉಳಿದ ಕ್ಷೇತ್ರಗಳ ಬಗ್ಗೆ ಮಾತುಕತೆ ಮುಂದುವರಿದಿದೆ.

'ವಿದೇಶದ ಒತ್ತಡಕ್ಕೆ ಮಣಿದ ಕಾಂಗ್ರೆಸ್'

ಪ್ರಜಾವಾಣಿ ವಾರ್ತೆ

ರಾಯಗಢ: 'ವಿದೇಶಿ ಶಕ್ತಿಗಳ ಒತ್ತಡಕ್ಕೆ ಮಣಿದ ಕಾಂಗ್ರೆಸ್, ಮುಂಬೈ ಭಯೋತ್ಪಾದಕ ದಾಳಿಯ ವಿರುದ್ಧ ಪ್ರತೀಕಾರದ ಕ್ರಮ ಕೈಗೊಳ್ಳಲಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಇಲ್ಲಿ ಹೇಳಿದರು.

ನವಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟಿಸಿದ ಪ್ರಧಾನಿ, 2008ರಲ್ಲಿ ನಡೆದಿದ್ದ ಭಯೋತ್ಪಾದಕ ದಾಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ಸಿಗ ಪಿ.ಚಿದಂಬರಂ ಈಚೆಗೆ ನೀಡಿದ ಸಂದರ್ಶನದ ಬಳಿಕ ಮೊದಲ ಬಾರಿ ಪ್ರತಿಕ್ರಿಯಿಸಿದರು.

'ಉಗ್ರರ ದಾಳಿಯ ನಂತರ, ಆಗ ಕೇಂದ್ರ ಗೃಹ ಸಚಿವರಾಗಿದ್ದವರು ಈಚೆಗೆ ಸಂದರ್ಶನವೊಂದನ್ನು ನೀಡಿದ್ದು, 26/11ರ ಭಯೋತ್ಪಾದಕರ ಕೃತ್ಯದ ಬಳಿಕ ನಮ್ಮ ಸಶಸ್ತ್ರ ಪಡೆಗಳು ಸಹ ಪ್ರತಿ ದಾಳಿಗೆ ಸಿದ್ಧವಾಗಿದ್ದವು ಎಂದಿದ್ದಾರೆ. ಆದರೆ, ಪ್ರತೀಕಾರ ತೀರಿಸಿಕೊಳ್ಳದಂತೆ ತಡೆದವರು ಯಾರು ಎಂಬುದನ್ನು ಸ್ಪಷ್ಟಪಡಿಸಬೇಕು' ಎಂದು ಆಗ್ರಹಿಸಿದರು.

'ಆಗಿನ ಸರ್ಕಾರ ಜಗತ್ತಿಗೆ ದುರ್ಬಲ ಸಂದೇಶವನ್ನು ರವಾನಿಸಿತು. ಉಗ್ರರ ಎದುರು ಮಂಡಿಯೂರಿತು. ಕಾಂಗ್ರೆಸ್‌ನ ಈ ನಿಲುವೇ ಉಗ್ರರನ್ನು ಮತ್ತಷ್ಟು ಬಲಶಾಲಿಗಳನ್ನಾಗಿಸಿತು ಇದರ ಪರಿಣಾಮ ರಾಷ್ಟ್ರೀಯ ಭದ್ರತೆಗೆ ಧಕ್ಕೆಯುಂಟಾಯಿತು' ಎಂದರು.

> **ದೇಶ, ಜನರ ಸುರಕ್ಷತೆಯೇ ನಮ್ಮ ಆದ್ಯತೆ. ಇಂದಿನ ಭಾರತ ಶತ್ರುಗಳು ಅಡಗಿರುವ ತಾಣಕ್ಕೆ ನುಗ್ಗಿ ಸದೆಬಡಿಯಲಿದೆ. ಆಪರೇಷನ್ ಸಿಂಧೂರವೇ ಇದಕ್ಕೆ ಸಾಕ್ಷಿ**
> **ನರೇಂದ್ರ ಮೋದಿ,** ಪ್ರಧಾನಿ

ಉದ್ಘಾಟಿಸಿದ ಪ್ರಮುಖ ಯೋಜನೆಗಳು...

- ₹19,650 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ನವಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೊದಲ ಹಂತ
- ₹12,200 ಕೋಟಿ ವೆಚ್ಚದ ಮುಂಬೈ ಮೆಟ್ರೊ ಲೈನ್–3ರ ಎರಡು ಬಿ ಹಂತ
- ₹37,270 ಕೋಟಿ ವೆಚ್ಚದ ಮುಂಬೈ ಮೆಟ್ರೊ ಲೈನ್ 3 (ಆಕ್ವಾ ಲೈನ್)
- ಮುಂಬೈ ಒನ್ ಆ್ಯಪ್ ಬಿಡುಗಡೆ


ವಾಯುಪಡೆ ದಿನಾಚರಣೆ ಅಂಗವಾಗಿ ಹಿಂಡನ್ ವಾಯುನೆಲೆಯಲ್ಲಿ ಯೋಧರು ಬುಧವಾರ ಆಕರ್ಷಕ ಪಥಸಂಚಲನ ನಡೆಸಿದರು ಪಿಟಿಐ ಚಿತ್ರ

ವಾಯುಪಡೆಯ ಸಾಮರ್ಥ್ಯ ಬಿಚ್ಚಿಟ್ಟ ಆಪರೇಷನ್ ಸಿಂಧೂರ

ಹಿಂಡನ್ (ಯು.ಪಿ) (ಪಿಟಿಐ): 'ಆಕ್ರಮಣಕಾರಿ ವಾಯು ದಾಳಿಯ ಮೂಲಕ ಕೆಲವೇ ದಿನಗಳಲ್ಲಿ ಸೇನಾ ಕಾರ್ಯಾಚರಣೆಯ ಫಲಿತಾಂಶವನ್ನು ಹೇಗೆ ನಿರ್ಧರಿಸಬಹುದು ಎನ್ನುವುದನ್ನು ಭಾರತೀಯ ವಾಯುಪಡೆ ಆಪರೇಷನ್ ಸಿಂಧೂರ ಕಾರ್ಯಾಚರಣೆ ಮೂಲಕ ವಿಶ್ವದ ಎದುರು ತೆರೆದಿಟ್ಟಿದೆ' ಎಂದು ಭಾರತೀಯ ವಾಯುಪಡೆ ಮುಖ್ಯಸ್ಥ ಎ.ಪಿ.ಸಿಂಗ್ ಹೇಳಿದ್ದಾರೆ.

ಬುಧವಾರ ಹಿಂಡನ್ ವಾಯು ನೆಲೆಯಲ್ಲಿ ನಡೆದ 93ನೇ ವಾಯುಪಡೆ ದಿನಾಚರಣೆಯಲ್ಲಿ ಮಾತನಾಡಿದ ಅವರು,'ರಾಷ್ಟ್ರೀಯ ಹಿತಾಸಕ್ತಿ ವಿಚಾರ ಬಂದಾಗ ವಾಯುಪಡೆಯ ಸಾಮರ್ಥ್ಯ ಹೇಗೆ ಅನಾವರಣಗೊಂಡಿತು ಎನ್ನುವುದಕ್ಕೆ ಸಿಂಧೂರ ಕಾರ್ಯಾಚರಣೆ ಸ್ಪಷ್ಟ ನಿದರ್ಶನ. ಇದು ನಮಗೆ ವೃತ್ತಿಪರ ಹೆಮ್ಮೆ. ವಾಯುಪಡೆಯು ದಿಟ್ಟವಾದ ಮತ್ತು ನಿಖರವಾದ ದಾಳಿಯು ಶತ್ರು ಪಾಳಯದ ಯುದ್ಧ ವಿಮಾನಗಳನ್ನು ಹೊಡೆದುರುಳಿಸಿತು' ಎಂದರು. ಸಿಂಧೂರ ಕಾರ್ಯಾಚರಣೆಯಲ್ಲಿ ಅಭೂತಪೂರ್ವ ಪ್ರದರ್ಶನ ನೀಡಿದ ರಾಫೇಲ್ ಸ್ಕ್ವಾಡ್ರನ್ ಸೇರಿದಂತೆ ವಿವಿಧ ಐಎಎಫ್ ಘಟಕಗಳನ್ನು ಅಭಿನಂದಿಸಿದ ಸಿಂಗ್, ಪ್ರಶಂಸನಾ ಪತ್ರಗಳನ್ನು ವಿತರಿಸಿದರು.

ಸಂಕ್ಷಿಪ್ತ ಸುದ್ದಿ

'₹60 ಕೋಟಿ ಠೇವಣಿಯಿಡಿ'

ಮುಂಬೈ: 'ವಿದೇಶಕ್ಕೆ ಹೋಗುವುದಾದರೆ ₹60 ಕೋಟಿ ಠೇವಣಿಯಿಡಿ' ಎಂದು ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಹಾಗೂ ಅವರ ಪತಿ, ಉದ್ಯಮಿ ರಾಜ್ ಕುಂದ್ರಾ ಅವರಿಗೆ ಬಾಂಬೆ ಹೈಕೋರ್ಟ್ ಬುಧವಾರ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ್ ಮತ್ತು ನ್ಯಾ.ಗೌತಮ್ ಅಂಕದ್ ಅವರನ್ನೊಳಗೊಂಡ ವಿಭಾಗೀಯ ಪೀಠವು, ವಂಚನೆ ಪ್ರಕರಣದಲ್ಲಿ ಇಬ್ಬರೂ ಆರೋಪಿಗಳಾಗಿರುವುದರಿಂದ, ವಿದೇಶ ಪ್ರಯಾಣಕ್ಕೆ ಅನುಮತಿ ನೀಡುವುದಿಲ್ಲ ಎಂದು ಹೇಳಿದೆ.

ತಮ್ಮ ವಿರುದ್ಧ ಜಾರಿಗೊಳಿಸಿರುವ ಲುಕ್‌ಔಟ್ ನೋಟಿಸ್ ಅನ್ನು 2025ರ ಅಕ್ಟೋಬರ್‌ನಿಂದ 2026ರ ಜನವರಿವರೆಗೆ ಅಮಾನತುಗೊಳಿಸುವಂತೆ ದಂಪತಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದೆ. ₹60 ಕೋಟಿ ಠೇವಣಿ ಇಟ್ಟರೆ ನಿಮ್ಮ ಅರ್ಜಿಯನ್ನು ಪರಿಗಣಿಸಲಾಗುವುದು ಎಂದಿದೆ.

ಇಬ್ಬರು ಪ್ಯಾರಾ ಕಮಾಂಡೊಗಳು ನಾಪತ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ ಗಡೋಲ್ ಅರಣ್ಯದಲ್ಲಿ ಉಗ್ರರಿಗಾಗಿ ನಡೆಯುತ್ತಿದ್ದ ಶೋಧ ಕಾರ್ಯಾಚರಣೆ ಸಂದರ್ಭದಲ್ಲಿ ಭಾರತೀಯ ಸೇನೆಯ ಇಬ್ಬರು ಪ್ಯಾರಾ ಕಮಾಂಡೊಗಳು ನಾಪತ್ತೆಯಾಗಿದ್ದಾರೆ.

ಮಂಗಳವಾರ ರಾತ್ರಿಯಿಂದ ಇವರು ನಾಪತ್ತೆಯಾಗಿದ್ದು, ಅವರ ಪತ್ತೆಗಾಗಿ ಶೋಧಕಾರ್ಯ ಚುರುಕುಗೊಳಿಸಲಾಗಿದೆ. ಭಯೋತ್ಪಾದಕ ಚಟುವಟಿಕೆ ಕುರಿತ ಗುಪ್ತಚರ ಮಾಹಿತಿ ಆಧಾರದಲ್ಲಿ ಶೋಧ ಕಾರ್ಯಾಚರಣೆಯನ್ನು ಮಂಗಳವಾರ ಆರಂಭಿಸಲಾಗಿತ್ತು. ಈ ಸೈನಿಕರು ಕಾರ್ಯಾಚರಣೆಯ ಭಾಗವಾಗಿದ್ದರು. ಭಾರಿ ಮಳೆ ಕಾರಣ ಕಾರ್ಯಾಚರಣೆಗೆ ಅಡಚಣೆಯುಂಟಾಗಿತ್ತು. ಈ ಮಧ್ಯೆ ಇಬ್ಬರು ಕಮಾಂಡೊಗಳು ಸಂಪರ್ಕ ಕಡಿದುಕೊಂಡಿದ್ದಾರೆ.

ಜುಬಿನ್ ಸಾವು: ಅಸ್ಸಾಂ ಪೊಲೀಸ್ ಡಿಎಸ್‌ಪಿ ಬಂಧನ


ಜುಬಿನ್ ಗರ್ಗ್

ಗುವಾಹಟಿ (ಪಿಟಿಐ): ಗಾಯಕ ಜುಬಿನ್ ಗರ್ಗ್ ಅವರ ಸಾವಿಗೆ ಸಂಬಂಧಿಸಿದಂತೆ ಜುಬಿನ್ ಅವರ ಸೋದರ ಸಂಬಂಧಿ, ಅಸ್ಸಾಂ ಪೊಲೀಸ್ ಡಿಎಸ್‌ಪಿಯೂ ಆಗಿರುವ ಸಂದೀಪನ್ ಗರ್ಗ್ ಅವರನ್ನು ಬಂಧಿಸಿರುವುದಾಗಿ ಪೊಲೀಸರು ಹೇಳಿದ್ದಾರೆ.

'ಜುಬಿನ್ ಗರ್ಗ್ ಮೃತಪಟ್ಟ ಸಂದರ್ಭದಲ್ಲಿ ಸಂದೀಪನ್ ಕೂಡ ಅವರೊಂದಿಗೆ ಇದ್ದರು. ಸಿಐಡಿ ಅಧಿಕಾರಿಗಳ ವಿಶೇಷ ತನಿಖಾ ತಂಡವು ಸಂದೀಪನ್ ಅವರನ್ನು ಈ ಹಿಂದೆಯೂ ವಿಚಾರಣೆ ನಡೆಸಿತ್ತು. ಅವರ ಹೇಳಿಕೆಗಳಲ್ಲಿ ಸ್ಥಿರತೆ ಇಲ್ಲದಿರುವುದನ್ನು ಅಧಿಕಾರಿಗಳು ಗಮನಿಸಿದ್ದರು. ಇದೀಗ ಸಂದೀಪನ್ ವಿರುದ್ಧ ಬಿಎನ್‌ಎಸ್‌ನ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ದೂರು ದಾಖಲಾಗಿದೆ' ಎಂದು ಮೂಲಗಳು ತಿಳಿಸಿವೆ.

ನಟ ದುಲ್ಕರ್, ಪೃಥ್ವಿರಾಜ್ ಗೆ ಸೇರಿದ ಸ್ಥಳಗಳಲ್ಲಿ ಇ.ಡಿ ಶೋಧ

ಕೊಚ್ಚಿ (ಪಿಟಿಐ): ನಟರಾದ ದುಲ್ಕರ್ ಸಲ್ಮಾನ್, ಪೃಥ್ವಿರಾಜ್ ಸುಕುಮಾರನ್ ಹಾಗೂ ಅಮಿತ್ ಚಕ್ಕಲಕಲ್ ಅವರಿಗೆ ಸೇರಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ಶೋಧ ನಡೆಸಿದರು.

ಭೂತಾನ್‌ನಿಂದ ಭಾರತಕ್ಕೆ ಐಷಾರಾಮಿ ಕಾರುಗಳನ್ನು ಕಳ್ಳಸಾಗಣೆ ಮಾಡಿದ ಆರೋಪಕ್ಕೆ ಸಂಬಂಧಿಸಿದ ಸುಂಕ ಪ್ರಕರಣದ ತನಿಖೆಯ ಭಾಗವಾಗಿ ಚಿತ್ರನಟರು ಸೇರಿದಂತೆ ಇತರ ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಇ.ಡಿ ದಾಳಿ ನಡೆಸಿದೆ.

ಕೇರಳದ ಎರ್ನಾಕುಲಂ, ತ್ರಿಶ್ಶೂರ್, ಕೋಯಿಕ್ಕೋಡ್, ಮಲಪ್ಪುರಂ, ಕೊಟ್ಟಾಯಂ ಮತ್ತು ತಮಿಳುನಾಡಿನ ಕೊಯಮತ್ತೂರಿನಲ್ಲಿರುವ ಕೆಲವು ವಾಹನ ಮಾಲೀಕರು, ವ್ಯಾಪಾರಿಗಳು, ಗ್ಯಾರೇಜ್‌ಗಳಲ್ಲೂ ಸಹ ತನಿಖಾ ಸಂಸ್ಥೆಯ ಅಧಿಕಾರಿಗಳು ಶೋಧ ನಡೆಸಿದರು.

ಪತಿ ಮೇಲೆ ಪತ್ನಿಯಿಂದ ಕುದಿಯುವ ಎಣ್ಣೆ

ನವದೆಹಲಿ(ಪಿಟಿಐ): ಗಾಢನಿದ್ರೆಯಲ್ಲಿದ್ದ ಪತಿಯ ಮೇಲೆ ಕುದಿಯುತ್ತಿದ್ದ ಎಣ್ಣೆ ಸುರಿದ ಪತ್ನಿ, ಸುಟ್ಟಗಾಯಗಳ ಮೇಲೆ ಖಾರದ ಪುಡಿ ಹಾಕಿದ ವಿಲಕ್ಷಣ ಘಟನೆ ದೆಹಲಿಯ ಮದನಗಿರ ಪ್ರದೇಶದಲ್ಲಿ ನಡೆದಿದೆ.

ಸುಡುವ ಎಣ್ಣೆ ಸುರಿದಿದ್ದರಿಂದಾಗಿ ಗಾಯಗೊಂಡಿರುವ 28 ವರ್ಷದ ದಿನೇಶ್ ಅವರನ್ನು ಸಫ್ದರಜಂಗ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ದಾಖಲಿಸಲಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ. ದಿನೇಶ್ ಅವರ ಹೇಳಿಕೆ ಆಧರಿಸಿ ಅಂಬೇಡ್ಕರ್ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಘಟನೆ ವಿವರ: ದಿನೇಶ್, ಫಾರ್ಮಾಸ್ಯುಟಿಕಲ್ ಕಂಪನಿಯೊಂದರ ಉದ್ಯೋಗಿ. ಅಕ್ಟೋಬರ್ 2ರಂದು ಕೆಲಸ ಮುಗಿಸಿ ಮನೆಗೆ ಮರಳಿದ್ದ ಅವರು, ಊಟ ಮುಗಿಸಿ ಮಲಗಿದ್ದ ವೇಳೆ ಈ ಘಟನೆ ನಡೆದಿದೆ.

'ಪತ್ನಿ ಹಾಗೂ ಮಗಳು ಕೂಡ ಹತ್ತಿರದಲ್ಲಿಯೇ ಮಲಗಿದ್ದರು. ನಸುಕಿನ 3.15ರ ಸುಮಾರಿಗೆ ಹಠಾತ್ತನೇ ಮೈಯಲ್ಲಿ ತೀವ್ರ ಸುಟ್ಟಗಾಯಗಳಿಂದಾಗಿ ನೋವು ಕಾಣಿಸಿಕೊಂಡಿತು. ಕಣ್ತೆರೆದು ನೋಡಿದಾಗ, ಎದುರಿನಲ್ಲಿ ನಿಂತಿದ್ದ ಪತ್ನಿ ನನ್ನ ದೇಹ ಹಾಗೂ ಮುಖದ ಮೇಲೆ ಕುದಿಯುತ್ತಿದ್ದ ಎಣ್ಣೆ ಸುರಿಯುತ್ತಿದ್ದಳು' ಎಂದು ದಿನೇಶ್ ಅವರು ದೂರಿನಲ್ಲಿ ಆರೋಪಿಸಿದ್ದಾರೆ.

'ನೋವು ಸಹಿಸಲಾಗದೆ ನಾನು ಎದ್ದು, ಸಹಾಯಕ್ಕಾಗಿ ಕೂಗಲು ಯತ್ನಿಸಿದೆ. ಅದಕ್ಕೆ ಅವಕಾಶ ಕೊಡದ ಪತ್ನಿ, ಮೈಮೇಲಿನ ಸುಟ್ಟಗಾಯಗಳ ಮೇಲೆ ಖಾರದ ಪುಡಿಯನ್ನು ಸಿಂಪಡಿಸಿದಳು. ಇದಕ್ಕೆ ನಾನು ಪ್ರತಿರೋಧ ಒಡ್ಡಲು ಮುಂದಾದೆ. ಆಗ, ಚೀರಾಟ ನಡೆಸಿದರೆ ನಿನ್ನ ಮೇಲೆ ಮತ್ತಷ್ಟು ಸುಡುವ ಎಣ್ಣೆ ಸುರಿಯುತ್ತೇನೆ ಎಂಬುದಾಗಿ ಪತ್ನಿ ಹೇಳಿದಳು' ಎಂದು ದಿನೇಶ್ ಆರೋಪಿಸಿದ್ದಾರೆ.

ನೋವು ಸಹಿಸಲಾಗದೇ, ದಿನೇಶ್ ಅವರು ಜೋರಾಗಿ ಕೂಗಿದ್ದಾರೆ. ಚೀರಾಟ ಕೇಳಿದ ನೆರೆಹೊರೆಯವರು ಹಾಗೂ ಮನೆ ಮಾಲೀಕರ ಕುಟುಂಬದವರು ದಿನೇಶ್ ಮನೆಯತ್ತ ದೌಡಾಯಿಸಿ, ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದಾರೆ.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಮಾನವಕೋಟಿಯನ್ನು ಶಿಕ್ಷಿಸಲು ದೇವರು ಕೆಲವು ಬಾರಿ 'ಕ್ಷಾಮ'ವನ್ನು ಕಳುಹಿದರೆ, ಹಲವು ಬಾರಿ 'ನಾಯಕ'ನನ್ನು ಕಳುಹುತ್ತಾನೆ.

ವಾಲ್ಟರ್ ಸಾವೇಜ್ ಲ್ಯಾಂಡರ್

ಸಂಪಾದಕೀಯ

ಸಿಜೆಐ ಅವಮಾನಿಸುವ ಪ್ರಯತ್ನ ದ್ವೇಷ–ಅಸಹನೆಯ ಕೊಳಕು ಕೃತ್ಯ

ದೇಶದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಭೂಷಣ್ ರಾಮಕೃಷ್ಣ ಗವಾಯಿ ಅವರತ್ತ ವಕೀಲರೊಬ್ಬರು ನ್ಯಾಯಾಲಯದ ಕಲಾಪ ನಡೆಯುತ್ತಿದ್ದ ಸಂದರ್ಭದಲ್ಲೇ ಶೂ ಎಸೆಯಲು ಯತ್ನಿಸಿದ ಪ್ರಸಂಗವು ಆಘಾತಕಾರಿ. ಅಷ್ಟೇ ಅಲ್ಲ, ವ್ಯಕ್ತಿ ನಡತೆ ಹಾಗೂ ವೈಯಕ್ತಿಕ ನಡತೆಯು ಅದೆಷ್ಟು ಕೆಳಮಟ್ಟಕ್ಕೆ ಕುಸಿದಿದೆ ಎಂಬುದನ್ನು ಇದು ಹೇಳುತ್ತಿದೆ. ದಾಳಿ ನಡೆಸಿದ ವ್ಯಕ್ತಿಯು ಅಪ್ಪಟವಾದ ಅಲ್ಲ, ಅತ್ಯಪ್ತ ವ್ಯಕ್ತಿ ಅಲ್ಲ, ಮಾನಸಿಕ ಅಸ್ವಸ್ಥನೆಯೂ ಕಾಣುತ್ತಿಲ್ಲ. ಜನರ ಗಮನ ಸೆಳೆಯುವ ಉದ್ದೇಶದಿಂದ ದಾಳಿ ನಡೆಸಿರುವ ಅನ್ನಿಸುತ್ತಿಲ್ಲ. ಆ ವ್ಯಕ್ತಿ 71 ವರ್ಷ ವಯಸ್ಸಿನ ವಕೀಲ, ಭಾರತೀಯ ವಕೀಲರ ಪರಿಷತ್ತಿನ ಸದಸ್ಯರಾಗಿದ್ದವರು. ಸನಾತನ ಧರ್ಮಕ್ಕೆ ಆಗುವ ತೊಂದರೆಯನ್ನು ಭಾರತ ಸಹಿಸುವುದಿಲ್ಲ ಎಂದು ಆತ ಕೂಗುತ್ತಿದ್ದುದು ಕೇಳಿಸಿದೆ ಎಂದು ವರದಿಯಾಗಿದೆ. ಹೀಗಾಗಿ ಈತ ಸೈದ್ಧಾಂತಿಕವಾಗಿ ಪ್ರೇರಣೆ ಪಡೆದಿದ್ದ ವ್ಯಕ್ತಿಯಾಗಿದ್ದಿರಬೇಕು. ಮಧ್ಯಪ್ರದೇಶದ ಖಜುರಾಹೊ ದೇವಸ್ಥಾನ ಸಂಕೀರ್ಣದಲ್ಲಿ ವಿಷ್ಣುವಿನ ಪ್ರತಿಮೆಯನ್ನು ಪುನಃ ಸ್ಥಾಪಿಸಲು ಆದೇಶ ನೀಡಬೇಕು ಎಂಬ ಕೋರಿಕೆ ಇದ್ದ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಸಿಜೆಐ ಅವರು ಕೆಲವು ಮಾತುಗಳನ್ನು ಆಡಿದ್ದರು. ದಾಳಿ ನಡೆಸಿದ ವ್ಯಕ್ತಿಯು 'ಅವಮಾನ'ದ ಬಗ್ಗೆ ಉಲ್ಲೇಖಿಸುವಾಗ, ಸಿಜೆಐ ಅವರ ಆ ಮಾತುಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಿರಬಹುದು. ಆ ಅರ್ಜಿಯನ್ನು ತಿರಸ್ಕರಿಸಿದ್ದ ಸಿಜೆಐ, 'ಏನಾದರೂ ಮಾಡುವಂತೆ ದೇವರನ್ನೇ ಕೇಳಿಕೊಳ್ಳಿ' ಎಂದು ಹೇಳಿದ್ದರು.



ಸಿಜೆಐ ಅವರನ್ನು ಅವಮಾನಿಸಲು ನಡೆದ ಪ್ರಯತ್ನ ಸಮಾಜದಲ್ಲಿ ವ್ಯಾಪಕಗೊಳ್ಳುತ್ತಿರುವ ಅಸಹನೆಯ ಪ್ರತಿಬಿಂಬ. ಇದು, ಇಡೀ ದೇಶ ಖಂಡಿಸಬೇಕಾದ ಕೃತ್ಯ.

ಸಿಜೆಐ ಅವರ ಆ ಮಾತನ್ನು ಸಮಾಜದ ಒಂದು ವರ್ಗವು ದೇವರಿಗೆ ಮಾಡಿದ ಅವಮಾನ ಎಂಬಂತೆ ಭಾವಿಸಿತ್ತು. ಹೀಗಾಗಿ, ಈ ವ್ಯಕ್ತಿಯು ಸಿಜೆಐ ಅವರನ್ನು ಸಾರ್ವಜನಿಕವಾಗಿ ಅವಮಾನಿಸಲು ಅಥವಾ ಅವರನ್ನು ಶಿಕ್ಷಿಸಲು ತೀರ್ಮಾನಿಸಿರಬೇಕು. ಸಿಜೆಐ ಅವರ ಮಾತುಗಳ ವಿಚಾರವಾಗಿ ಸಾರ್ವಜನಿಕವಾಗಿ ಕೆಲವು ಪ್ರತಿಭಟನೆಗಳೂ ನಡೆದಿದ್ದವು. ಆ ಪ್ರಕರಣಕ್ಕೆ, ಆ ಅರ್ಜಿಗೆ ಕಾನೂನಿನ ಯಾವುದೇ ಆಯಾಮ ಇಲ್ಲ, ಹಾಗಾಗಿ ಅಲ್ಲಿ ನ್ಯಾಯಾಲಯದ ಮಧ್ಯಪ್ರವೇಶದ ಅಗತ್ಯ ಇಲ್ಲ ಎನ್ನುವುದು ಸಿಜೆಐ ಅವರ ಆ ಮಾತುಗಳ ಅರ್ಥವಾಗಿತ್ತು. ಅವರ ಮಾತುಗಳಿಂದ ದೇವರಿಗೆ ಅವಮಾನ ಹೇಗಾಗುತ್ತದೆ ಅಥವಾ ಅಲ್ಲಿ ಸನಾತನ ಧರ್ಮದ ಪ್ರಸ್ತಾಪ ಎಲ್ಲಿ ಆಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಕಾನೂನಿನ ಅಡಿಯಲ್ಲಿ ಯಾವುದೇ ಪರಿಹಾರ ಇಲ್ಲದಿರುವಾಗ ದೇವರನ್ನೇ ಪ್ರಾರ್ಥಿಸಿಕೊಳ್ಳಿ ಎಂದು ಯಾವುದೇ ವ್ಯಕ್ತಿಗೆ ಗಂಭೀರವಾಗಿ ಅಥವಾ ಲಘು ಧಾಟಿಯಲ್ಲಿ ಸಲಹೆ ನೀಡುವುದು ತಪ್ಪೇನೂ ಅಲ್ಲ. ದೇಶದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸ್ಥಾನದಲ್ಲಿರುವ ವ್ಯಕ್ತಿಗೆ, ಈ ದೇಶದ ಪ್ರಜೆಯಾಗಿರುವವರಿಗೆ ಅಂತಹ ಹೇಳಿಕೆ ನೀಡುವ ಸ್ವಾತಂತ್ರ್ಯ ಇದೆ. ಆ ಮಾತಿಗೆ ಸಿಜೆಐ ಅವರ ಮೇಲೆ ದೋಷ ಹೊರಿಸಲು ಅವಕಾಶ ಇಲ್ಲ. ತಾವು ಎಲ್ಲ ಧರ್ಮಗಳನ್ನೂ ಗೌರವಿಸುವುದಾಗಿ ಸಿಜೆಐ ಸ್ಪಷ್ಟವಾಗಿ ಹೇಳಿದ್ದಾರೆ. ಸಿಜೆಐ ಅವರ ಮಾತುಗಳನ್ನು ತಪ್ಪಾಗಿ ವ್ಯಾಖ್ಯಾನಿಸಿ, ಅವರ ಮಾತುಗಳಲ್ಲಿ ಇಲ್ಲದಿದ್ದ ಉದ್ದೇಶವು ಇದೆ ಎಂದು ಆರೋಪಿಸಿದ್ದು ವಿವಾದಕ್ಕೆ, ಅವರ ಮೇಲೆ ಶೂ ಎಸೆಯಲು ಯತ್ನಿಸುವಂತಹ ಕೊಳಕು ಕೃತ್ಯಕ್ಕೆ ದಾರಿ ಮಾಡಿಕೊಟ್ಟಿದೆ. ಸಮಾಜದಲ್ಲಿ ವ್ಯಾಪಿಸುತ್ತಿರುವ ಅಸಹನೆಯ ದ್ಯೋತಕ ಇದು.

ನ್ಯಾಯಾಂಗದ ತೀರ್ಮಾನವೊಂದು ಹಿಂದೂ ಭಾವನೆಗಳಿಗೆ ವಿರುದ್ಧವಾಗಿದೆ ಎಂದು ಕೆಲವರಿಗೆ ಅನ್ನಿಸಿದರೆ, ಅಂತಹ ತೀರ್ಮಾನವು ಕೂಡ ಈ ಬಗೆಯ ಅಸಹನೆಯ ಪರಿಣಾಮವನ್ನು ಎದುರಿಸಬೇಕಾಗುತ್ತಿದೆ. ಈ ಅಸಹನೆಯು ಕಾನೂನಿನ ಪಾರಮ್ಯವನ್ನು ಪ್ರಶ್ನಿಸುತ್ತಿದೆ, ದೇಶದ ಅತ್ಯುನ್ನತ ವ್ಯವಸ್ಥೆಯೊಂದನ್ನು ಹಗುರವಾಗಿ ಕಾಣುತ್ತಿದೆ. ಈ ಅಸಹನೆಯು ನ್ಯಾಯಾಂಗದ ತೀರ್ಮಾನಗಳನ್ನು ತಿರಸ್ಕರಿಸುವ ರೂಪದಲ್ಲಿ, ಗುಂಪುಹಲ್ಲೆ ರೂಪದಲ್ಲಿ, 'ಬುಲ್ಡೋಜರ್ ನ್ಯಾಯ'ದ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ. ಶೂ ಎಸೆದಿರುವುದು ದ್ವೇಷವನ್ನು ಹೊದ್ದುಕೊಂಡಿರುವ ಕೃತ್ಯ. ನ್ಯಾಯಮೂರ್ತಿಗಳನ್ನು ಇತರ ಬಗೆಗಳಲ್ಲೂ ಟೀಕಿಸಿದ, ಅವರ ಮೇಲೆ ದಾಳಿ ನಡೆಸಿದ ನಿದರ್ಶನಗಳು ಇವೆ. ಸನಾತನ ಧರ್ಮವನ್ನು ಟೀಕಿಸಬಾರದು ಎಂಬ ಭಾವನೆ ಹಲವರಲ್ಲಿದೆ. ಆದರೆ, ಸಂವಿಧಾನವನ್ನು ಅಡಿಪಾಯವನ್ನಾಗಿ ಇರಿಸಿಕೊಂಡು ದೇಶವನ್ನು ಕಟ್ಟಲಾಗಿದೆಯೇ ವಿನಾ ಸನಾತನ ಧರ್ಮವನ್ನು ಅಲ್ಲ ಎಂಬುದನ್ನು ಮರೆಯಬಾರದು. ದಾಳಿ ನಡೆದ ನಂತರವೂ ಶಾಂತಚಿತ್ತವನ್ನು ಕಾಪಾಡಿಕೊಂಡ ನ್ಯಾಯಮೂರ್ತಿ ಗವಾಯಿ ಅವರು ಮೆಚ್ಚುಗೆಗೆ ಅರ್ಹರು. ದಾಳಿಯನ್ನು ಖಂಡಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಈ ಕೃತ್ಯವನ್ನು ಇಡೀ ದೇಶ ಖಂಡಿಸಬೇಕು.

ಸಂಘಟನೆಯ ಅಗತ್ಯ



ಸಂವಿಧಾನದ ವಿರುದ್ಧ ಹೋರಾಟ ತೀವ್ರಗೊಳ್ಳುತ್ತಿದೆ. ನಾವೆಲ್ಲ ನಮ್ಮ ಸಣ್ಣ ಸಣ್ಣ ಅಭಿಪ್ರಾಯಭೇದಗಳನ್ನು ಮರೆತು ಸಂಘಟಿತರಾಗಬೇಕಾಗಿದೆ. ಸಂವಿಧಾನ ದುರ್ಬಲವಾದರೆ ನಾವೆಲ್ಲರೂ ನಾಶವಾಗುವುದು ಖಂಡಿತ.

ಪುರುಷೋತ್ತಮ ಬಿಳಿಮಲೆ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಜನಸಾಮಾನ್ಯರು ಜಿಎಸ್‌ಟಿ ಉಳಿತಾಯದ ಲಾಭಪಡೆಯುತ್ತಿದ್ದಾರೆ. ಆದರೆ, ರಾಜ್ಯದಲ್ಲಿರುವ ಜನವಿರೋಧಿ ಸರ್ಕಾರ ಕಳೆದ ಎರಡು ವರ್ಷಗಳಿಂದ ಸತತವಾಗಿ ಏರಿಸಿರುವ ಹಾಲು, ಪೆಟ್ರೋಲ್, ಡಿಸೇಲ್, ನೀರು, ವಿದ್ಯುತ್ ದರವನ್ನು ಇಳಿಸುವುದು ಯಾವಾಗ? 'ಗ್ಯಾರಂಟಿ ಸಿದ್ದರಾಮಯ್ಯ ಟ್ಯಾಕ್ಸ್'ನಿಂದ ಕನ್ನಡಿಗರಿಗೆ ಮುಕ್ತಿ ಯಾವಾಗ?

ಆರ್. ಅಶೋಕ, ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 9-10-2000

- **ದಲಿತ ಮಹಿಳೆ ಹತ್ಯೆ**

ಜೋಧ್‌ಪುರ, ಅ. 8– ಮಗಳನ್ನು ಚುಡಾಯಿಸಿದ್ದನ್ನು ಪ್ರತಿಭಟಿಸಿದ ದಲಿತ ಮಹಿಳೆಯನ್ನು ಹತ್ಯೆ ಮಾಡಿದ ಘಟನೆ ಭಾಗಮಾಲಪುರ ಗ್ರಾಮದಲ್ಲಿ ನಿನ್ನೆ ರಾತ್ರಿ ನಡೆದಿದೆ. ದುಷ್ಕರ್ಮಿಗಳು ಆಕೆಯ ಮನೆಗೂ ಬೆಂಕಿ ಹಚ್ಚಿದರು. 6 ಆರೋಪಿಗಳನ್ನು ಬಂಧಿಸಿದ್ದು, ಉಳಿದವರ ಪತ್ತೆ ಕಾರ್ಯ ನಡೆದಿದೆ ಎಂದು ಪೊಲೀಸರು ತಿಳಿಸಿದರು.

- **ಕಾಶ್ಮೀರ ಉಗ್ರರ ಜತೆ ಮಾತುಕತೆ ಪುನರಾರಂಭ ಸಾಧ್ಯತೆ**

ಶ್ರೀನಗರ, ಅ. 8– ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಶೀಘ್ರವೇ ಮಾತುಕತೆಗಳು ಪುನರಾರಂಭಗೊಳ್ಳುವ ಸಾಧ್ಯತೆ ಇದೆ ಎಂಬ ಇಂಗಿತವನ್ನು ಹಿರಿಯ ಹುರಿಯತ್ ನಾಯಕ ಅಬ್ದುಲ್ ಗನಿ ಲೋನ್ ಅವರು ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರ ಮತ್ತು ಹಿಜಬುಲ್ ಮುಜಾಹಿದ್ದೀನ್ ನಡುವಿನ ಮಾತುಕತೆ ಸ್ಥಗಿತ ಪ್ರಸ್ತಾಪಿಸಿದ ಅವರು, ಬಲ ಪಂಥೀಯ ಬಿಜೆಪಿ ಉಗ್ರವಾದಿ ಸಂಘಟನೆಯೊಂದಿಗೆ ಮಾತುಕತೆಗೆ ಸಿದ್ಧವಾಗಿದ್ದೇ ಅತ್ಯಂತ ಪ್ರಮುಖ ಬೆಳವಣಿಗೆ. ಇದರಿಂದ ಶೀಘ್ರವೇ ಮಾತುಕತೆ ಶುರುವಾಗುತ್ತವೆ ಎಂದರು.

75 ವರ್ಷಗಳ ಹಿಂದೆ

ಸೋಮವಾರ, 9-10-1950

- **ಜೋಗೇಂದ್ರನಾಥ ಮಂಡಲ್ ರಾಜೀನಾಮೆ**

ಕಲಕತ್ತೆ, ಅ. 8– ಪಾಕಿಸ್ತಾನದ ನ್ಯಾಯಾಂಗ ಮತ್ತು ಕಾರ್ಮಿಕ ಶಾಖಾ ಸಚಿವ ಶ್ರೀ ಜೋಗೇಂದ್ರನಾಥ ಮಂಡಲ್ ಅವರು ಇಂದು ತಮ್ಮ ಪದವಿಗೆ ರಾಜೀನಾಮೆ ಇತ್ತರು.

ಪಾಕಿಸ್ತಾನದಲ್ಲಿರುವ ಅಲ್ಪಸಂಖ್ಯಾತರ ಸ್ಥಿತಿಗತಿಗಳ ಬಗ್ಗೆ ವಿಷಾದ ವ್ಯಕ್ತಪಡಿಸಿ ಇವರು 8000 ಪದಗಳ ಪತ್ರವೊಂದನ್ನು ಪಾಕಿಸ್ತಾನ್ ಪ್ರಧಾನಿಗಳಿಗೆ ಬರೆದು ರಾಜೀನಾಮೆಗೆ ಕಾರಣಗಳನ್ನು ಸೂಚಿಸಿದ್ದಾರೆ.

- **ಕಾಶ್ಮೀರದಲ್ಲಿ ಜನಮತಗಣನೆ: ಮುಸ್ಲಿಂ ಲೀಗ್ ನಿರ್ಣಯ**

ಕರಾಚಿ, ಅ. 8– ಕಾಶ್ಮೀರದಲ್ಲಿ ಆದಷ್ಟು ಬೇಗ ಜನಮತಗಣನೆ ಏರ್ಪಡಿಸುವಂತೆ ವಿಶ್ವಸಂಸ್ಥೆಯ ಭದ್ರತಾ ಸಮಿತಿಯನ್ನು ಒತ್ತಾಯಿಸುವ, ಮುಸ್ಲಿಂ ಕಾರ್ಯ ಸಮಿತಿಯ ನಿನ್ನೆ ರಾತ್ರಿಯ ನಿರ್ಣಯವನ್ನು ಜನರಲ್ ಕೌನ್ಸಿಲ್ ಇಂದು ಅಂಗೀಕರಿಸಿತು.

ಭದ್ರತಾ ಸಮಿತಿಗೆ ಮಧ್ಯಸ್ಥಿಕೆಗಾರ ಸರ್ ಓವೆನ್ ಡಿಕನ್ಸ್ ಒಪ್ಪಿಸಿರುವ ವರದಿಯನ್ನು ನಿರ್ಣಯದಲ್ಲಿ ಖಂಡಿಸಲಾಗಿದೆ.

ಮೂಕಲೋಕದ 'ಅಮ್ಮ'ನಿಗೆ ವಿದಾಯ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

> 'ಭೂಮಿತಾಯಿ'ಯ ಜೀವಂತ ರೂಪ ಎಂದೇ ಪ್ರಸಿದ್ಧಿ ಪಡೆದ ವನ್ಯವಿಜ್ಞಾನಿ ಜೇನ್ ಗುಡಾಲ್ ಇನ್ನಿಲ್ಲ. ಚಿಂಪಾಂಜಿಗಳ ಒಳಜಗತ್ತನ್ನು ಅರಿಯಲೆಂದು ಹೊರಟವರು ಕ್ರಮೇಣ ಇಡೀ ಜೀವಮಂಡಲದ ಉಳಿವಿಗೆ ತಮ್ಮ ಜೀವನ ಮೀಸಲಿಟ್ಟರು. ಪೃಥ್ವಿಯನ್ನು ಸರ್ವನಾಶದತ್ತ ತಳ್ಳುತ್ತಿರುವ ರಾಜಕೀಯ ಮತ್ತು ಔದ್ಯಮಿಕ ಶಕ್ತಿಗಳ ಬಗ್ಗೆ ಅವರು 'ಮರಣೋತ್ತರ ಎಚ್ಚರಿಕೆ' ನೀಡಿ ವಿರಮಿಸಿದ್ದಾರೆ.

ತೊಂಬತ್ತೊಂದರ ಈ ಅಜ್ಜಿ ಅಕ್ಟೋಬರ್ 1ರಂದು ನಿಧನರಾದಾಗ ಲೋಕವಿಖ್ಯಾತಿ ಪಡೆದ ವಿವಿಧ ಕ್ಷೇತ್ರಗಳ ಗಣ್ಯರಿಂದ ನುಡಿನಮನದ ಧಾರೆಯೇ ಹರಿದು ಬಂತು. ಅವರಲ್ಲಿ ವಿಜ್ಞಾನಿಗಳಿದ್ದರು. ಲಿಯೊನಾರ್ಡೊ ಡಿಕಾಪ್ರಿಯೊನಂಥ ಸಿನೆಮಾ ನಿರ್ದೇಶಕರಿದ್ದರು. ಬರಾಕ್ ಒಬಾಮಾ, ಜೋ ಬೈಡನ್‌ರಂಥವರಿದ್ದರು. ಸಂಗೀತಕಾರ ಡೇವಿಡ್ ಮ್ಯಾಥ್ಯೂಸ್, ಜೀವದೂತ ಡೇವಿಡ್ ಅಟ್ಟೆನ್‌ಬರೋ ಇದ್ದರು. ಜೇನ್ ಗುಡಾಲ್ ನಿಧನಕ್ಕೆ 150ಕ್ಕೂ ಹೆಚ್ಚು ದೇಶಗಳಲ್ಲಿ ಲಕ್ಷಗಟ್ಟಲೆ ಶೋಕಸಭೆಗಳು ನಡೆದವು. ವರ್ಷದ 300ಕ್ಕೂ ಹೆಚ್ಚು ದಿನಗಳನ್ನು ಉಪನ್ಯಾಸ ಪ್ರವಾಸಗಳಿಗೇ ಮೀಸಲಿಡುತ್ತಿದ್ದ ಹಿರಿಯ ಜೀವ ತನ್ನ ಇನ್ನೊಂದು ಉಪನ್ಯಾಸಕ್ಕೆಂದು ಕ್ಯಾಲಿಫೋರ್ನಿಯಾಕ್ಕೆ ತೆರಳಿದ್ದಾಗ ನಿದ್ದೆಯಲ್ಲೇ ಕಣ್ಣು ಮುಚ್ಚಿತು.

ಜೇನ್ ಮಗುವಾಗಿದ್ದಾಗ ಎರೆಹುಳುಗಳನ್ನು ಕೆದಕಿ ತಂದು ಹಾಸಿಗೆಯ ಮೇಲೆ ಮಣ್ಣನ್ನು ಹಾಸಿ ಪರೀಕ್ಷೆ ಮಾಡುತ್ತಿದ್ದಳು. .ಕೋಳಿಗೂಡಿನಲ್ಲಿ ಗಂಟೆಗಟ್ಟಲೆ ಅವಿತು ಕೂತು, ಮೊಟ್ಟೆ ಹೊರಬರುವ ರಂಧ್ರವನ್ನು ಹುಡುಕುತ್ತಿದ್ದಳು. ಟಾರ್ಜನ್ ಚಿತ್ರಮಾಲಿಕೆಯನ್ನು ನೋಡಿ ಆಫ್ರಿಕಾಕ್ಕೆ ತಾನು ಹೋಗಲೇಬೇಕೆಂದು ಹಟ ಹಿಡಿದಿದ್ದಳು. 'ದೊಡ್ಡವಳಾಗಿ ನೀನೇ ದುಡಿದು ಹಣ ಗಳಿಸಿ ಹೋಗಬೇಕಷ್ಟೆ' ಎಂದು ಅಮ್ಮ ಹೇಳಿದ್ದು ತಲೆಯಲ್ಲಿ ಕೂತಿತ್ತು. ಹದಿನೇಳರ ಹುಡುಗಿ ತನ್ನ ಓದನ್ನು ಅಷ್ಟಕ್ಕೇ ನಿಲ್ಲಿಸಿ, ಚಿಕ್ಕಪುಟ್ಟ ನೌಕರಿ ಮಾಡಿ ಹಣ ಕೂಡಿಸಿ, 23ರ ಹರಯದಲ್ಲಿ ಕತ್ತಲ ಖಂಡ ಆಫ್ರಿಕಾಕ್ಕೆ ತೆರಳಿ ಚಿಂಪಾಂಜಿಗಳ ಅಧ್ಯಯನ ಕೈಗೊಂಡರು. ದುರ್ಬೀನು ಹಿಡಿದು ವಾರ, ತಿಂಗಳುಗಟ್ಟಲೆ ಒಂದೊಂದು ಚಿಂಪಾಜಿಯ, ಒಂದೊಂದು ಕುಟುಂಬದ, ಎರಡು–ಮೂರು ತಲೆಮಾರುಗಳ ಅಧ್ಯಯನ ನಡೆಸುತ್ತ ಒಂದೊಂದಕ್ಕೂ ಹೆಸರಿಟ್ಟು ಟಿಪ್ಪಣಿ ಬರೆದುಕೊಳ್ಳುತ್ತ ಹೋದರು.

60ರ ದಶಕದಲ್ಲಿ ಹೆಣ್ಣುಮಕ್ಕಳು, ಅದೂ ಒಬ್ಬಂಟಿಯಾಗಿ ವನ್ಯ ಸಂಶೋಧನೆಗೆ ಇಳಿದಿದ್ದೇ ಇರಲಿಲ್ಲ. ಪ್ರಾಣಿಗಳ ಗೆಳೆತನ ಮಾಡಬಾರದು, ಹೆಸರಿಡಬಾರದು, ಸಂಖ್ಯೆಯ ಗುರುತಿನಿಂದಲೇ ವರ್ಣಿಸಬೇಕು ಎಂದೆಲ್ಲ ವೈಜ್ಞಾನಿಕ ಸಲಹೆಗಳನ್ನು ಮೂಲೆಗೊತ್ತಿ ಅಧ್ಯಯನ ನಡೆಸಿದರು. ಮನುಷ್ಯರಲ್ಲಿ ಇರುವ ಹಾಗೆ ಈ ವಾನರಗಳಲ್ಲೂ ಹರ್ಷ, ಈರ್ಷ್ಯೆ, ಪೈಪೋಟಿ, ಶಾಭಾಸ್‌ಗಿರಿ, ಚಮಚಾಗಿರಿ, ವಂಚನೆ, ದ್ವೇಷ, ಚಿತಾವಣೆ, ಪರೋಪಕಾರ ಬುದ್ಧಿ ಎಲ್ಲವೂ ಇವೆಯೆಂದು ವರದಿ ಮಾಡಿದರು. ಅವು ಮಾಂಸ ತಿನ್ನುತ್ತವೆ, ಎಂಜಲು ಹಚ್ಚಿದ ಕಡ್ಡಿಯನ್ನು ಹುತ್ತದೊಳಕ್ಕೆ ಆಯುಧದಂತೆ ತೂರಿಸಿ ಗೆದ್ದಲುಗಳನ್ನು ಮೇಲೆತ್ತಿ ಭಕ್ಷಿಸುತ್ತವೆ, ಎಂಬೆಲ್ಲ ಸಚಿತ್ರ ವರದಿಗಳು ನ್ಯಾಶನಲ್ ಜಿಯಾಗ್ರಫಿಕ್ ಪತ್ರಿಕೆಯಲ್ಲಿ ಪ್ರಕಟವಾದಾಗ ವಿಜ್ಞಾನಿಗಳೂ ನಿಬ್ಬೆರಗಾದರು. ಪ್ರಾಣಿಗಳ ಗುಣಸ್ವಭಾವಗಳ ಅಧ್ಯಯನಕ್ಕೆ ('ಇಥಾಲಜಿ'ಗೆ) ಹೆಚ್ಚಿನ ಬಲ ಬಂತು, ಧನಸಹಾಯ ಬಂತು, ಯುವ ಸಂಶೋಧಕರ ತಂಡವೇ ಆಫ್ರಿಕಾದತ್ತ ಬಂತು. ಪದವೀಧರೆ ಕೂಡ ಆಗಿರದ ಜೇನ್‌ಗೆ ಕೇಂಬ್ರಿಜ್ ವಿ.ವಿ.ಯಲ್ಲಿ ಡಾಕ್ಟರೇಟ್ ಪ್ರಬಂಧ ಸಲ್ಲಿಸಲು ಅವಕಾಶ ಒದಗಿಬಂತು, ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಉಪನ್ಯಾಸಕ್ಕೆ ಆಹ್ವಾನಗಳ ಸರಮಾಲೆ ಬಂತು. ಸಂದರ್ಶನಗಳಿಗೆ, ಸಾಕ್ಷ್ಯಚಿತ್ರಗಳಿಗೆ ಬೇಡಿಕೆ ಬಂತು.

30ರ ವಯಸ್ಸಿನಲ್ಲೇ ಜಾಗತಿಕ ಖ್ಯಾತಿ ಪಡೆದರೂ ಜೇನ್ ಗುಡಾಲ್ ಅರಣ್ಯ ಬಿಟ್ಟು ಕದಲಲಿಲ್ಲ. ಇಂದು ತಾಂಝಾನಿಯಾದ 'ಗೊಂಬಿ ರಾಷ್ಟ್ರೀಯ ಉದ್ಯಾನ'ಕ್ಕೆ ಜಾಗತಿಕ ಖ್ಯಾತಿ ಬಂದಿದೆ. ವಾನರಗಳನ್ನು ಕುರಿತಂತೆ ಜಗತ್ತಿನ ಅತಿ ದೀರ್ಘ ಸಂಶೋಧನೆ ಅಲ್ಲಿ ನಡೆದಿದೆ. ಮನುಷ್ಯನಿಗೆ ತೀರ ನಿಕಟ ಸಂಬಂಧಿ ಎನಿಸಿದ ಚಿಂಪಾಂಜಿ (ನಮ್ಮಲ್ಲಿರುವ ಶೇ 98.7 ಡಿಎನ್‌ಎ ಅವುಗಳಲ್ಲೂ ಇದೆ) ಹಾಗೂ ಇತರೆಲ್ಲ ವಾನರಗಳ ಬೌದ್ಧಿಕ ಮತ್ತು ಗುಣಭಾವಗಳ ಅಧ್ಯಯನಗಳಾಗಿವೆ. ಈ ಮೂಕಜೀವಿಗಳು ನಮ್ಮೊಂದಿಗೆ ಸಂಜ್ಞೆ ಮತ್ತು ಕೀಬೋರ್ಡ್ ಮೂಲಕ ಅಚ್ಚರಿ ಎನಿಸುವಷ್ಟು ಸಂವಹನ ನಡೆಸಲು ಸಾಧ್ಯವಾಗಿದೆ.

ವೈಜ್ಞಾನಿಕ ಅಧ್ಯಯನಗಳಾಚೆ ಜೇನ್ ತಮ್ಮನ್ನು ವಿಸ್ತರಿಸಿಕೊಂಡರು. ಅರಣ್ಯ ಜೀವಲೋಕದ ಇತರ ವಿದ್ಯಮಾನಗಳನ್ನೂ ಅರಣ್ಯವಾಸಿಗಳ ಹಿತಾಸಕ್ತಿಗಳನ್ನೂ ನೋಡುತ್ತ ಹೋದರು. 'ಜೇನ್ ಗುಡಾಲ್ ಇನ್‌ಸ್ಟಿಟ್ಯೂಟ್' (ಜೆಜಿಐ) ಹೆಸರಿನ ಸಂಸ್ಥೆಯನ್ನು ಆರಂಭಿಸಿ ಪರಿಸರ ಹಿತಾಸಕ್ತರನ್ನೆಲ್ಲ ಒಂದುಗೂಡಿಸಿದರು. ಮಕ್ಕಳಿಗೆಂದೇ 'ರೂಟ್ಸ್ ಅಂಡ್ ಶೂಟ್ಸ್' (ಬೇರು ಮತ್ತು ಚಿಗುರು) ಹೆಸರಿನ ಸಂಘಟನೆಯ ಮೂಲಕ ಹಳ್ಳಿಗಳಲ್ಲಿ ಅರಿವಿನ ಬೀಜ ಬಿತ್ತುತ್ತ ಹೋದರು.

ಆರಂಭದಲ್ಲಿ ಚಿಂಪಾಂಜಿಗಳು ಇವರನ್ನು ವೈರಿಯಂತೆ ಅಟ್ಟಿಸಿಕೊಂಡು ದಾಳಿಗೆ ಬರುತ್ತಿದ್ದವು. ಆದರೆ ಜೇನ್ ಶಾಂತವಾಗಿ ಅವುಗಳ ನಂಟಸ್ತನ ಬೆಳೆಸಿದರು. ಅದೇ ಅವರ ಯಶೋಮಾರ್ಗ ಎನಿಸಿತು. ಅವರ ಸಂಸ್ಥೆಯೂ ಪ್ರಭುತ್ವದ ಎದುರು ನೇರ ಹೋರಾಟಕ್ಕಿಳಿಯದೆ, ವನರಕ್ಷಣೆಗೆ ಗಟ್ಟಿ ಕಾನೂನುಗಳನ್ನು ರೂಪಿಸುವಂತೆ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಮನವೊಲಿಸುತ್ತಿದೆ. ಔಷಧ ಕಂಪನಿಗಳಲ್ಲಿ ಊಳಿಗಕ್ಕಿರುವ ವಿಜ್ಞಾನಿಗಳು ಪ್ರಾಣಿಗಳ ಮೇಲೆ ನಡೆಸುವ ಕ್ರೂರ ಪ್ರಯೋಗಗಳ ಮೇಲೆ ಕಡಿವಾಣ ಹಾಕಲಾಗಿದೆ. ಅವರ ಲ್ಯಾಬ್‌ಗಳಿಗೆಂದು ಪ್ರಾಣಿಗಳನ್ನು ಸಾಗಿಸದಂತೆ ವಿಮಾನ ಸಂಸ್ಥೆಗಳ ಮನವೊಲಿಸಲಾಗಿದೆ. ಅಳಿವಿನಂಚಿನ ಜೀವಿಗಳ ಬೇಟೆಗೆ, ಮೃಗಾಲಯಗಳ ಕ್ರೌರ್ಯಕ್ಕೆ ನಿರ್ಬಂಧ ಹಾಕಲೆಂದು ಅಂತಾರಾಷ್ಟ್ರೀಯ ಒಪ್ಪಂದಗಳಾಗಿವೆ. ಸ್ವತಃ ಸಸ್ಯಾಹಾರಿಯಾಗಿದ್ದ ಅವರು 'ಮಾಂಸಾಹಾರ ತ್ಯಜಿಸಿ' ಎಂದೇನೂ ಕರೆಕೊಡಲಿಲ್ಲ. ಆದರೆ ಔದ್ಯಮಿಕ ಮಟ್ಟದಲ್ಲಿ ದನ, ಕುರಿ, ಹಂದಿಗಳ ಸಾಕಣೆ ಮತ್ತು ವಧೆಯ ನಿರ್ದಯೀ ವಿಧಾನ ಮತ್ತು ಭೂಶಾಖ ಏರಿಕೆಯ ಬಗ್ಗೆ ಹೇಳುತ್ತ 'ಮಾಂಸಾಹಾರ ಸೇವನೆಯನ್ನು ಕಡಿಮೆ ಮಾಡಿ, ಅದು ನಿಮಗೂ ಭೂಮಿಗೂ ಕ್ಷೇಮಕಾರಿ' ಎಂದಷ್ಟೆ ಕೇಳಿಕೊಂಡರು.

ಇಂದು ಜೆಜಿಐ 26 ದೇಶಗಳಲ್ಲಿ ತನ್ನ ಶಾಖೆಗಳನ್ನು ವಿಸ್ತರಿಸಿದೆ. 140ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ 'ರೂಟ್ಸ್ ಅಂಡ್ ಶೂಟ್ಸ್' ಬೇರೂರಿವೆ. ಭಾರತದಲ್ಲೂ ಇವೆರಡು ಸಂಸ್ಥೆಗಳ ಆಶ್ರಯದಲ್ಲಿ ಶಾಲಾಮಕ್ಕಳಲ್ಲಿ ಅರಣ್ಯ ಶಿಕ್ಷಣಕ್ಕೆಂದು 'ವನ್ಯ ಭಾರತ' ಮತ್ತು ಕಡಲ ಪರಿಚಯಕ್ಕೆ 'ಬ್ಲೂ ಸ್ಕೂಲ್' ಕಾರ್ಯಕ್ರಮಗಳು ನಡೆಯುತ್ತಿವೆ.

ಜೇನ್ ಗುಡಾಲ್ ಅವರಿಗೆ ಸಂದ ಅದೆಷ್ಟೊ ಡಾಕ್ಟರೇಟ್ ಡಿಗ್ರಿಗಳು, ವಿಶ್ವಪ್ರಶಸ್ತಿ, ವಿಶ್ವಸಂಸ್ಥೆಯ ಶಾಂತಿದೂತ ಅಭಿಧಾನ, ವಿಜ್ಞಾನ ಸಂವಹನ ಪ್ರಶಸ್ತಿ – ಇವೆಲ್ಲ ಬಿಡಿ; ಅವರ 'ಮರಣೋತ್ತರ'ದ ಉಪನ್ಯಾಸ ಹೇಗಿತ್ತು ಗೊತ್ತೆ?

ನೆಟ್‌ಫ್ಲಿಕ್ಸ್ ವಾಹಿನಿ ಈಚೆಗೆ 'ಪ್ರಸಿದ್ಧರ ಕೊನೆಯ ಮಾತು' ಹೆಸರಿನ ಸರಣಿ ಸಂದರ್ಶನಗಳನ್ನು ಪ್ರಾರಂಭಿಸಿದೆ. ಖ್ಯಾತ ಸಾಧಕರ ಮತ್ತು ಚಿಂತಕರ 'ಕೊನೆಯ ಸಂದರ್ಶನ'ವನ್ನು ಈಗಲೇ ರೆಕಾರ್ಡ್ ಮಾಡಿಕೊಂಡು, ಅಂಥವರ ನಿಧನದ ನಂತರ ಅದನ್ನು ಪ್ರಕಟಿಸುವ ಯೋಜನೆ ಅದು. ರೆಕಾರ್ಡಿಂಗ್ ಮಾಡುವವರಿಗೂ ಸಂವಾದ ಗೊತ್ತಾಗದಂತೆ ರಿಮೋಟ್ ಸಂದರ್ಶನ ನಡೆಯುತ್ತದೆ. ಮೊನ್ನೆ ಮಾರ್ಚ್‌ನಲ್ಲಿ ಈ ಸರಣಿ ಜೇನ್ ಗುಡಾಲ್ ಜೊತೆಗೇ ಆರಂಭವಾಗಿತ್ತು. ಇದೀಗ ಅದು ಪ್ರಕಟವಾಗಿದೆ. 'ಮನುಷ್ಯನ ಸೌಕರ್ಯ ಹೆಚ್ಚುತ್ತ ಹೋದ ಹಾಗೆ ಆತನ ಮಿದುಳು ಮತ್ತು ಹೃದಯದ ನಡುವಣ ಸಂಬಂಧ ತೆಳುವಾಗುತ್ತ ಹೋಗುತ್ತಿದೆ; ಶಿಕ್ಷಣದ ಮೂಲಕ ಅದನ್ನು ಗಟ್ಟಿಗೊಳಿಸಲು ಸಾಧ್ಯವಿದೆ' ಎಂದು ಜೇನ್ ಅದರಲ್ಲಿ ಹೇಳಿದ್ದಾರೆ.

'ನೀವು ಹೇಳುವ ಹಾಗೆ, ಮುಗ್ಧರಿಗೆ ಶಿಕ್ಷಣ ಕೊಡೋಣ, ದುಷ್ಟರನ್ನು ಏನು ಮಾಡೋಣ?' ಎಂಬ ಪ್ರಶ್ನೆಗೆ ಗುಡಾಲ್ ನೀಡಿದ ಉತ್ತರ: 'ಬೇರೆ ಗ್ರಹಗಳಿಗೆ ಮನುಷ್ಯರನ್ನು ಕಳಿಸುವ ಈಲಾನ್ ಮಸ್ಕ್ ಯೋಜನೆ ಇದೆಯಲ್ಲ, ಅಲ್ಲಿಗೆ ಅವರನ್ನೆಲ್ಲ ಕಳಿಸಬೇಕು' ಎಂದಿದ್ದಾರೆ. 'ಯಾರ್ಯಾರನ್ನು ಕಳಿಸೋಣ?' ಎಂದು ಕೇಳಿದ್ದಕ್ಕೆ, 'ಅದೇ- ಟ್ರಂಪ್, ಪುತಿನ್, ಚೀನಾದ ಷಿ ಜಿನ್‌ಪಿಂಗ್, ಇಸ್ರೇಲಿನ ನೇತಾನ್ಯಾಹು ಮತ್ತು ಆ ನೌಕೆಯ ಕಮಾಂಡರ್ ಆಗಿ ಮಸ್ಕ್ ಕೂಡ ಹೋಗಬೇಕು' ಎಂದಿದ್ದಾರೆ.

ಸಂದರ್ಶನದ ಕೊನೆಯ ಭಾಗದಲ್ಲಿ ಅವರಾಡಿದ 'ಮರಣೋತ್ತರ' ಮಾತುಗಳ ಮುಖ್ಯಾಂಶ ಹೀಗಿದೆ: 'ಭೂಮಿ ಇಂದು ಅತ್ಯಂತ ಅಪಾಯದ ಘಟ್ಟದಲ್ಲಿದೆ. ಕರಾಳ ಬಿಸಿಯುಗಕ್ಕೆ ಕಾಲಿಟ್ಟಿದೆ. ಈಗಿನ ಬಲಪಂಥೀಯರ ಮುಷ್ಟಿ ಹೀಗೇ ಬಿಗಿಯಾಗುತ್ತ ಹೋದರೆ ಭೂಮಿ ದಿವಾಳಿ ಆಗುತ್ತದೆ. ಅದನ್ನು ತಡೆಯಬಲ್ಲ ವ್ಯವಸ್ಥೆಗಳೆಲ್ಲ ಇದ್ದರೂ ತಡೆಯಬೇಕೆಂಬ ಮನಸ್ಸು ರಾಜಕಾರಣಿಗಳಲ್ಲಿ ಮತ್ತು ಕಾರ್ಪೊರೇಟ್ ವಲಯದಲ್ಲಿ ಇಲ್ಲ... ಅದನ್ನು ಬದಲಿಸಬೇಕಿದೆ. ನೀವೆಲ್ಲ ನಿತ್ಯದ ಬದುಕಿನಲ್ಲಿ ಚಿಕ್ಕಚಿಕ್ಕ ಬದಲಾವಣೆ ಮಾಡಿಕೊಂಡರೂ ಸಾಕು, ಪೃಥ್ವಿ ಮತ್ತೆ ಚೇತರಿಸಿಕೊಳ್ಳಬಹುದು.'

ಅಂಥ ಚೇತರಿಕೆಗೆಂದೇ ವಿಜ್ಞಾನವನ್ನು, ಖ್ಯಾತನಾಮರನ್ನು ಮತ್ತು ಕಾಡಿನ ಜೀವಿಗಳನ್ನು ಒಂದಾಗಿ ಬೆಸೆಯುತ್ತ ಹೋಗಿದ್ದ ಅಮ್ಮ ಈಗ ಪ್ರಜ್ಞಾರೂಪಕ್ಕಿಳಿದಿದ್ದಾರೆ. ಇವರು ಹಚ್ಚಿದ ಅರಿವಿನ ದೀಪ್ತಿ ನಮ್ಮ ಅರಿವಿಗೆ ನೇರ ಬಾರದಿದ್ದರೂ ಅಂತರ್ವ್ಯಾಪಿಯಾಗಿ ಎಲ್ಲೆಡೆ ಬೆಳಗುತ್ತಿದೆ. ಇಲ್ಲವಾದರೆ, ನಮ್ಮ ಶರಾವತಿ ಕೊಳ್ಳದ ದಟ್ಟ ಕತ್ತಲಲ್ಲಿ ವಾಸಿಸುವ ನೂರಿನ್ನೂರು ಸಿಂಗಳೀಕಗಳಿಗೆ ಅಪಾಯ ಎದುರಾಗಿದೆ ಎಂದಾಗ, ಅವುಗಳ ರಕ್ಷಣೆಗೆ ಒತ್ತಾಯಿಸಿ ಅಷ್ಟೊಂದು ಸಾವಿರ ಜನರು ಸೆಪ್ಟೆಂಬರ್ 18ರಂದು ಗೇರುಸೊಪ್ಪದಲ್ಲಿ ಸೇರುತ್ತಿದ್ದರೆ?

ಜೀವಿಗಳನ್ನು ಪಂಜರದಲ್ಲಿ ಇಡುವುದನ್ನೇ ವಿರೋಧಿಸುವ ಜೇನ್ ಗುಡಾಲ್, ಆಫ್ರಿಕಾದ ಕಾಡಿನಲ್ಲಿ ತನ್ನ ಮೂರು ವರ್ಷದ ಮಗನನ್ನು ಪಂಜರದಲ್ಲಿಡುತ್ತಿದ್ದರು! ಏಕೆಂದರೆ, ದುರ್ಬೀನ್ ಹಿಡಿದ ತಾನು ಮರಪೊದೆಗಳ ಕಡೆ ಕಣ್ಣಿಟ್ಟು ಕೂತಿರುವಾಗ ಯಾವ ಪ್ರಾಣಿಯೂ ಮಗನ ಮೇಲೆ ದಾಳಿ ಮಾಡದಿರಲಿ ಎಂದು. ಇಂದು ತದ್ವಿರುದ್ಧದ ಸಂದರ್ಭದಲ್ಲಿ ನಾವಿದ್ದೇವೆ. ವಿವಿಧ ಭೂಖಂಡಗಳಲ್ಲಿ ನೂರಾರು ಪರಿಸರ ಹೋರಾಟಗಾರರು ಬಂಧನದಲ್ಲಿದ್ದಾರೆ. ಪ್ರಭುತ್ವದ ಬೆಂಬಲ ಪಡೆದ ಬಲಿಷ್ಠ ಬಾಹುಗಳು ಜೀವಲೋಕದ ದಮನ, ಧ್ವಂಸ ನಡೆಸುತ್ತಿವೆ.

ನಮ್ಮ ಸೋನಮ್ ವಾಂಗ್‌ಚುಕ್ ಎಲ್ಲಿದ್ದಾರೊ? ಹೇಗಿದ್ದಾರೊ?



ವಾಚಕರ ವಾಣಿ

ಶಿಕ್ಷಣದ ತುರ್ತು ಮಕ್ಕಳಿಗಲ್ಲ, ವಯಸ್ಕರಿಗೆ!

ಏಳರಿಂದ ಹದಿನಾಲ್ಕು ವರ್ಷದ ಮಕ್ಕಳಲ್ಲಿನ ಅತಿ ಭಾವುಕ ಚಟುವಟಿಕೆ (ಹೈಪರ್ ಆ್ಯಕ್ಟಿವಿಟಿ) ಬಗ್ಗೆ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ಗಮನ ಹರಿಸಿರುವುದು ಸ್ವಾಗತಾರ್ಹ (ಪ್ರ.ವಾ., ಅ. 8). ಯಾವುದನ್ನು ಹೈಪರ್ ಆ್ಯಕ್ಟಿವಿಟಿ ಎಂದು ಕರೆಯಲಾಗಿರುವುದೋ ಅದನ್ನು ಆಕ್ರಮಣಕಾರಕ (ನೆಗೆಟಿವಿಟಿ) ಎಂಬರ್ಥದಲ್ಲಿ ಬಳಸಲಾಗಿದೆ ಎಂದು ಗ್ರಹಿಸುತ್ತೇನೆ. ಮಕ್ಕಳಲ್ಲಿ ಜಂಕ್ ಫುಡ್ ಅಭ್ಯಾಸ ಮತ್ತು ಮೊಬೈಲ್ ಚಟ, ಈ ನಿಷೇಧಾತ್ಮಕ ವರ್ತನೆಗೆ ಕಾರಣ ಆಗಿರುವಂತಿದೆ.

ಅತಿ ಚಿಕ್ಕ ಸಾಮಾಜಿಕ ಘಟಕ ಎಂದು ಪರಿಗಣಿಸಲಾಗುವ ಕುಟುಂಬ ಅಥವಾ 'ಮನೆ'ಯಲ್ಲಿ ಮನುಷ್ಯಸಹಜ ಬಾಂಧವ್ಯದ ವಾತಾವರಣ ಇಲ್ಲದಿರುವುದೇ ಸಮಸ್ಯೆಗೆ ಕಾರಣ. ಮನುಷ್ಯ ಮನುಷ್ಯನನ್ನು ನಂಬದಿರುವುದರಿಂದಲೇ ಸಮಾಜದಲ್ಲಿ ಅನಾರೋಗ್ಯಕರ ಸ್ಪರ್ಧೆ, ದ್ವೇಷ, ಹಾನಿ ಮಾಡುವ ಹುನ್ನಾರ, ಸಾವನ್ನು ಸಂಭ್ರಮಿಸುವ ವಾತಾವರಣ ವ್ಯಾಪಕವಾಗಿರುವುದು. ನಮ್ಮಲ್ಲಿ ಬಾಲ ಶಿಕ್ಷಣಕ್ಕಿಂತಲೂ ವಯಸ್ಕ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಬೇಕಾದ ಸನ್ನಿವೇಶ ಉಂಟಾಗಿದೆ!

ಆರ್. ಕೆ ದಿವಾಕರ, ಎಳೇನಹಳ್ಳಿ

ರಕ್ಷಕರ ಮೌನ: ಧರ್ಮ ಉಳಿಯುವುದೆ?

ಚಿತ್ರದುರ್ಗ ಹಾಗೂ ಹೊಳಲ್ಕೆರೆ ತಾಲ್ಲೂಕುಗಳ ರೈತರು ಗಣಿ ಲಾರಿಗಳಿಂದ ತಮ್ಮ ಆರೋಗ್ಯ ಮತ್ತು ಕೃಷಿಭೂಮಿಯನ್ನು (ಪ್ರ.ವಾ., ಅ. 8) ರಕ್ಷಿಸುವಂತೆ ಸ್ವಾಮೀಜಿಗಳನ್ನು ಗೋಗರೆದಿದ್ದಾರೆ. ಅದರಿಂದ ಮಠಗಳಿಗೆ ಕಪ್ಪಕಾಣಿಕೆ ಸಂದಾಯವಾಗಿದೆಯೇ ಹೊರತು ಜನಸಾಮಾನ್ಯರಿಗೆ ಉಪಯೋಗವಾಗಿಲ್ಲ. ಧರ್ಮರಕ್ಷಕರೇ ಕಣ್ಣು ಮುಚ್ಚಿಕೊಂಡರೆ 'ಧರ್ಮೋ ರಕ್ಷತಿ ರಕ್ಷಿತಃ!' ಉಕ್ತಿಗೆ ಅರ್ಥವೆಲ್ಲಿದೆ?

ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

ಜಾತಿ ವ್ಯಸನದಿಂದ ವಿಮೋಚನೆ ಅಗತ್ಯ

ಚಾಮರಾಜನಗರ ಜಿಲ್ಲೆಯ ಕೆಲವೆಡೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸಮೀಕ್ಷಕರನ್ನು ಜಾತಿ ಕೇಳಿ ಒಳಗೆ ಬಿಟ್ಟುಕೊಳ್ಳುತ್ತಿರುವ ಮತ್ತು ಅವರ ಕೂರಲು ಬಳಸಿದ ಜಾಗವನ್ನು ಶುಚಿಗೊಳಿಸಿರುವ ಸುದ್ದಿ ಓದಿ ಬೇಸರವಾಯಿತು. ವೈಜ್ಞಾನಿಕ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಎಷ್ಟೇ ಮುನ್ನಡೆ ಸಾಧಿಸಿದರೂ, ಜಾತಿಯ ವ್ಯಸನದಿಂದ ಮುಕ್ತವಾಗದೇ ಇರುವುದು ಈ ದೇಶದ ದುರಂತ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮೇಲೆ ಶೂ ಎಸೆಯುವ ಪ್ರಯತ್ನವೂ ಜಾತಿಯ ನೆಲೆಯೊಳಗೆ ನಡೆದ ಹುನ್ನಾರವಾಗಿದೆ. ನಿಜವಾದ ದೇಶಪ್ರೇಮಿಗಳು ಜಾತಿ–ಧರ್ಮದ ಅಮಲನ್ನು ಮೀರಬೇಕು.

ಯಲ್ಲಪ್ಪ ಟಿ. ಗಲಗ್ಕರ್, ದೇವದುರ್ಗ

ಶೂ ಎಸೆತ ಒಂದು ಎಚ್ಚರಿಕೆಯ ಸಂಕೇತ

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮೇಲೆ ಶೂ ಎಸೆಯಲು ಪ್ರಯತ್ನಿಸಿದ ಘಟನೆ, ನಮ್ಮ ಸಮಾಜದಲ್ಲಿ ಇನ್ನೂ ಆಳವಾಗಿ ಬೇರುಬಿಟ್ಟಿರುವ ಜಾತೀಯ ಅಸಹನೆಯನ್ನು ಬಯಲಿಗೆಳೆದಿದೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಂತಹ ಪ್ರಭಾವಿ ವ್ಯಕ್ತಿಯ ಮೇಲೆಯೇ ಧರ್ಮದ ಹೆಸರಿನಲ್ಲಿ ಶೂ ಎಸೆದಿರುವುದು ಒಂದು ಸ್ಪಷ್ಟವಾದ ಎಚ್ಚರಿಕೆಯ ಗಂಟೆ. ಸಾರ್ವಜನಿಕ ವೇದಿಕೆಯಲ್ಲೇ ಅಸಹನೆಯು ಇಷ್ಟು ತೀವ್ರವಾಗಿದ್ದರೆ, ಗ್ರಾಮೀಣ ಭಾಗಗಳಲ್ಲಿ ಅದೆಷ್ಟು ಭೀಕರ ಘಟನೆಗಳು ಮೌನವಾಗಿ ನಡೆಯುತ್ತಿರಬಹುದು!

ನಾವು ಕಾನೂನುಬದ್ಧ, ಸಂವಿಧಾನಬದ್ಧ ರಾಷ್ಟ್ರದಲ್ಲಿ ಬದುಕುತ್ತಿದ್ದೇವೆಂದು ಹೇಳಿಕೊಳ್ಳುತ್ತೇವೆ. ಆದರೆ ಅಸಮಾನತೆಯ ನೆಲೆಯು ಮನಸ್ಸಿನ ತಳಭಾಗದಲ್ಲೇ ಗಟ್ಟಿಯಾಗಿ ಉಳಿದಿರುವಾಗ, ಕಾನೂನಿನ ಶಕ್ತಿ ಎಷ್ಟು ಬಲಹೀನವಾಗಿ ಪರಿಣಮಿಸುತ್ತದೆ ಎಂಬುದನ್ನು ಈ ಘಟನೆ ಕಣ್ಣು ತೆರೆಸುವಂತೆ ತೋರಿಸಿದೆ. ಈ ಪ್ರಕರಣದಲ್ಲಿ ಕಾನೂನು ಕ್ರಮ ಅಗತ್ಯ. ನ್ಯಾಯಮೂರ್ತಿಯ ಮೇಲಿನ ದಾಳಿಯ ಪ್ರಯತ್ನವನ್ನು ಸಂವಿಧಾನದ ಮೇಲಿನ ನೇರ ದಾಳಿ ಎಂದು ಪರಿಗಣಿಸಬೇಕು. ಅಸಹನೆಯನ್ನು ಸಹಿಸುವುದಿಲ್ಲ ಎಂಬ ಸಂದೇಶ ಸಮಾಜಕ್ಕೆ ಮುಟ್ಟಬೇಕು.

ಶಿವಯೋಗಿ ಎಂ.ವಿ., ರಾಂಪುರ

ಪುಸ್ತಕ ಖರೀದಿ: ಸರ್ಕಾರ ಕಣ್ಣು ತೆರೆಯಲಿ

ಚಲನಚಿತ್ರ ನಟ ಧ್ರುವ ಅವರ ಅಭಿಮಾನಿಗಳು ಹಾರ ತುರಾಯಿಯ ಬದಲಿಗೆ ಪುಸ್ತಕಗಳ ಕಾಣಿಕೆ ನೀಡಿ ತಮ್ಮ ನೆಚ್ಚಿನ ನಟನ ಹುಟ್ಟುಹಬ್ಬ ಆಚರಿಸಿರುವುದು ಸಂತಸದ ಸಂಗತಿ. ಈ ಮಾದರಿಯನ್ನು ಎಲ್ಲ ಕಲಾವಿದರು ಹಾಗೂ ಅವರ ಹಿಂಬಾಲಕರು, ವಿವಿಧ ಕ್ಷೇತ್ರಗಳ ಖ್ಯಾತನಾಮರು ಅನುಸರಿಸಿದರೆ ಕನ್ನಡ ಪುಸ್ತ-ಕೋದ್ಯಮಕ್ಕೆ ಚೇತರಿಕೆ ದೊರೆಯಬಹುದು.

ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವಲ್ಲಿ ಪ್ರಗತಿಪರ ಚಿಂತಕರ, ಸಾಹಿತಿಗಳ ಪಾತ್ರವೂ ಇದೆ. ಆದರೆ, ಲೇಖಕರು– ಪ್ರಕಾಶಕರ ಸಮಸ್ಯೆ ಬಗೆಹರಿಸಲು ಹಾಗೂ ಗ್ರಂಥಾಲಯಗಳ ಪುಸ್ತಕ ಖರೀದಿ ಪ್ರಕ್ರಿಯೆಗೆ ಜೀವತುಂಬಲು ಸರ್ಕಾರ ಮುಂದಾಗದಿರುವುದು ನೋವಿನ ಸಂಗತಿ.

ಎ.ಎಸ್. ಮಕಾನದಾರ, ಗದಗ

ಕೈಗಾರಿಕೆಗಳ ಕೊರತೆ; ನಿರುದ್ಯೋಗ ಹೆಚ್ಚಳ

ರಾಜ್ಯದ ಗಡಿಭಾಗದ ಜಿಲ್ಲೆಗಳಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ರಾಷ್ಟ್ರೀಯ, ಅಂತರರಾಷ್ಟ್ರೀಯ ಕಂಪನಿಗಳನ್ನು ಕರೆತರುವ ಪ್ರಯತ್ನದಲ್ಲಿ ಸರ್ಕಾರಗಳು ವೈಫಲ್ಯ ಅನುಭವಿಸುತ್ತಿವೆ. ಯುವಜನರು, ತಂತಮ್ಮ ಜಿಲ್ಲೆಗಳಲ್ಲಿ ಕಾರ್ಖಾನೆಗಳೇ ಇಲ್ಲದಿರುವುದರಿಂದ ನಿರುದ್ಯೋಗ ಸಮಸ್ಯೆ ಎದುರಿಸುತ್ತಿದ್ದಾರೆ. ನಿರುದ್ಯೋಗದಿಂದ ಯುವಜನರ ವಲಸೆ ಹೆಚ್ಚುತ್ತಿದೆ. ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಸರ್ಕಾರ ಉದ್ಯೋಗ ಸೃಷ್ಟಿಯ ಪ್ರಯತ್ನಗಳನ್ನು ನಡೆಸಬೇಕು.

ಹರೀಶ್ ಅಮಲಗೊಂದಿ, ಸಿರಾ



ಬಿಗ್ ಬಾಸ್ – ಬಿಗ್ ಲಾಸ್!

• ಗುರು ಪಿ.ಎಸ್.

ಬಿಗ್ ಬಾಸ್... ಬಿಗ್ ಬಾಸ್... ಮ್ಯೂಸಿಕ್ ಸಮೇತ ಹಾಡು ಕೇಳಲಾರಂಭಿಸಿತು.

'ಇಲ್ಲಿ ಕೇಳಿ, ಒಂಟಿಯೋ ಜಂಟಿಯೋ ತಕ್ಷಣಕ್ಕೆ ಗಂಟು–ಮೂಟೆ ಕಟ್ಟಿಕೊಂಡು ಮಹಾದ್ವಾರದಿಂದ ನಿಷ್ಕ್ರಮಿಸಿ' ಹೆಣ್ಣು ಧ್ವನಿ ಗುಡುಗಿತು.

'ಬಿಗ್ ಬಾಸ್, ಇದೇನು ನಿಮ್ಮ ವಾಯ್ಸ್ ಚೇಂಜ್ ಆಗಿದೆ. ಬೇಸ್ ವಾಯ್ಸ್ ಹೋಗಿ, ನೈಸ್ ವಾಯ್ಸ್ ಆಗಿದೆಯಲ್ಲ' ತಲೆಹರಟೆ ಸ್ಪರ್ಧಿಯೊಬ್ಬ ಕೇಳಿದ.

'ನಾನು ಬಿಗ್ ಬಾಸ್ ಅಲ್ಲ. ಗವರ್ನ್‌ಮೆಂಟ್ ಆಫೀಸರ್, ತಹಶೀಲ್ದಾರ್'.

ಇದೂ ಒಂದು ಟಾಸ್ಕ್ ಇರಬೇಕೆಂದು ಭಾವಿಸಿದ ಸ್ಪರ್ಧಿಗಳು, 'ನೀವು ಹೊರಡಿ ಎಂದಾಕ್ಷಣ ಗಂಟುಮೂಟೆ ಕಟ್ಟಲು ನಾವಿಲ್ಲಿ ಬಂದಿಲ್ಲ, ಜನರಿಗೆ ನಾವೇನು ಅಂತ ತೋರಿಸೋಕೆ ಇಲ್ಲಿಗೆ ಬಂದಿದೀವಿ' ಎಂದು ಅರಚಿದರು.

ಇವರಿಗೆ 'ಬಿಗ್ ಬಾಸ್' ಭಾಷೆಯಲ್ಲೇ ಹೇಳಬೇಕೇನೋ ಎಂದುಕೊಂಡ ತಹಶೀಲ್ದಾರ್, 'ನೀವೆಲ್ಲರೂ ನಾನು ಕೊಟ್ಟ ಟಾಸ್ಕ್‌ನಲ್ಲಿ ಫೇಲ್ ಆಗಿದ್ದೀರಿ, ಅದಕ್ಕೆ ಹೊರಡಿ' ಎಂದರು.

'ಅದೆಲ್ಲ ಆಗಲ್ಲ, ಮೊದಲು ನೀವು ನೋಟಿಸ್ ಕೊಡಬೇಕಿತ್ತು'.

'ನಾವು ನೋಟಿಸ್ ಕೊಟ್ಟಿದ್ದೆವು. ಅದನ್ನು ನೀವು ನಾಮಿನೇಷನ್ ಅಷ್ಟೇ ಎಂದು ಭಾವಿಸಿ ನಿರ್ಲಕ್ಷಿಸಿದಿರಿ'.

'ಅಂದ್ರೆ, ಬಿಗ್ ಬಾಸ್ ಹೆಸರಲ್ಲಿ ನಿಮ್ಮದು ವೈಲ್ಡ್ ಕಾರ್ಡ್ ಎಂಟ್ರಿಯಾ?'

'ಇಲ್ಲ, ಗವರ್ನಮೆಂಟ್ ಆರ್ಡರ್ ಎಂಟ್ರಿ' ನಕ್ಕರು ತಹಶೀಲ್ದಾರ್.

'ಹೊರಗೆ ಹಾಕುವಂತಹ ತಪ್ಪು ನಾವೇನು ಮಾಡಿದ್ದೀವಿ'.

'ಮಾಲಿನ್ಯ ಮಾಡಿದ್ದೀರಿ. ಕ್ಲೀನ್ ಇಂಡಿಯಾ ಟಾಸ್ಕ್‌ನಲ್ಲಿ ಫೇಲ್ ಆಗಿದ್ದೀರಿ'.

'ಹಹಹ...' ವಜ್ರಮುನಿಯವರ ಸ್ಟೈಲ್‌ನಲ್ಲಿ ನಕ್ಕ ಸ್ಪರ್ಧಿಯೊಬ್ಬ, 'ನೀವು ಮಾಲಿನ್ಯವನ್ನೇ ಮಾಡುವುದಿಲ್ಲವೇ? ನಿಮಗೆ ಆರ್ಡರ್ ಕೊಡಲು ಹೇಳಿದವರೂ ಮಾಲಿನ್ಯ ಮಾಡಿಲ್ಲವೇ? ಸರ್ಕಾರವೇ ಮಾಲಿನ್ಯಮಯವಲ್ಲವೇ?' ಎಂದ.

'ಇದು ಅತಿಯಾಯ್ತು, ಹೊರಡಿ, ನಾನು ಬೀಗ ಹಾಕಬೇಕು' ಎಂದರು ಆಫೀಸರ್.

ಹೋರಾಟಗಾರ್ತಿ ಸ್ಪರ್ಧಿಯೊಬ್ಬಳು ಚೇರ್ ಮೇಲೆ ನಿಂತು ಕೇಳಿದಳು, 'ಇದು ಕಾನೂನು ಬೀಗವೋ, ಕಾನೂನಿನ ಹೆಸರಿನಲ್ಲಿ ಹಾಕಿದ ರಾಜಕೀಯ ಬೀಗವೋ?'

ತಹಶೀಲ್ದಾರ್‌ಗೆ ಪಿತ್ತ ನೆತ್ತಿಗೇರಿತು, 'ರೀ ಮೇಡಂ, ಆಟ ಬಿಟ್ಟು ವಾಸ್ತವಕ್ಕೆ ಬನ್ನಿ, ಇಡೀ ಬಿಗ್ ಬಾಸ್ ಮನೆಯೇ ಎಲಿಮಿನೇಟ್ ಆಗಿದೆ. ಹೊರಡಿ ಸಾಕು' ಎಂದು ಎಲ್ಲರನ್ನೂ ಹೊರಕಳಿಸಿ ಮಹಾದ್ವಾರಕ್ಕೆ ಬೀಗ ಜಡಿದರು.

ಸಂಗತ

ಕಡ್ಡಾಯ ಕನ್ನಡ ಪರೀಕ್ಷೆ: ಅಸ್ಪಷ್ಟ ನಿರೀಕ್ಷೆ

ಕನ್ನಡೇತರ ನೌಕರರು 'ಕಡ್ಡಾಯ ಕನ್ನಡ' ಭಾಷಾ ಪರೀಕ್ಷೆ ಉತ್ತೀರ್ಣರಾಗಬೇಕು ಎನ್ನುವುದು ಸರಿ. ಆದರೆ, ಆ ಪರೀಕ್ಷೆಗಳು ಕೆಲವರನ್ನು ಹೊರಗಿಡುವಂತಿರಬಾರದು.

• ಎಂ. ಅಬ್ದುಲ್ ರೆಹಮಾನ್ ಪಾಷ


ರಾಜ್ಯ ಸರ್ಕಾರದ ಇಲಾಖೆ, ಮಂಡಳಿ, ನಿಗಮದಲ್ಲಿ ಯಾವುದೋ ಹುದ್ದೆಗೆ ನೇಮಕವಾಗುವ ಕೆಲವರು, 10ನೇ ತರಗತಿಯನ್ನು ಕನ್ನಡ ಮಾಧ್ಯಮದಲ್ಲಿ ಪಾಸು ಮಾಡಿರುವುದಿಲ್ಲ, ಅಥವಾ 10ನೇ ತರಗತಿಯಲ್ಲಿ ಕನ್ನಡವನ್ನು ಒಂದನೇ ಅಥವಾ ಎರಡನೆಯ ಭಾಷೆಯಾಗಿ ಓದಿ ಪಾಸು ಮಾಡಿರುವುದಿಲ್ಲ. ಅಂಥವರು 2 ವರ್ಷದ ತಮ್ಮ ಪ್ರೊಬೆಷನರಿ ಅವಧಿ ಮುಗಿಯುವುದರೊಳಗೆ 'ಕೆಪಿಎಸ್‌ಸಿ' ನಡೆಸುವ 'ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ'ಯನ್ನು ಪಾಸು ಮಾಡಬೇಕು. ಇಲ್ಲವಾದರೆ, ಅವರ ವೇತನ ಬಡ್ತಿ ಮತ್ತು ಪದಬಡ್ತಿಯನ್ನು ತಡೆಹಿಡಿಯಲಾಗುವುದು.

ಇದೇ ನಿಯಮವನ್ನು ಕೆಪಿಟಿಸಿಎಲ್, ಎಸ್ಕಾಂಗಳೂ ಅನುಸರಿಸುತ್ತವೆ. ಕೆಲವು ನೇಮಕಾತಿಗಳಲ್ಲಿ ಹುದ್ದೆಗೆ ತಕ್ಕ ವಿದ್ಯಾರ್ಹತೆ ಇದ್ದ ಹೊರತಾಗಿಯೂ, ಅದಕ್ಕೆ ತಕ್ಕ ತಾಂತ್ರಿಕ ವಿಷಯದ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಮುಂಚೆ ಅಭ್ಯರ್ಥಿಗಳು ನೇಮಕಾತಿಪೂರ್ವ ಕನ್ನಡ ಪರೀಕ್ಷೆಯನ್ನು ಬರೆದು ಪಾಸು ಮಾಡಬೇಕು, ಇಲ್ಲವಾದರೆ ಅವರಿಗೆ ಮುಂದಿನ ಅರ್ಹತಾ ಪರೀಕ್ಷೆಗಳನ್ನು ಬರೆಯಲು ಅನುಮತಿ ಇರುವುದಿಲ್ಲ.

ಸಾಮಾನ್ಯವಾಗಿ ಇಂಥ ಇಲಾಖಾ ಕನ್ನಡ ಪರೀಕ್ಷೆಗಳನ್ನು ಬರೆಯಬೇಕಾದ ಅಭ್ಯರ್ಥಿಗಳು, ಕೆಲವೊಮ್ಮೆ ಕನ್ನಡ ಮಾತೃಭಾಷೆಯವರೇ ಆಗಿದ್ದರೂ, ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತು, ಇಂಗ್ಲಿಷ್–ಹಿಂದಿ ಅಥವಾ ವಿದೇಶೀ ಭಾಷೆಯೊಂದನ್ನು ಪ್ರಥಮ, ದ್ವಿತೀಯ ಭಾಷೆಯನ್ನಾಗಿ ಕಲಿತಿರುತ್ತಾರೆ. ಕನ್ನಡ ಮಾತೃಭಾಷೀಯರೇ ಆಗಿದ್ದರೂ, ಕನ್ನಡದಲ್ಲಿ ಓದು–ಬರಹ ಕಲಿತಿರುವುದಿಲ್ಲವಾದ್ದರಿಂದ ಪರೀಕ್ಷೆ ಅಷ್ಟರಮಟ್ಟಿಗೆ ಕಷ್ಟಕರವಾಗಿರುತ್ತದೆ. ಆದರೂ ಒಂದೆರಡು ತಿಂಗಳ ಸೂಕ್ತ ತರಬೇತಿಯ ನಂತರ ಇವರು ಕಡ್ಡಾಯ ಕನ್ನಡ ಪರೀಕ್ಷೆಯನ್ನು ಪಾಸು ಮಾಡಿಕೊಳ್ಳುತ್ತಾರೆ.

ಪರೀಕ್ಷೆಯಲ್ಲಿ ಫೇಲಾಗುವ ಜಾಲದಲ್ಲಿ ಸಿಲುಕಿಕೊಳ್ಳುವವರು, ಉರ್ದು, ತಮಿಳು, ಮರಾಠಿ, ಕೊಂಕಣಿ ಮುಂತಾದ ಕನ್ನಡೇತರ ಮಾತೃಭಾಷಿಕರು.

ಮುಖ್ಯ ಸಮಸ್ಯೆ ಶುರುವಾಗುವುದೇ ಇಂಥ ಪರೀಕ್ಷೆಗಳಿಗಾಗಿ ಕೆಪಿಎಸ್‌ಸಿ ನಿಗದಿಪಡಿಸಿರುವ ಪಠ್ಯಕ್ರಮದಲ್ಲಿ. ಇದರಲ್ಲಿ ಎರಡು ಲಿಖಿತ ಪತ್ರಿಕೆ ಇರುತ್ತವೆ: 100 ಅಂಕಗಳಿಗೆ ಪಠ್ಯವನ್ನು ಆಧರಿಸಿದ ಪತ್ರಿಕೆ, ಇನ್ನೊಂದು 50 ಅಂಕಗಳಿಗೆ ಭಾಷಾಂತರ ಪರೀಕ್ಷೆ. ಉದ್ದೇಶ ಇರುವುದು ಇಂಥ ಪರೀಕ್ಷೆಯನ್ನು ಪಾಸು ಮಾಡಿದ ನಂತರ ಅಭ್ಯರ್ಥಿಗಳು ತಮ್ಮ ಹುದ್ದೆಗಳ ಆಡಳಿತ ನಿರ್ವಹಣೆಯಲ್ಲಿ ಕನ್ನಡವನ್ನು ಬಳಸಬೇಕು ಎನ್ನುವುದು. ಆದರೆ, ಪಠ್ಯ ಇರುವುದು ಮಾತ್ರ, ಕನ್ನಡ ಮಾಧ್ಯಮ ಶಾಲೆಯಲ್ಲಿ ಪ್ರಥಮ ಭಾಷೆಗಾಗಿ ಬಳಸುವ 6ನೇ ತರಗತಿ ಪುಸ್ತಕ!



ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಕಲಿತು ಬರುವ ಮಕ್ಕಳು, ಆರು ವರ್ಷಗಳ ಕಾಲ ಶಿಕ್ಷಕರ ಮಾರ್ಗದರ್ಶನದಲ್ಲಿ ಕಲಿತು ಪರೀಕ್ಷೆಯನ್ನು ಎದುರಿಸಿ ಪಾಸು ಮಾಡುವ ಅಗತ್ಯವೂ ಇಲ್ಲದ ಒಂದು ಪುಸ್ತಕ, ಕನ್ನಡದಲ್ಲಿ ಮೂಲಭೂತ ಸಾಕ್ಷರತೆಯೂ ಇಲ್ಲದ ಕನ್ನಡೇತರ ಮಾತೃಭಾಷೀಯರು ತಾವಾಗಿಯೇ ಕಲಿತುಕೊಂಡು ಕಡ್ಡಾಯವಾಗಿ ಪಾಸು ಮಾಡಬೇಕಾದ ಪರೀಕ್ಷೆಯ ಪಠ್ಯವಾಗಿದೆ!

6ನೇ ತರಗತಿ ಪುಸ್ತಕದ ಪಠ್ಯದಲ್ಲಿ ಕಚೇರಿ ಆಡಳಿತಕ್ಕೆ ಅಗತ್ಯವಾದ ಕನ್ನಡ ಭಾಷಾಕೌಶಲವನ್ನು ಕಲಿಯುವ ಪಾಠ–ಅಭ್ಯಾಸ ಖಂಡಿತ ಇಲ್ಲ. ಗದ್ಯ, ಪದ್ಯ, ಸಂಧಿ, ಸಮಾಸ, ಛಂದಸ್ಸು ಇತ್ಯಾದಿ ಸಾಹಿತ್ಯಕ ಅಂಶಗಳಿಗೇ ಪಠ್ಯದಲ್ಲಿ ಒತ್ತು. ಕಚೇರಿಯಲ್ಲಿ ಕೆಲಸ ಮಾಡಬೇಕಾಗಿರುವವರು ಈ ಶೈಲಿಯನ್ನು ಕಲಿತರೆ ಏನು ಪ್ರಯೋಜನ? ಹಾಗೆಯೇ ಸರ್ಕಾರಿ ನೌಕರಿಯಲ್ಲಿರುವವರು ಎಲ್ಲರೂ ಇಂಗ್ಲಿಷ್–ಕನ್ನಡ ಅನುವಾದ ಮಾಡುವ ಅಗತ್ಯವೆಲ್ಲಿರುತ್ತದೆ. ಆದರೂ 50 ಅಂಕಗಳ ಕಠಿಣವಾದ ಭಾಷಾಂತರ ಪತ್ರಿಕೆಯನ್ನು ಬರೆದು ಪಾಸು ಮಾಡಬೇಕು. ಹೋಗಲಿ, 10ನೇ ತರಗತಿ ಅಥವಾ ಅದಕ್ಕೂ ಉನ್ನತ ಮಟ್ಟದಲ್ಲಿ ಕನ್ನಡ ಮಾಧ್ಯಮದಲ್ಲಿಯೇ ಓದಿ ಉತ್ತಮ ಅಂಕ ಬಳಸಿ ಪಾಸು ಮಾಡಿದ್ದು, ಸರ್ಕಾರದ ನೌಕರರಾಗಿರುವವರಿಗೆ ಆಡಳಿತದಲ್ಲಿ ಕನ್ನಡವನ್ನು ಬಳಸುವ ಕೌಶಲ ಕರಗತವಾಗಿರುತ್ತದೆಯೇ? ಖಂಡಿತ ಇಲ್ಲ. ಹೀಗಾಗಿ ಕಡ್ಡಾಯ ಕನ್ನಡ ಪರೀಕ್ಷೆಗಳ ಉದ್ದೇಶವೇ ಬೇರೆ, ಅದಕ್ಕಾಗಿ ಇಟ್ಟಿರುವ ಪಠ್ಯವೇ ಬೇರೆ. ಈ ಎಲ್ಲಾ ಕಾರಣಗಳಿಗಾಗಿ ಕನ್ನಡೇತರರು ಈ ಪರೀಕ್ಷೆಗಳನ್ನು ಹಲವು ಬಾರಿ ಪ್ರಯತ್ನಿಸಿದರೂ ಫೇಲಾಗುವುದೇ ಹೆಚ್ಚು.

ಇನ್ನೊಂದು ಉದಾಹರಣೆ ನೋಡುವುದಾದರೆ, ಕೆಪಿಟಿಸಿಎಲ್ ಮತ್ತು ಎಸ್ಕಾಂ ಸಂಸ್ಥೆಗಳು ನಡೆಸುವ ಕನ್ನಡ ಪರೀಕ್ಷೆಗಳಲ್ಲಿ 100 ಅಂಕಕ್ಕೆ ಇಟ್ಟಿರುವ ಪಠ್ಯ, 'ಸಣ್ಣ ಕಥೆಗಳು' ಎನ್ನುವ 11 ಕಥೆಗಳ ಸಂಚಯ. ಮತ್ತು ಇದಕ್ಕೂ ಅವರ ಉದ್ದೇಶಕ್ಕೂ ನೇರ ಸಂಬಂಧವಿಲ್ಲ. ಇಲ್ಲಿಯೂ 50 ಅಂಕಗಳ ಇಂಗ್ಲಿಷ್–ಕನ್ನಡ ಭಾಷಾಂತರ ಇದೆ. ಇಲ್ಲಿ ತಾಂತ್ರಿಕ ಸಾಮಗ್ರಿಯನ್ನು ನೀಡಲಾಗುತ್ತದೆ. ವಿಶೇಷ ತೀವ್ರತರ ತರಬೇತಿ ಇಲ್ಲದಿದ್ದರೆ ಅಭ್ಯರ್ಥಿಗಳು ಫೇಲಾಗುವುದೇ ಹೆಚ್ಚು.

ಸರ್ಕಾರದ ಉದ್ದೇಶ ನಿಜವಾಗಿಯೂ ತಮ್ಮೆಲ್ಲಾ ಅಭ್ಯರ್ಥಿಗಳು ಆಡಳಿತದಲ್ಲಿ ಕನ್ನಡವನ್ನು ಬಳಸುವ ಸಾಮರ್ಥ್ಯವನ್ನು ಗಳಿಸುವುದಾಗಿದ್ದರೆ, ಅದಕ್ಕೆ ತಕ್ಕನಾದ, ಸರಳವಾದ ಪಠ್ಯವನ್ನು, ಇಡಬೇಕು. ಇಂಥವರಿಗಾಗಿ ಇಲಾಖೆಗಳ ವತಿಯಿಂದಲೇ ನಿರ್ದಿಷ್ಟ ತರಬೇತಿಗಳನ್ನು ಏರ್ಪಡಿಸುವತ್ತ ಸರ್ಕಾರ ಯೋಚಿಸಬೇಕು. ಕನ್ನಡ ಪರೀಕ್ಷೆ ಎನ್ನುವುದು, ಕೆಲವರನ್ನು ಹೊರಗಿಡುವ ಕ್ರಮವಾಗದೇ ಎಲ್ಲರನ್ನೊಳಗೊಳ್ಳುವ ಸಬಲೀಕರಣದ ಯೋಜನೆಯಾಗಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬೃಹತ್ ಉದ್ಯಮಗಳ ಮೇಲೆ ಹಿಡಿತ ಸಾಧಿಸಲು ಮೇಲಾಟ

ಟಾಟಾ 'ಸಾಮ್ರಾಜ್ಯ'ದಲ್ಲಿ ಬಿರುಕು?

ದೇಶದ ಅತ್ಯಂತ ಪ್ರತಿಷ್ಠಿತ ಹಾಗೂ ದೇಣಿಗೆಗೆ ಹೆಸರಾದ ಟಾಟಾ ಟ್ರಸ್ಟ್ಸ್‌ನಲ್ಲಿ ಬಿರುಗಾಳಿ ಎದ್ದಿದೆ. ಟಾಟಾ ಸಮೂಹ ಉದ್ದಿಮೆಗಳ ಮಾಲೀಕತ್ವ ಹೊಂದಿರುವ ಟಾಟಾ ಟ್ರಸ್ಟ್ಸ್‌ನ ಮೇಲಿನ ಹಿಡಿತಕ್ಕಾಗಿ ಟ್ರಸ್ಟ್ಸ್‌ನ ಅಧ್ಯಕ್ಷ ನೋಯಲ್ ಟಾಟಾ ಬಣ ಮತ್ತು ಟ್ರಸ್ಟಿ ಮೆಹ್ಲಿ ಮಿಸ್ತ್ರಿ ಬಣಗಳ ನಡುವೆ ಸಂಘರ್ಷ ನಡೆಯುತ್ತಿದೆ. ಮೇಲ್ನೋಟಕ್ಕೆ ಇಬ್ಬರು ವ್ಯಕ್ತಿಗಳ ನಡುವಿನ ಭಿನ್ನಾಭಿಪ್ರಾಯದಂತೆ ಕಂಡರೂ ಇದು ಟಾಟಾ ಮತ್ತು ಶಾಪೂರ್ಜಿ ಪಲ್ಲೊಂಜಿ ಕುಟುಂಬಗಳ ಕಲಹ ಎಂದು ವಿಶ್ಲೇಷಿಸಲಾಗುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಇದು ಬೃಹತ್ ಉದ್ಯಮ ಸಮೂಹದ ಮೇಲೆ ಹಿಡಿತ ಸಾಧಿಸಲು ನಡೆಯುತ್ತಿರುವ ಮೇಲಾಟವೂ ಹೌದು

ಪ್ರಜಾವಾಣಿ ವಾರ್ತೆ


400	**30**	**66%**	**18.37%**	**₹16**
ಟಾಟಾ ಸನ್ಸ್ ಅಧೀನದಲ್ಲಿರುವ ಕಂಪನಿಗಳು	ಷೇರುಪೇಟೆ ನೋಂದಾಯಿತ ಕಂಪನಿಗಳು	ಟಾಟಾ ಸನ್ಸ್‌ನಲ್ಲಿ ಟಾಟಾ ಟ್ರಸ್ಟ್ಸ್ ಹೊಂದಿರುವ ಷೇರಿನ ಪಾಲು	ಟಾಟಾ ಸನ್ಸ್‌ನಲ್ಲಿ ಶಾಪೂರ್ಜಿ ಪಲ್ಲೊಂಜಿ ಸಮೂಹ ಹೊಂದಿರುವ ಷೇರಿನ ಪಾಲು	ಲಕ್ಷ ಕೋಟಿ ಟಾಟಾ ಸನ್ಸ್‌ನ ಅಂದಾಜು ಮೌಲ್ಯ


ರತನ್ ಟಾಟಾ ಅವರು ಟಾಟಾ ಸಮೂಹದ ಮುಖ್ಯಸ್ಥರಾಗಿದ್ದವರು. ಅವರು ನಿಧನರಾಗಿ ಇಂದಿಗೆ (ಅಕ್ಟೋಬರ್ 9) ಒಂದು ವರ್ಷವಾಗಿದೆ. ಒಂದೇ ವರ್ಷದಲ್ಲಿ ಅವರ ನೆಚ್ಚಿನ ಟಾಟಾ ಟ್ರಸ್ಟ್ಸ್ (tata trusts) ಆಡಳಿತ ಮಂಡಳಿಯಲ್ಲಿ ಬಿರುಕು ಮೂಡಿದೆ. ಆಡಳಿತದಲ್ಲಿ ಕಂಡುಬಂದಿರುವ ಒಳಜಗಳವು 156 ವರ್ಷಗಳ ಇತಿಹಾಸವಿರುವ ಟಾಟಾ ಸಮೂಹವನ್ನು ಅಸ್ಥಿರಗೊಳಿಸುವ ಆತಂಕವನ್ನು ಸೃಷ್ಟಿಸಿದೆ.

ಟಾಟಾ ಉದ್ದಿಮೆ ಸಮೂಹವು ಉದ್ದಿಮೆಯಾಗಿ ಅಷ್ಟೇ ಅಲ್ಲ, ದಾನಕ್ಕೂ ಹೆಸರುವಾಸಿ. ಆರೋಗ್ಯ ಸೇವೆ, ಶಿಕ್ಷಣ, ಕ್ಯಾನ್ಸರ್ ಚಿಕಿತ್ಸೆ, ಕೌಶಲ ಅಭಿವೃದ್ಧಿ, ಮೂಲಸೌಕರ್ಯ ಹೀಗೆ ಅನೇಕ ವಲಯಗಳಿಗೆ ಅಪಾರ ಕೊಡುಗೆ ನೀಡುತ್ತಿದೆ. ದಾನ, ದೇಣಿಗೆಯಂತಹ ಸಮಾಜಮುಖಿ ಕಾರ್ಯಗಳಿಗೆಂದೇ ಟಾಟಾ ಹಲವು ಟ್ರಸ್ಟ್‌ಗಳನ್ನು ಹೊಂದಿದೆ. ಅವೆಲ್ಲವೂ ಸೇರಿ ಟಾಟಾ ಟ್ರಸ್ಟ್ಸ್ ಎಂದು ಹೆಸರಾಗಿವೆ. ಬದುಕಿರುವವರೆಗೆ ರತನ್ ಟಾಟಾ ಅವರೇ ಟಾಟಾ ಟ್ರಸ್ಟ್ಸ್‌ನ ಅಧ್ಯಕ್ಷರಾಗಿದ್ದರು. ರತನ್ ಸಾವಿನ ನಂತರ ಅವರ ಮಲ ಸಹೋದರ ನೋಯಲ್ ಟಾಟಾ ಅವರು ಇದರ ನೇತೃತ್ವ ವಹಿಸಿದ್ದಾರೆ.

ಬೃಹತ್ ಉದ್ಯಮ ಸಮೂಹ: ಟಾಟಾ ಟ್ರಸ್ಟ್ಸ್ ದಾನ–ಧರ್ಮ ದೇಣಿಗೆಗೆ ಸೀಮಿತವಾದ ಸಂಸ್ಥೆಗಳಲ್ಲ; ಅನೇಕ ಬೃಹತ್ ಉದ್ಯಮಗಳ ಮಾಲೀಕತ್ವ ಹೊಂದಿರುವ ಟಾಟಾ ಸನ್ಸ್‌ನಲ್ಲಿ ಇವು ಶೇ 66ರಷ್ಟು ಷೇರುಗಳನ್ನು ಹೊಂದಿದ್ದು, ನಿರ್ಣಾಯಕ ಎನಿಸಿವೆ. 100 ದೇಶಗಳಲ್ಲಿ ಕಾರ್ಯಾಚರಿಸುತ್ತಿರುವ 'ಟಾಟಾ ಸನ್ಸ್'ನ ಮೌಲ್ಯ ₹16 ಲಕ್ಷ ಕೋಟಿ ಎನ್ನುವುದು ಒಂದು ಅಂದಾಜು. ಆರ್ಥಿಕತೆಗೆ ಸಂಬಂಧಿಸಿದ ಬಹುತೇಕ ಎಲ್ಲ ವಲಯಗಳಲ್ಲೂ (ಟಾಟಾ ಕನ್ಸಲ್‌ಟೆನ್ಸಿ ಸರ್ವೀಸಸ್, ಟಾಟಾ ಸ್ಟೀಲ್, ಟಾಟಾ ಮೋಟರ್ಸ್, ಟಾಟಾ ಪವರ್, ಇಂಡಿಯನ್ ಹೋಟೆಲ್ಸ್ ಕಂಪನಿ, ಟಾಟಾ ಗ್ರಾಹಕ ಉತ್ಪನ್ನಗಳು ಇತ್ಯಾದಿ ಉಪ್ಪಿನಿಂದ ಹಿಡಿದು ಸೆಮಿಕಂಡಕ್ಟರ್‌ವರೆಗೆ) ಉದ್ಯಮಗಳನ್ನು ನಡೆಸುತ್ತಿರುವ 400 ಕಂಪನಿಗಳ ಮೇಲೆ ಅದು ನಿಯಂತ್ರಣ ಹೊಂದಿದೆ. ಹೀಗಾಗಿ ಟಾಟಾ ಟ್ರಸ್ಟ್ಸ್ ಮೇಲೆ ಹಿಡಿತ ಸಾಧಿಸುವುದು ಪ್ರತಿಷ್ಠೆಯ ಜತೆಗೆ ಲಕ್ಷಾಂತರ ಕೋಟಿ ರೂಪಾಯಿ ಮೊತ್ತದ ಉದ್ಯಮಗಳನ್ನು ನಿಯಂತ್ರಿಸುವ ವಿಚಾರವೂ ಆಗಿದೆ.

ಪ್ರಸ್ತುತ ಟಾಟಾ ಟ್ರಸ್ಟ್ಸ್ ಅಧ್ಯಕ್ಷರಾದ ನೋಯಲ್ ಟಾಟಾ ಮತ್ತು ಟ್ರಸ್ಟಿ ಮೆಹ್ಲಿ ಮಿಸ್ತ್ರಿ ನಡುವೆ ಟ್ರಸ್ಟ್ಸ್ ಮೇಲೆ ಹಿಡಿತ ಸಾಧಿಸಲು ಪೈಪೋಟಿ ನಡೆಯುತ್ತಿದೆ ಎನ್ನಲಾಗುತ್ತಿದೆ. ಮೆಹ್ಲಿ ಮಿಸ್ತ್ರಿ ಅವರು ಶಾಪೂರ್ಜಿ ಪಲ್ಲೊಂಜಿ ಕುಟುಂಬದೊಂದಿಗೆ ನಂಟು ಹೊಂದಿದವರಾಗಿದ್ದು, ಈ ಕುಟುಂಬವು ಟಾಟಾ ಸನ್ಸ್‌ನಲ್ಲಿ ಶೇ 18.37ರಷ್ಟು ಪಾಲು ಹೊಂದಿದೆ. ಹಲವು ತಿಂಗಳಿನಿಂದ ನೋಯಲ್ ಮತ್ತು ಮಿಸ್ತ್ರಿ ನಡುವೆ ಶೀತಲ ಸಮರ ನಡೆಯುತ್ತಿದ್ದು, ಸೆ.11ರಂದು ನಡೆದ ಟ್ರಸ್ಟಿಗಳ ಸಭೆಯಲ್ಲಿ ಅದು ಬಹಿರಂಗಗೊಂಡಿದೆ. ಟ್ರಸ್ಟಿಗಳಲ್ಲಿ ಎರಡು ಗುಂಪುಗಳಾಗಿದ್ದು, ಮಿಸ್ತ್ರಿ ಅವರ ಗುಂಪಿನಲ್ಲಿ ನಾಲ್ಕು ಮಂದಿ ಇದ್ದರೆ, ನೋಯಲ್ ಅವರ ಗುಂಪಿನಲ್ಲಿ ಮೂವರು ಇದ್ದಾರೆ. ನೋಯಲ್ ಅವರ ಗುಂಪಿನ ವಿಜಯ್ ಸಿಂಗ್ ಅವರು ಟಾಟಾ ಸನ್ಸ್‌ನ


ನೋಯಲ್ ಟಾಟಾ


ರತನ್ ಟಾಟಾ

ನಿರ್ದೇಶಕರಾಗಿ ಮರುನೇಮಕವಾಗುವುದನ್ನು ಮಿಸ್ತ್ರಿ ಗುಂಪು ತಡೆದರೆ, ಟಾಟಾ ಸನ್ಸ್‌ನ ನಿರ್ದೇಶಕರಾಗುವ ಮಿಸ್ತ್ರಿ ಅವರ ಪ್ರಯತ್ನವನ್ನು ನೋಯಲ್ ತಂಡವು ವಿರೋಧಿಸಿದೆ.

ಇದು ನೋಯಲ್ ಮತ್ತು ಮೆಹ್ಲಿ ಮಿಸ್ತ್ರಿ ಅವರ ನಡುವಿನ ಜಿದ್ದಾಜಿದ್ದಿಯಾಗಿರದೇ ಟಾಟಾ ಮತ್ತು ಶಾಪೂರ್ಜಿ ಪಲ್ಲೊಂಜಿ ಕುಟುಂಬಗಳ ನಡುವಿನ ಕಲಹದ ಮುಂದುವರಿದ ಭಾಗ ಎನ್ನುವ ವಿಶ್ಲೇಷಣೆಗಳು ಕೇಳಿಬಂದಿವೆ. ನೋಯಲ್ ಅವರು ಟ್ರಸ್ಟ್ಸ್ ಅನ್ನು ತಮ್ಮ ಸುಪರ್ದಿಗೆ ಪಡೆಯಲು ಹೊರಟಿರುವುದೇ ವಿವಾದಕ್ಕೆ ಕಾರಣ ಎಂದೂ ಹೇಳಲಾಗುತ್ತಿದೆ. ಇತ್ತ ಮೆಹ್ಲಿ ಮಿಸ್ತ್ರಿ ಅವರು ಇತರ ಟ್ರಸ್ಟಿಗಳೊಂದಿಗೆ ಸೇರಿ ಟ್ರಸ್ಟ್ಸ್ ಆಡಳಿತವನ್ನು ನಿಯಂತ್ರಿಸಲು ಯತ್ನಿಸುತ್ತಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ.

ನಾಲ್ಕು ಹುದ್ದೆ, ಎರಡು ಗುಂಪು: ಟಾಟಾ ಸಮೂಹ ಉದ್ಯಮಗಳ ಮೇಲೆ ಹಿಡಿತ ಹೊಂದಿರುವ ಟಾಟಾ ಸನ್ಸ್ ಆಡಳಿತ ಮಂಡಳಿಗೆ ಹೆಚ್ಚಿನ ಮಹತ್ವ ಇದೆ. ಅದರಲ್ಲಿ ಟಾಟಾ ಟ್ರಸ್ಟ್ಸ್‌ನಿಂದ ನಾಮನಿರ್ದೇಶನಗೊಂಡ ಮೂವರು ನಿರ್ದೇಶಕರು ಇರುತ್ತಾರೆ. ಪ್ರಸ್ತುತ ವಿಜಯ್ ಸಿಂಗ್ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದು, ನಾಲ್ಕು ಹುದ್ದೆಗಳು ಖಾಲಿ ಇವೆ ಎನ್ನಲಾಗುತ್ತಿದೆ. ಈ ಹುದ್ದೆಗಳನ್ನು ತುಂಬುವ ವಿಚಾರದಲ್ಲಿ ಎರಡು ಗುಂಪುಗಳ ನಡುವೆ ಪ್ರತಿಷ್ಠೆ ಮತ್ತು ಮೇಲಾಟ ನಡೆಯುತ್ತಿದ್ದು, ಇದು ಟಾಟಾ ಸಮೂಹದ ಉದ್ಯಮಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ.

ಟಾಟಾ ಸಮೂಹದ ಟಿಸಿಎಸ್, ಎರಡನೇ ತ್ರೈಮಾಸಿಕದ ವಹಿವಾಟಿನ ಮಾಹಿತಿ ನೀಡಲು ಗುರುವಾರ ಪತ್ರಿಕಾ ಗೋಷ್ಠಿ ಕರೆದಿತ್ತು. ನಂತರ ಅದನ್ನು ರದ್ದುಪಡಿಸಲಾಗಿದೆ. ರತನ್ ಟಾಟಾ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಕಾರಣಕ್ಕೆ ಸುದ್ದಿಗೋಷ್ಠಿ ರದ್ದುಪಡಿಸಲಾಗಿದೆ ಎಂದು ಕಂಪನಿ ಹೇಳಿದೆ. ಆದರೆ, ಆಂತರಿಕ ಕಲಹದ ಕಾರಣಕ್ಕೆ ಪತ್ರಿಕಾಗೋಷ್ಠಿಯನ್ನು ರದ್ದುಪಡಿಸಲಾಗಿದೆ ಎನ್ನುವ ಮಾತುಗಳಿವೆ.

ಆಧಾರ: ಪಿಟಿಐ, ರಾಯಿಟರ್ಸ್, ಟಾಟಾ ಟ್ರಸ್ಟ್ಸ್ ವೆಬ್‌ಸೈಟ್, ಮಾಧ್ಯಮ ವರದಿಗಳು

156 ವರ್ಷಗಳ ಇತಿಹಾಸ ಹೊಂದಿರುವ ಟಾಟಾ ಸಮೂಹವು ಭಾರತದ ಆರ್ಥಿಕತೆಯಲ್ಲಿ ಮಹತ್ವದ ಪಾತ್ರವಹಿಸುತ್ತಿದೆ. ಟಾಟಾ ಸನ್ಸ್ ಕಾರ್ಯನಿರ್ವಹಣೆಯ ಮೇಲೆ ಹಿಡಿತ ಹೊಂದಿರುವ ಟಾಟಾ ಟ್ರಸ್ಟ್ಸ್ ಆಡಳಿತ ಮಂಡಳಿಯಲ್ಲಿ ನಡೆಯುತ್ತಿರುವ ಬೆಳವಣಿಗೆಯು ಟಾಟಾ ಸಮೂಹದ ಕಂಪನಿಗಳ ಕಾರ್ಯಾಚರಣೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು. ಟಾಟಾ ಸಮೂಹದಲ್ಲಿ ಅಸ್ಥಿರತೆ ಉಂಟಾದರೆ ಅದು ದೇಶದ ಆರ್ಥಿಕ ಸ್ಥಿತಿಯ ಮೇಲೂ ಪರಿಣಾಮ ಬೀರಬಹುದು ಎಂಬ ಕಾರಣಕ್ಕೆ ಕೇಂದ್ರ ಸರ್ಕಾರ ಈ ವಿಚಾರದಲ್ಲಿ ಮಧ್ಯಪ್ರವೇಶಿಸಿದೆ.

ಕೇಂದ್ರದ ಮಧ್ಯಪ್ರವೇಶ

ಗೃಹ ಸಚಿವ ಅಮಿತ್ ಶಾ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಟಾಟಾ ಟ್ರಸ್ಟ್ಸ್ ಅಧ್ಯಕ್ಷ ನೋಯಲ್ ಟಾಟಾ, ಟಾಟಾ ಸನ್ಸ್ ಅಧ್ಯಕ್ಷ ಚಂದ್ರಶೇಖರನ್ ಮತ್ತು ಟಾಟಾ ಟ್ರಸ್ಟ್ಸ್‌ನ ಟ್ರಸ್ಟಿಗಳಾದ ವೇಣು ಶ್ರೀನಿವಾಸನ್ ಮತ್ತು ಡೇರಿಯಸ್ ಖಂಬಾಟ ಅವರು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಟ್ರಸ್ಟ್ಸ್‌ನ ಆಡಳಿತ ಮಂಡಳಿಯಲ್ಲಿನ ಆಂತರಿಕ ಕಲಹವನ್ನು ಬೇಗ ಇತ್ಯರ್ಥ ಪಡಿಸುವಂತೆ ಇಬ್ಬರೂ ಸಚಿವರು ಸೂಚಿಸಿದ್ದಾರೆ. ಒಳಜಗಳವು ಕಂಪನಿಗಳ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳುವಂತೆಯೂ ಸಲಹೆ ನೀಡಿದ್ದಾರೆ. ಆಡಳಿತ ಮಂಡಳಿಯನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿರುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆಯೂ ಸೂಚಿಸಿದ್ದಾರೆ ಎಂದು ಮೂಲಗಳನ್ನು ಉಲ್ಲೇಖಿಸಿ ಕೆಲವು ಮಾಧ್ಯಮಗಳು ವರದಿ ಮಾಡಿವೆ. ಟ್ರಸ್ಟ್ಸ್‌ನ ಟ್ರಸ್ಟಿಗಳ ಮತ್ತೊಂದು ಸಭೆ ಶುಕ್ರವಾರ ನಿಗದಿಯಾಗಿದೆ. ಸಭೆಯ ಕಾರ್ಯಸೂಚಿ ಏನು ಎಂಬುದು ಇನ್ನೂ ತಿಳಿದು ಬಂದಿಲ್ಲ. ಆದರೆ, ವಿವಾದ ಬಗೆಹರಿಸುವ ದಿಸೆಯಲ್ಲಿ ಚರ್ಚೆಗಳು ನಡೆಯಲಿವೆ ಎಂದು ಹೇಳಲಾಗುತ್ತಿದೆ.

₹902.32 ಕೋಟಿ
ಟಾಟಾ ಟ್ರಸ್ಟ್ಸ್ (Tata Trusts) 2024-25ರಲ್ಲಿ ಸಾಮಾಜಿಕ ಕಾರ್ಯಗಳಿಗೆ ನೀಡಿದ ಒಟ್ಟು ಮೊತ್ತ

₹753.13 ಕೋಟಿ
ಸಂಸ್ಥೆಗಳು ಹಾಗೂ ಟ್ರಸ್ಟ್ಸ್ ಕೈಗೊಂಡಿರುವ ವಿವಿಧ ಯೋಜನೆಗಳಿಗೆ ಪಾವತಿ ಮಾಡಿದ ಹಣ


₹149.19 ಕೋಟಿ
ಜನರಿಗೆ ವೈಯಕ್ತಿಕವಾಗಿ ನೀಡಿದ ಒಟ್ಟು ದೇಣಿಗೆ

ಟ್ರಸ್ಟ್ಸ್‌ನಲ್ಲಿ ಎಷ್ಟು ಟ್ರಸ್ಟ್‌ಗಳು?

ಟಾಟಾ ಟ್ರಸ್ಟ್ಸ್‌ನಲ್ಲಿ ಒಟ್ಟು 14 ಟ್ರಸ್ಟ್‌ಗಳಿವೆ. ಸರ್ ದೊರಾಬ್ಜಿ ಟಾಟಾ ಟ್ರಸ್ಟ್ (ಎಸ್‌ಡಿಟಿಟಿ) ಮತ್ತು ಸರ್ ರತನ್ ಟಾಟಾ ಟ್ರಸ್ಟ್ (ಎಸ್‌ಆರ್‌ಟಿಟಿ) ಎರಡು ಪ್ರಮುಖ ಟ್ರಸ್ಟ್‌ಗಳ ಅಡಿಯಲ್ಲಿ ಉಳಿದ ಟ್ರಸ್ಟ್‌ಗಳು ಬರುತ್ತವೆ. ಎಸ್‌ಡಿಟಿಟಿ ಅಡಿಯಲ್ಲಿ ಎಂಟು ಟ್ರಸ್ಟ್‌ಗಳು, ಎಸ್‌ಆರ್‌ಟಿಟಿಯ ಜೊತೆಗೆ ನಾಲ್ಕು ಟ್ರಸ್ಟ್‌ಗಳಿವೆ.

ಸರ್ ದೊರಾಬ್ಜಿ ಟಾಟಾ ಟ್ರಸ್ಟ್ ಜೊತೆಗೆ ಜಮ್‌ಶೆಡ್‌ಜೀ ಟಾಟಾ ಟ್ರಸ್ಟ್, ಟಾಟಾ ಎಜುಕೇಷನ್ ಟ್ರಸ್ಟ್, ಟಾಟಾ ಸೋಷಿಯಲ್ ವೆಲ್‌ಫೇರ್ ಟ್ರಸ್ಟ್, ಆರ್.ಡಿ.ಟಾಟಾ ಟ್ರಸ್ಟ್, ಲೇಡಿ ಟಾಟಾ ಮೆಮೋರಿಯಲ್ ಟ್ರಸ್ಟ್, ಜೆ.ಎನ್.ಟಾಟಾ ಎಂಡೋವ್‌ಮೆಂಟ್ ಫಾರ್ ದಿ ಹೈಯರ್ ಎಜುಕೇಷನ್ ಫಾರ್ ಇಂಡಿಯನ್ಸ್, ಜೆ.ಆರ್.ಡಿ ಆ್ಯಂಡ್ ಥೆಲ್ಮಾ ಜೆ.ಟಾಟಾ ಟ್ರಸ್ಟ್ ಮತ್ತು ಜೆ.ಆರ್.ಡಿ ಟಾಟಾ ಟ್ರಸ್ಟ್‌ಗಳು ಗುರುತಿಸಿಕೊಂಡಿವೆ. ಸರ್ ರತನ್ ಟಾಟಾ ಟ್ರಸ್ಟ್ ಜೊತೆಗೆ ಟಾಟಾ ಎಜುಕೇಷನ್ ಆ್ಯಂಡ್ ಡೆವಲಪ್‌ಮೆಂಟ್ ಟ್ರಸ್ಟ್, ನವಾಜ್‌ಬಾಯಿ ರತನ್ ಟಾಟಾ ಟ್ರಸ್ಟ್, ಬಾಯಿ ಹಿರಾಬಾಯಿ ಜೆಮ್‌ಶೆಡ್‌ಜೀ ಟಾಟಾ ನವ್‌ಸರಿ ಸಿಎಚ್ ಇನ್‌ಸ್ಟಿಟ್ಯೂಷನ್ಸ್ ಮತ್ತು ಸಾರ್ವಜನಿಕ ಸೇವಾ ಟ್ರಸ್ಟ್ ಸೇರಿವೆ.

ದೇಣಿಗೆ ಯಾವ ಕ್ಷೇತ್ರಕ್ಕೆ ಎಷ್ಟು? ಸಂಸ್ಥೆಗಳು, ವಿವಿಧ ಯೋಜನೆಗಳು (ಕೋಟಿ ₹ ಗಳಲ್ಲಿ)



(ಆವರಣದಲ್ಲಿ ಇರುವುದು ಒಟ್ಟು ದೇಣಿಗೆಯಲ್ಲಿ ಪಾಲು)

ಟಾಟಾ -ಮಿಸ್ತ್ರಿ ಕಲಹ

ಟಾಟಾ ಮತ್ತು ಮಿಸ್ತ್ರಿ ಕುಟುಂಬಗಳ ನಡುವೆ ಈ ಹಿಂದೆಯೂ ಕಲಹ ನಡೆದಿತ್ತು. 2012ರಿಂದ 2016ರವರೆಗೆ ಟಾಟಾ ಸನ್ಸ್ ಅಧ್ಯಕ್ಷರಾಗಿದ್ದ ಸೈರಸ್ ಮಿಸ್ತ್ರಿ ಅವರನ್ನು ಅಧ್ಯಕ್ಷ ಸ್ಥಾನದಿಂದ ರತನ್ ಟಾಟಾ ವಜಾ ಮಾಡಿದ್ದರು. ಇದನ್ನು ಪ್ರಶ್ನಿಸಿ ಮಿಸ್ತ್ರಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. 2021ರಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್ ಮಿಸ್ತ್ರಿ ವಜಾವನ್ನು ಎತ್ತಿ ಹಿಡಿದಿತ್ತು. 2022ರ ಸೆಪ್ಟೆಂಬರ್ 4ರಂದು ರಸ್ತೆ ಅಪಘಾತದಲ್ಲಿ ಸೈರಸ್ ಮಿಸ್ತ್ರಿ ಅವರು ನಿಧನರಾಗಿದ್ದರು.


ಸೈರಸ್ ಮಿಸ್ತ್ರಿ ಅವರು ಶಾಪೂರ್ಜಿ ಪಲ್ಲೊಂಜಿ ಸಮೂಹದ ಭಾಗವಾಗಿದ್ದರು. 2006ರವರೆಗೂ ಅವರ ತಂದೆ ಟಾಟಾದ ಆಡಳಿತ ಮಂಡಳಿಯಲ್ಲಿದ್ದರು. ಅವರ ನಿಧನದ ನಂತರ, ಸೈರಸ್ ಮಿಸ್ತ್ರಿ ಅವರು ಆಡಳಿತ ಮಂಡಳಿಗೆ ಸೇರ್ಪಡೆಗೊಂಡಿದ್ದರು. 2011ರಲ್ಲಿ ರತನ್ ಟಾಟಾ ಅವರು ಟಾಟಾ ಸನ್ಸ್ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಿದ ನಂತರ ಮಿಸ್ತ್ರಿ ಅವರನ್ನು ನೇಮಕ ಮಾಡಲಾಗಿತ್ತು. ಆದರೆ, ಅವರ ಕಾರ್ಯವೈಖರಿ ರತನ್ ಟಾಟಾ ಅವರಿಗೆ ಒಪ್ಪಿಗೆಯಾಗಿರಲಿಲ್ಲ ಎನ್ನಲಾಗಿತ್ತು. ಈ ಕಾರಣಕ್ಕೆ ಅವರನ್ನು ಹುದ್ದೆಯಿಂದ ವಜಾ ಮಾಡಲಾಗಿತ್ತು.

ದೇಶದ ಎರಡು ಬೃಹತ್ ಉದ್ಯಮಗಳನ್ನು ನಡೆಸುತ್ತಿರುವ ಕುಟುಂಬಗಳ ನಡುವಿನ ಈ ಕಲಹ ಭಾರಿ ಸುದ್ದಿ ಮಾಡಿತ್ತು.

ಈಗ ಟಾಟಾ ಟ್ರಸ್ಟ್ಸ್ ಟ್ರಸ್ಟಿಗಳಲ್ಲಿ ಒಬ್ಬರಾಗಿರುವ ಮೆಹ್ಲಿ ಮಿಸ್ತ್ರಿ ಅವರು ಸೈರಸ್ ಮಿಸ್ತ್ರಿ ಅವರ ಸಂಬಂಧಿ. ರತನ್ ಟಾಟಾ ಅವರಿಗೆ ಆಪ್ತರಾಗಿದ್ದವರು. ರತನ್ ಅವರು ಬರೆದಿದ್ದ ಉಯಿಲನ್ನು ಅನುಷ್ಠಾನಕ್ಕೆ (ವಿಲ್ ಎಕ್ಸಿಕ್ಯುಟರ್) ತಂದವರಲ್ಲಿ ಇವರೂ ಒಬ್ಬರಾಗಿದ್ದರು.


ಸೈರಸ್ ಮಿಸ್ತ್ರಿ

ಕ್ಷೇತ್ರವಾರು ವೈಯಕ್ತಿಕ ದೇಣಿಗೆ (ಕೋಟಿ ₹ಗಳಲ್ಲಿ)



(ಆವರಣದಲ್ಲಿರುವುದು ಒಟ್ಟು ದೇಣಿಗೆಯಲ್ಲಿ ಪಾಲು)

ರಾಷ್ಟ್ರೀಯ


ಆಂಧ್ರಪ್ರದೇಶದ ಕೋನಸೀಮಾ ಜಿಲ್ಲೆಯ ಪಟಾಕಿ ತಯಾರಿಕಾ ಘಟಕದಲ್ಲಿ ಬುಧವಾರ ಬೆಂಕಿ ಅವಘಡ ಸಂಭವಿಸಿದ್ದು ಬಾನೆತ್ತರಕ್ಕೆ ಹೊಗೆ ಆವರಿಸಿತ್ತು

ಪಟಾಕಿ ತಯಾರಿಕಾ ಘಟಕದಲ್ಲಿ ಬೆಂಕಿ: 7 ಜನರ ಸಾವು

ಪ್ರಜಾವಾಣಿ ವಾರ್ತೆ

ಹೈದರಾಬಾದ್ : ಆಂಧ್ರಪ್ರದೇಶದ ಬಿ.ಆರ್.ಅಂಬೇಡ್ಕರ್ ಕೋನಸೀಮಾ ಜಿಲ್ಲೆಯ ಪಟಾಕಿ ತಯಾರಿಕಾ ಘಟಕವೊಂದರಲ್ಲಿ ಬುಧವಾರ ಮಧ್ಯಾಹ್ನ ಸ್ಫೋಟ ಸಂಭವಿಸಿ ಉಂಟಾದ ಬೆಂಕಿ ಅವಘಡದಲ್ಲಿ ಏಳು ಮಂದಿ ಸಾವಿಗೀಡಾಗಿದ್ದು, ನಾಲ್ವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೋಮಾರಿಪಾಲೆಮ್ ಗ್ರಾಮದ ಲಕ್ಷ್ಮಿ ಗಣಪತಿ ಫೈರ್ ವರ್ಕ್ಸ್ ಪಟಾಕಿ ಉತ್ಪಾದನಾ ಘಟಕದಲ್ಲಿ ಈ ಘಟನೆ ನಡೆದಿದೆ. ಪ್ರಾಥಮಿಕ ವರದಿಗಳ ಪ್ರಕಾರ ಘಟನೆ ನಡೆದಾಗ ಘಟಕದಲ್ಲಿ 15 ಮಂದಿ ಇದ್ದರು. ಸ್ಫೋಟದ ತೀವ್ರತೆಗೆ ಘಟಕದ ಅಕ್ಕ-ಪಕ್ಕದ ಅಂಗಡಿಗಳೂ ಭಸ್ಮವಾಗಿವೆ.

ತಯಾರಿಕೆ ಪ್ರಕ್ರಿಯೆ ವೇಳೆ ಸ್ಫೋಟಕವೊಂದು ಸಿಡಿದ ಪರಿಣಾಮ ಬೆಂಕಿ ಕಾಣಿಸಿಕೊಂಡಿರಬಹುದು ಎಂದು ಅಗ್ನಿಶಾಮಕ ಸಿಬ್ಬಂದಿ ತಿಳಿಸಿದ್ದಾರೆ. ಸ್ಫೋಟಕ ಬೆರೆಸುವ ವೇಳೆ ಆದ ಪ್ರಮಾದ ಕಾರಣ ಇರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಮೃತರಲ್ಲಿ ಘಟಕದ ಮಾಲೀಕ ವೇಲುಗುಬಂತಿ ಸತ್ಯನಾರಾಯಣ, ಪಾಕ ಅರುಣ, ಚಿತ್ತೂರಿ ಶ್ಯಾಮಲಾ, ಕುಡಿಪುಡಿ ಜ್ಯೋತಿ, ಪಿ.ಶೇಷ ರತ್ನಮ್ ಗುರುತು ಪತ್ತೆಯಾಗಿದೆ. ಸುರಕ್ಷತಾ ಕ್ರಮಗಳನ್ನು ಉಲ್ಲಂಘಿಸಿದ್ದೇ ಘಟನೆಗೆ ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ರಷ್ಯಾ ಸೇನೆ ಸೇರಿದ್ದ ಗುಜರಾತ್ ಯುವಕ ಉಕ್ರೇನ್‌ಗೆ ಶರಣಾಗತಿ

ಮೊರ್ಬಿ (ಪಿಟಿಐ): ರಷ್ಯಾ ಸೇನೆಗೆ ಸೇರಿದ್ದ ಗುಜರಾತ್‌ನ ಯುವಕನೊಬ್ಬ ಉಕ್ರೇನ್ ಪಡೆಗಳ ಮುಂದೆ ಶರಣಾಗಿದ್ದಾನೆ. ಇಲ್ಲಿನ ಮಾಜೋಟಿ ಸಾಹಿಲ್ ಮೊಹಮ್ಮದ್ ಹುಸೇನ್ (22) ರಷ್ಯಾದ ಪರ ಯುದ್ಧದಲ್ಲಿ ಭಾಗವಹಿಸಿದ್ದ ಎಂದು ಗುಜರಾತ್ ಪೊಲೀಸರು ಬುಧವಾರ ತಿಳಿಸಿದ್ದಾರೆ.

'ಶಿಕ್ಷಣ ಪಡೆಯುವ ಸಲುವಾಗಿ ಹುಸೇನ್ ಕೆಲವು ವರ್ಷಗಳ ಹಿಂದೆ ರಷ್ಯಾಕ್ಕೆ ತೆರಳಿದ್ದ. ಬಳಿಕ ಡ್ರಗ್ಸ್ ಪ್ರಕರಣದಲ್ಲಿ ಸಿಲುಕಿ ಜೈಲು ಶಿಕ್ಷೆಗೆ ಗುರಿಯಾಗಿದ್ದ. ಈತ ಪಾಸ್‌ಪೋರ್ಟ್, ವೀಸಾ ಮತ್ತು ಅಲ್ಲಿನ ಸಂಪರ್ಕಗಳನ್ನು ಹೇಗೆ ಪಡೆದಿದ್ದ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಆದರೆ, ಹುಸೇನ್ ಕುಟುಂಬದ ಸದಸ್ಯರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

'ರಷ್ಯಾ ಸೇನಾಪಡೆ ಪರವಾಗಿ ಯುದ್ಧದಲ್ಲಿ ಭಾಗಿಯಾಗಿದ್ದ ಭಾರತೀಯ ಪ್ರಜೆಯೊಬ್ಬ ಶರಣಾಗಿದ್ದಾನೆ' ಎಂದು ಉಕ್ರೇನ್ ಸೇನೆಯು ತಿಳಿಸಿದೆ.

'ರಷ್ಯಾದಲ್ಲಿ ನನಗೆ ಏಳು ವರ್ಷ ಶಿಕ್ಷೆ ವಿಧಿಸಲಾಗಿತ್ತು. ಹೆಚ್ಚುವರಿ ಶಿಕ್ಷೆಯಿಂದ ವಿನಾಯಿತಿ ಪಡೆಯಲು ಒಪ್ಪಂದವೊಂದಕ್ಕೆ ಸಹಿ ಮಾಡಿಸಿಕೊಂಡಿದ್ದರು. ನನಗೆ ಜೈಲಿನಲ್ಲಿರಲು ಇಷ್ಟವಿರಲಿಲ್ಲ, ಅದಕ್ಕಾಗಿ ಒಪ್ಪಂದಕ್ಕೆ ಸಹಿ ಹಾಕಿದ್ದೆ. ಆದರೆ, ಈಗ ಇದರಿಂದ ಹೊರಬರಬೇಕು ಅನಿಸುತ್ತಿದೆ' ಎಂದು ಹುಸೇನ್ ಹೇಳಿಕೆ ನೀಡಿರುವ ವಿಡಿಯೊವನ್ನು ಉಕ್ರೇನ್ ಸೇನೆ ಬಿಡುಗಡೆಗೊಳಿಸಿದೆ.

16 ದಿನಗಳ ತರಬೇತಿ ಬಳಿಕ ಅ.1ರಂದು ಯುದ್ಧದಲ್ಲಿ ಭಾಗವಹಿಸಲು ಹುಸೇನ್‌ನನ್ನು ಕಳುಹಿಸಲಾಗಿತ್ತು. ಆತ ತನ್ನ ಕಮಾಂಡರ್‌ನೊಂದಿಗೆ ಉಕ್ರೇನ್‌ಗೆ ಶರಣಾಗಿದ್ದ.

'ಉಕ್ರೇನ್ ಸೇನೆಯನ್ನು ನೋಡಿದ ನಾನು ಶರಣಾಗಿದ್ದೇನೆ. ನನಗೆ ರಷ್ಯಾಕ್ಕೆ ಮರಳುವ ಇಚ್ಛೆ ಇಲ್ಲ. ನನಗೆ ಸಹಾಯ ಮಾಡಿ ಎಂದು ಮನವಿ ಮಾಡಿದ್ದೇನೆ' ಎಂದು ಹುಸೇನ್ ಹೇಳಿದ್ದಾನೆ.

ವಿದ್ಯಾರ್ಥಿ ಮತ್ತು ವಾಣಿಜ್ಯ ವೀಸಾ ಪಡೆದು ರಷ್ಯಾಕ್ಕೆ ತೆರಳಿರುವ ಹಲವಾರು ಭಾರತೀಯರನ್ನು ಬಲವಂತವಾಗಿ ಅಲ್ಲಿನ ಸೇನೆಗೆ ಸೇರಿಸಿಕೊಳ್ಳಲಾಗುತ್ತಿದೆ ಎಂದು ಕೆಲವು ವರದಿಗಳು ತಿಳಿಸಿವೆ.

'ಪ್ರಸ್ತುತ ರಷ್ಯಾ ಸೇನೆಯಲ್ಲಿರುವ 27 ಭಾರತೀಯರನ್ನು ಬಿಡುಗಡೆಗೊಳಿಸಿ, ಸ್ವದೇಶಕ್ಕೆ ಕಳುಹಿಸುವಂತೆ ರಷ್ಯಾಕ್ಕೆ ಆಗ್ರಹಿಸಲಾಗಿದೆ' ಎಂದು ವಿದೇಶಾಂಗ ಇಲಾಖೆ ಕಳೆದ ತಿಂಗಳು ಹೇಳಿತ್ತು.

ಕುದ್ಮುಲ್ ರಂಗರಾವ್

ನುಡಿ ಬೆಳಗು


ಪಿ.ಚಂದ್ರಿಕಾ

ಕುದ್ಮುಲ್ ರಂಗರಾವ್... ಈ ಹೆಸರನ್ನು ಕೇಳಿದವರು ಅಪರೂಪ. ಮಂಗಳೂರಿನ ಸಾರಸ್ವತ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ ತಮ್ಮ ಹುಟ್ಟಿನ ಮೂಲವನ್ನೂ ಮರೆತು ಸಮಸಮಾಜದ ಕನಸನ್ನು ಕಂಡು ಅದಕ್ಕೆ ತಕ್ಕಂತೆ ಬಾಳಿದವರು. ಇಡೀ ದೇಶ ಸ್ವಾತಂತ್ರ್ಯ ಚಳವಳಿಯ ಜತೆಗೆ ಸಾಗುವಾಗ, ಬ್ರಿಟಿಷರಿಂದ ಮಾತ್ರವಲ್ಲ ನಮ್ಮ ಮೌಢ್ಯದಿಂದಲೂ ಬಿಡುಗಡೆ ಬೇಕು ಎಂದು ಪ್ರತಿಪಾದಿಸಿದವರು. ಹಾಕಿದ್ದ ಜನಿವಾರವನ್ನು ಕಿತ್ತೆಸೆದು ಆಚರಣೆಗಳನ್ನು ಪಕ್ಕಕ್ಕೆ ಸರಿಸಿ ಸಮಾಜದ ಅತ್ಯಂತ ಕೆಳಸ್ತರದಲ್ಲಿ ಬದುಕುತ್ತಿದ್ದವರ ಏಳಿಗೆಗಾಗಿ ಶ್ರಮಿಸಿದವರು.

ಎಲ್ಲ ಅರ್ಹತೆ ಇದ್ದರೂ ದುರ್ಬಲ ಜಾತಿಯಲ್ಲಿ ಹುಟ್ಟಿದವನು ಎನ್ನುವ ಕಾರಣಕ್ಕೆ ಕೆಲಸ ಸಿಗದಿರುವುದನ್ನು ಕುದ್ಮುಲ್ ರಂಗರಾವ್ ಅವರು ಕಣ್ಣಾರೆ ಕಾಣುತ್ತಾರೆ. ಅದು ಅವರ ಮನಸ್ಸನ್ನು ಕದಡಿಬಿಡುತ್ತದೆ. ಅಂದು ಅವರ ವಿವೇಕಕ್ಕೆ ಹೊಳೆದದ್ದು, ತಾನು ಇಂಥವರ ಪರವಾಗಿ ನಿಲ್ಲಬೇಕು ಎನ್ನುವುದು. ಕುದ್ಮುಲ್ ಅವರನ್ನು ಸಮಾಜ ಬಹಿಷ್ಕರಿಸುತ್ತದೆ. ಯಾವ ಗೊಡ್ಡು ಬೆದರಿಕೆಗೂ ಹೆದರದೆ, ತನ್ನ ಹೆಣ್ಣುಮಕ್ಕಳಿಗೆ ಮದುವೆ ಮಾಡಲು ನಾಳೆ ಕಷ್ಟವಾಗಬಹುದು ಎನ್ನುವುದನ್ನೂ ಯೋಚಿಸದೇ ತಮ್ಮ ಕೆಲಸಗಳನ್ನು ಮುಂದುವರಿಸುತ್ತಾರೆ. ತಮ್ಮ ಹೆಣ್ಣುಮಕ್ಕಳನ್ನು ಗಂಡುಮಕ್ಕಳ ಶಾಲೆಗೆ ಕಳಿಸುತ್ತಾರೆ. ಅಂತರ್ಜಾತಿ ವಿವಾಹ, ವಿಧವಾ ವಿವಾಹಗಳನ್ನು ಮಾಡಿಸುತ್ತಾರೆ. ಗಾಂಧಿ ಅವರನ್ನು ನೋಡಿ ತಾನೂ ಹರಿಜನ ಉದ್ಧಾರ ಮಾಡಬೇಕು ಎನ್ನುವ ಮಹತ್ತರ ಆಶಯವನ್ನು ಕಟ್ಟಿಕೊಳ್ಳುತ್ತಾರೆ. ಡಿಪ್ರೆಸ್ಡ್ ಕ್ಲಾಸ್ ಮಿಷನ್ ಅನ್ನು ಸ್ಥಾಪಿಸಿ ಆ ಮೂಲಕ ದಲಿತರ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನೂ ಹಾಸ್ಟೆಲ್‌ಗಳನ್ನೂ ನಿರ್ಮಿಸುತ್ತಾರೆ. ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಡಿಸುತ್ತಾರೆ. ಸರ್ಕಾರವನ್ನೂ ವಿನಂತಿಸಿಕೊಳ್ಳುತ್ತಾರೆ; ಯಾರಾದರೂ ಹಣ ಕೊಟ್ಟರೆ ಅದರಿಂದ ಭೂಮಿ ಖರೀದಿಸಿ ಹಂಚುತ್ತಾರೆ. ತನ್ನದೇ ನೆಲದಲ್ಲಿ ಆಗಬೇಕಿರುವ ಬದಲಾವಣೆಗಳ ಕಡೆಗೆ ಮನ ನೆಡುತ್ತಾರೆ.

ತನ್ನ ಸಂಸ್ಥೆಯಲ್ಲಿ ಓದಿದ ದಲಿತ ಹುಡುಗನೊಬ್ಬ ಒಳ್ಳೆಯ ನೌಕರಿಯನ್ನು ಸಂಪಾದಿಸಿ ಕಾರಿನಲ್ಲಿ ಹೋಗುವಾಗ ಆ ಕಾರಿನ ದೂಳು ನನ್ನ ಹಣೆಗೆ ತಾಕಿದರೆ ಅದೇ ನನ್ನ ಪುಣ್ಯ ಎನ್ನುವುದು ಅವರ ಧ್ಯೇಯವಾಗಿತ್ತು. ತಾನು ಸತ್ತರೆ ತನ್ನ ಹೆಣವನ್ನು ಕೂಡಾ ದಲಿತರೇ ಹೊರಬೇಕು; ತನ್ನ ದೇಹದ ಮೇಲೆ ತನ್ನ ಜಾತಿಯ ಜನರಿಗೆ ಯಾವ ಹಕ್ಕೂ ಇಲ್ಲ ಎಂದು ವಿಲ್ ಮಾಡಿಸುತ್ತಾರೆ.

ಯಾರು ಬೇರೆಯವರಿಗೆ ಹೇಳುತ್ತಲೇ ತಮ್ಮನ್ನು ತಾವು ರೂಪಿಸಿಕೊಳ್ಳಲು ಸಾಧ್ಯವೊ ಅದು ದೊಡ್ಡ ವ್ಯಕ್ತಿತ್ವ. ಅಂಥವರು ತಮ್ಮನ್ನು ಮತ್ತು ಇತರರನ್ನೂ ನಿಗ್ರಹಿಸಬಲ್ಲರು. ಅಂಕೆಗೆ ಸಿಗದ ಸ್ವಾರ್ಥಕ್ಕೆ ಕಡಿವಾಣ ಹಾಕಿ ಸಮಾಜಕ್ಕೆ ಒಳಿತು ಮಾಡಬಲ್ಲರು. ಯಾಕೆಂದರೆ, ಬದುಕು ರಣರಂಗವಲ್ಲ, ಗೆಲುವೆನ್ನುವುದು ಗುರಿಯೂ ಅಲ್ಲ. ನಾನು ಹೇಳಿದಂತೆ ಬೇರೆಯವರು ಕೇಳಬೇಕೆನ್ನುವುದು ಅಹಂ. ನಾನು ನಡೆದದ್ದನ್ನು ನೋಡಿ ಇತರರು ನಡೆಯುವಂತಾದರೆ ಅದು ದೊಡ್ಡ ವಿನಯ. ಹಾಗೆ ಗೆದ್ದವರೇ ಕುದ್ಮುಲ್ ರಂಗರಾವ್.


ಸಮಾಜ, ಬಯಕೆ ಮತ್ತು ಸತ್ಯಗಳ ವೈರುಧ್ಯಗಳಿಂದ ಕೂಡಿದ್ದು, ಐಹಿಕ ಸುಖಗಳ ಬೆನ್ನುಬಿದ್ದಿದೆ. ಇಂತಹ ಪ್ರಾಪಂಚಿಕ ಬದುಕಿನಲ್ಲಿದ್ದುಕೊಂಡೇ ಸ್ವಾರ್ಥಪರತೆಯನ್ನು ಮೀರಿರುವ ಮಹನೀಯರು ನಮಗೆ ಹಾದಿ ಹಾಕಿಕೊಟ್ಟಿದ್ದಾರೆ. ನಿಸ್ವಾರ್ಥ ವಿವೇಚನೆ ನಮ್ಮ ಬದುಕನ್ನು ಹಸನಾಗಿಸಿ ಪೂರ್ಣತ್ವದ ಕಡೆಗೆ ಆ ಹಾದಿ ಸಾಗುವಂತೆ ಮಾಡಲಿ. ❖

ಪದಬಂಧ 6188

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಮುಟ್ಟಿದರೆ ತಗಲಿಕೊಳ್ಳುವ ಸ್ವಭಾವ (2)
4.ಬೇರೆಯವರನ್ನು ಆಶ್ರಯಿಸಿರುವವನು (5)
5.ದುಃಖ ಹೀಗೆ ಬಂದಿದೆ (3)
6.ಹೂವಿನಲ್ಲಿರುವ ಹುಡಿಯಿದು (3)
8.ಮಂಕ ಹಿಡಿದಿರುವ ಕಪ್ಪೆ (3)
9.ಮನಸ್ಸಿಗೆ ತಾಗುವಂಥದ್ದು (5)
10.ತಡ ಎಂದು ಹೀಗೆನ್ನಿ (3)
11.ಕುದುರೆಯನ್ನೇರುವ ಬಳೆ (3)
14.ನಕಾಸೆ ಮಾಡಿರುವ ಆಭರಣ (3)
15.ಹಿತವನ್ನು ಕುರಿತು ಚಿಂತಿಸುವವ ತಿರುಗಿದ್ದಾನಲ್ಲಾ! (5)
16.ಚಕ್ಕಡಿ ಇಲ್ಲಿದೆ (2)

ಮೇಲಿಂದ ಕೆಳಕ್ಕೆ
1.ಅಪ್ಪನ ಈ ರೂಪ ಬಹಳ ವಿರಳ! (4)
2.ನಾವೆಯನ್ನು ನಡೆಸುವವನು (3)
3.ರುಚಿಕಟ್ಟಾದ ಅಡುಗೆ (4)
7.ಮನವನ್ನು ಸೆಳೆದ ಲಕ್ಷ್ಯ (3)
8.ಕರಿಯ ಹತ್ತಿರವಿರಿಸಿದ ಬುಟ್ಟಿ (3)
10.ಅಂಕುಶವಿದ್ದರೂ ಹತೋಟಿಯಿಲ್ಲದ್ದು! (4)
12.ವೇದೋಕ್ತ ವಿಧಿಗಳನ್ನು ಮಾಡಿಸುವವನು (4)
13.ಸೈನ್ಯದ ಒಂದು ಭಾಗ (3)



6187ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ವನಸುಮ 8.ತವರೂರು
10.ಜಗ 11.ಹಾಡು
12.ಕಲರವ 14.ಯಜಮಾನ

ಮೇಲಿಂದ ಕೆಳಕ್ಕೆ:
1.ನಿರುಪಯೋಗ 2.ಪರಿಚಿತ 3.ನವ
4.ರಾಸು 6.ನವಿರು
7.ಮಲೆನಾಡು 9.ವಜೀರ
10.ಜಲಾಶಯ 11.ಹಾರಿಕೆ ಮಾತು
12.ಕಪಮಾ 13.ವನ್ಯಮೃಗ
15.ಜಟೆ 16.ನಟ

ಸುಡೊಕು 6572

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2	3	9			7	1		4
				3				
5		7	4		6	2		3
					5		3	1
	5	1		8			2	
3			9					8
		2		1		8		5
9			7		8			
	8			2		4	7	6

6571 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

09 ಅಕ್ಟೋಬರ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ತೃತೀಯ ಗಂ. 22-55 **ನಕ್ಷತ್ರ:** ಭರಣಿ ಗಂ. 20-03, **ಯೋಗ:** ವಜ್ರ ಗಂ. 21-32 **ಕರಣ:** ವಣಿಜ ಗಂ. 12-38 ಕನ್ಯಾ ಮಾಸದ 22 ನೇ ದಿನ. **ಮಳೆ ನಕ್ಷತ್ರ :** ಹಸ್ತಾ 4 ನೇ ಪಾದ , **ರಾಹುಕಾಲ :** ಮಧ್ಯಾಹ್ನ 01-30 03-00 **ಸೂರ್ಯೋದಯ :** 06-24 **ಸೂರ್ಯಾಸ್ತ :** 06-12, **ಮುಸ್ಲಿಂ ದಿನಾಂಕ :** 16 ರಬಿಯುಸ್ಸಾನಿ , **ಅದೃಷ್ಟ ಸಂಖ್ಯೆ :** 2, 3

ಮೇಷ: ಉದ್ಯೋಗದಲ್ಲಿ ಹೆಚ್ಚಿನ ಅಧಿಕಾರ ಪಡೆದುಕೊಳ್ಳುವ ಸಂದರ್ಭ ಇದೆ. ಮನೆ ಕಟ್ಟಲು ಅಥವಾ ನವೀಕರಿಸಲು ಹಣದ ವ್ಯವಸ್ಥೆಯಾಗಲಿದೆ. ತಾಯಿಯ ಆರೋಗ್ಯದಲ್ಲಿ ಸುಧಾರಣೆ ಕಾಣುವುದು.

ವೃಷಭ: ಮನೆಯ ವ್ಯವಹಾರಗಳು ಒಂದು ಹಂತ ತಲುಪುತ್ತವೆ. ಸ್ನೇಹಿತರ ಮೇಲಿನ ದೃಷ್ಟಿಕೋನ ಬದಲಾಯಿಸುವುದರಿಂದ ಅನುಕೂಲ. ಉತ್ತಮ ಧನಾಗಮನವಿದ್ದೂ ಸಂತಸ ಹೆಚ್ಚಲಿದೆ. ಯೋಜನೆಗಳಿಗೆ ಶೀಘ್ರ ಫಲಿತಾಂಶ ಸಿಗಲಿದೆ.

ಮಿಥುನ: ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಪ್ರಕ್ರಿಯೆ ಆರಂಭಗೊಳ್ಳಲಿದೆ. ಹಿರಿಯರ ಆಶೀರ್ವಾದದಿಂದ ಕಾರ್ಯಗಳಲ್ಲಿ ಜಯ. ಸಹೋದ್ಯೋಗಿಗಳ ಸಂಯಮದ ವರ್ತನೆಯಿಂದ ಅನುಕೂಲವಾಗಲಿದೆ.

ಕರ್ಕಾಟಕ: ಇಂದಿನ ಎಲ್ಲಾ ಬೆಳವಣಿಗೆಯಲ್ಲಿ ನಾಯಕತ್ವ ವಹಿಸುವುದರಿಂದ ಕೆಟ್ಟ ಜನಗಳ ದೃಷ್ಟಿದೋಷಕ್ಕೆ ಗುರಿಯಾಗಲಿದ್ದೀರಿ. ವಿದ್ಯಾರ್ಥಿಗಳ ಮನೋಕಾಮನೆ ಪೂರ್ಣಗೊಳ್ಳಲಿದೆ.

ಸಿಂಹ: ದೇವರ ಅನುಗ್ರಹದಿಂದ ಎಲ್ಲಾ ಕೆಲಸದಲ್ಲೂ ಜಯಶಾಲಿಯಾಗುವ ಲಕ್ಷಣವಿರುವುದು. ರಾಜಕಾರಣಿಗಳು ಸುತ್ತಲಿನ ಜನರ ಸಹಾಯ ಪಡೆಯುವಲ್ಲಿ ಸೋಲನ್ನು ಕಾಣುವ ಸ್ಥಿತಿ ಬರಲಿದೆ.

ಕನ್ಯಾ: ಧೀಮಂತರ ಸಹಕಾರದಿಂದ ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಉತ್ತಮವಾಗಿ ನೆರವೇರಿಸಿಕೊಳ್ಳುವಿರಿ. ಅನಿರೀಕ್ಷಿತ ಕೆಲಸಗಳಿಂದ ಸಂತಸ ಹೆಚ್ಚುವುದು. ಆತ್ಮವಿಶ್ವಾಸ ಹೆಚ್ಚುವುದು.

ತುಲಾ: ವ್ಯವಹಾರಗಳಲ್ಲಿ ಜಯ ಇರಲಿದೆ. ಮಕ್ಕಳ ಜೊತೆ ದೂರದ ಪ್ರವಾಸ ಸಾಧ್ಯತೆ. ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಹಣಕಾಸು ನಿರ್ವಹಣೆಯಲ್ಲಿ ಕುಶಲಮತಿ ಸಹಾಯಕ್ಕೆ ಬರಲಿದೆ.

ವೃಶ್ಚಿಕ: ಹಿಂದೆ ರೂಪಿಸಿದ್ದ ಯೋಜನೆಗಳು ಯಶಸ್ಸು ಕಾಣುವುದನ್ನು ಕಂಡು ಸಂತಸಪಡುವಿರಿ. ಮಕ್ಕಳ ಓದಿನ ವಿಷಯದಲ್ಲಿ ಗಮನ ಕೊಡಿ. ವಿದ್ಯಾರ್ಥಿಗಳಿಗೆ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಲು ಅವಕಾಶಗಳಿವೆ.

ಧನು: ನ್ಯಾಯವಾದಿಗಳಿಗೆ ಉತ್ತಮ ದಿನ. ನಿರುದ್ಯೋಗಿಗಳಿಗೆ ಅನಿರೀಕ್ಷಿತ ಉದ್ಯೋಗ ಫಲ. ಬಂಧುಗಳಿಂದ ಮನೆಯಲ್ಲಿ ಉಂಟಾದ ಸಹೋದರರ ದ್ವೇಷ ಮನೋಭಾವಗಳು ಸರಿಯಾಗಲಿವೆ.

ಮಕರ: ಅಭಿವೃದ್ಧಿಗೆ ಬೇಕಾದ ಅದ್ಭುತ ಅವಕಾಶ ಸಿಗಲಿದೆ. ಕೆಲಸ-ಕಾರ್ಯವನ್ನು ಜಾಣ್ಮೆಯಿಂದ ಸೂಕ್ಷ್ಮವಾಗಿ ನಿರ್ವಹಿಸುವ ಬುದ್ಧಿವಂತಿಕೆಯನ್ನು ತೋರುವಿರಿ.

ಕುಂಭ: ಹಳೆಯ ದುರ್ಘಟನೆಗಳನ್ನು ಮರೆತು ಭವಿಷ್ಯದತ್ತ ಗಮನ ಹರಿಸಿ. ಆರ್ಥಿಕವಾಗಿ ಚೇತರಿಕೆ ಕಂಡುಬರದಿದ್ದರೂ ಜೀವನಕ್ಕೆ ಕೊರತೆ ಇರಲಾರದು. ಮಕ್ಕಳನ್ನು ವಂಚನೆ ಕಡೆಗೆ ಕರೆದೊಯ್ಯದಂತೆ ಗಮನಹರಿಸಿ.


ಮೀನ: ಹೊಸದಾಗಿ ಉದ್ಯೋಗಕ್ಕೆ ಸೇರಲು ಸಿದ್ಧತೆ ನಡೆಸುವಿರಿ. ತಂದೆಯಾಗಲಿರುವ ಸುದ್ದಿ ಕೇಳಿ ಸಂಭ್ರಮಿಸುವಿರಿ. ಅನಿರೀಕ್ಷಿತ ಪ್ರಯಾಣದ ಸಂಭವ. ಮಕ್ಕಳಿಗೆ ವ್ಯವಹಾರ ಒಪ್ಪಿಸಿ ನೆಮ್ಮದಿಯಿಂದ ಇರಲು ಇಚ್ಛಿಸುವಿರಿ.

ಗುಂಡಣ್ಣ



ಗುರುವಾರ • ಅಕ್ಟೋಬರ್ 9, 2025
ಪ್ರಜಾವಾಣಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,108
ಇಂದಿನ ಅಂತ್ಯ:	25,046
ದಿನದ ಕನಿಷ್ಠ:	25,008
	62

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹560
12 ಕ್ಕೆ	₹75
ಮೈಸೂರು: 100 ಕ್ಕೆ	₹570

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಕೆ.ಜಿ)	₹412-646
ದ್ವಿತಳಿ(ಕೆ.ಜಿ)	₹480-800

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)	
ಆರ್‌ಎಸ್‌ಎಸ್-4	₹182
ಆರ್‌ಎಸ್‌ಎಸ್-5	₹177
ಗುಡ್ ಲಾಟ್	₹164

ಮುಂಬೈ ಖಾದ್ಯ ತೈಲ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1370 (1350)
ಸೂರ್ಯ (ರಿಫೈನ್ಡ್)	₹1290 (1280)
ಸೂರ್ಯಕಾಂತಿ (ರಿಫೈನ್ಡ್)	₹1460 (1435)
ವನಸ್ಪತಿ	₹1290 (1275)

ಮುದ್ರೆಮನೆ ಕಾಫಿ (50 ಕೆಜಿಗೆ)	
ಎಪಿ	₹29000
ಎಸಿ	₹15125
ಆರ್‌ಪಿ	₹19750
ಆರ್‌ಸಿ	₹11250

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ತೀರ್ಥಹಳ್ಳಿ	
ಬೆಟ್ಟೆ	40299-50109	ಬೆಟ್ಟೆ	58599-69619	ಇತ್ತಬೆಟ್ಟೆ	36099-53699
ಚಾಲಿ	38899-46233	ಗೊರಬಲು	19000-43109	**ಶಿರಸಿ**	
ಚಿಪ್ಪು	27089-33339	ಹೊಸತು	62399-64299	ಬೆಟ್ಟೆ	30699-51899
ಕೋಕ	8769-28089	ರಾಶಿ	50038-64919	ಬಿಳೆಗೋಟು	30001-37399
ಫ್ಯಾಕ್ಟರಿ	7589-26899	ಸರಕು	58099-96696	ಚಾಲಿ	40018-45999
ಹಸ ಚಾಲಿ	41099-45198	**ಸಿದ್ದಾಪುರ**		ಕೆಂಪುಗೋಟು	28299-34609
ಸಾಗರ		ಬಿಳೆಗೋಟು	24599-33589	ರಾಶಿ	50699-57809
ಬಿಳೆಗೋಟು	25989-26299	ಚಾಲಿ	36719-44999	**ಪುತ್ತೂರು**	
ಚಾಲಿ	35599-40270	ಕೋಕ	20619-30399	ಕೋಕ	18000-28500
ಕೆಂಪುಗೋಟು	38899-38899	ಕೆಂಪುಗೋಟು	22000-32119	ಹೊಸತು	26000-35000
ರಾಶಿ	49899-61319	ರಾಶಿ	45099-57599	ಹಳತು	37500-52500
ಸಿಪ್ಪೆಗೋಟು	22469-22669				

ಮುಂಬೈ ಧಾರಣೆ (ಶೇಂಗಾ)

08-10-2025

ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1380 (1360)
ಒಂದು ವಾರದ ಡೆಲಿವರಿ	1375 (1355)
ಪಾಮ್ ವಾರದ ಡೆಲಿವರಿ	1288 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,21,600 (1,19,400)
ಬೆಳ್ಳಿ ಕೆ.ಜಿಗೆ	1,52,900 (1,49,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ

ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1600
ಮಧ್ಯಮ	₹700-1200
ಸಣ್ಣ	₹200-500

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹17000-20000
ಪುತ್ತೂರು	₹6000-25000


‘ಸುಧಾರಣಾ ಪ್ರಕ್ರಿಯೆಗೆ ವೇಗ’

‘1 ಜಿ.ಬಿ. ಡೇಟಾ ಬೆಲೆಯು ಈಗ ಒಂದು ಕಪ್ ಚಹಾದ ಬೆಲೆಗಿಂತ ಕಡಿಮೆ’

ನವದೆಹಲಿ (ಪಿಟಿಐ): ವಿವಿಧ ವಲಯಗಳಲ್ಲಿನ ತಯಾರಿಕಾ ಚಟುವಟಿಕೆ ಭಾರತದಲ್ಲಿಯೇ ನಡೆಯಬೇಕು ಎಂದು ಮತ್ತೊಮ್ಮೆ ಹೇಳಿದ ಪ್ರಧಾನಿ ನರೇಂದ್ರ ಮೋದಿ ಅವರು, ಸುಧಾರಣಾ ಪ್ರಕ್ರಿಯೆಗಳಿಗೆ ಕೇಂದ್ರ ಸರ್ಕಾರವು ವೇಗ ನೀಡುತ್ತಿದೆ ಎಂದರು.

ಮೊಬೈಲ್ ತಯಾರಿಕೆಯಿಂದ ಆರಂಭಿಸಿ ಸೆಮಿಕಂಡಕ್ಟರ್ ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳವರೆಗೆ ಎಲ್ಲವೂ ಭಾರತದಲ್ಲೇ ತಯಾರಾಗಬೇಕು ಎಂಬ ಆಶಯವನ್ನು ಅವರು ಹೇಳಿದರು. ಭಾರತವು ಹೂಡಿಕೆಗೆ ಅತ್ಯುತ್ತಮವಾದ ಅವಕಾಶಗಳನ್ನು ನೀಡುತ್ತಿದೆ ಎಂದರು.

‘ಭಾರತೀಯ ಮೊಬೈಲ್ ಕಾಂಗ್ರೆಸ್’ ಉದ್ಘಾಟಿಸಿ ಮಾತನಾಡಿದ ಅವರು, ‘ಭಾರತದ ಪ್ರಜಾತಾಂತ್ರಿಕ ವ್ಯವಸ್ಥೆ, ಹೂಡಿಕೆಗಳನ್ನು ಸ್ವಾಗತಿಸುವ ಸರ್ಕಾರದ ನಿಲುವು, ಉದ್ಯಮ ನಡೆಸುವುದನ್ನು ಸುಲಲಿತವಾಗಿಸುವ ನೀತಿಗಳು ಭಾರತವು ಹೂಡಿಕೆದಾರ ಸ್ನೇಹಿ ತಾಣ ಎಂಬ ಹೆಸರು ಗಳಿಸುವಂತೆ ಮಾಡಿವೆ’ ಎಂದು ಹೇಳಿದರು.


ನರೇಂದ್ರ ಮೋದಿ

‘ಭಾರತದಲ್ಲಿ ಹೂಡಿಕೆ ಮಾಡಲು, ಭಾರತದಲ್ಲೇ ತಯಾರಿಸಲು ಮತ್ತು ಪ್ರಪಂಚಕ್ಕೆ ರಫ್ತು ಮಾಡಲು ಇದು ಪ್ರಶಸ್ತವಾದ ಸಮಯ’ ಎಂದು ಮೋದಿ ಅವರು ಹೇಳಿದರು.

ದೊಡ್ಡ ಮಟ್ಟದ ಬದಲಾವಣೆಗಳನ್ನು ಹಾಗೂ ದೊಡ್ಡಮಟ್ಟದ ಸುಧಾರಣೆಗಳ ವರ್ಷ ಇದಾಗಿರಲಿದೆ ಎಂದು ತಾವು ಆಗಸ್ಟ್ 15ರಂದು ಘೋಷಿಸಿದ್ದನ್ನು ಮೋದಿ ನೆನಪಿಸಿದರು. ‘ಸುಧಾರಣೆಗಳ ವೇಗವನ್ನು ಇನ್ನಷ್ಟು ಹೆಚ್ಚಿಸುತ್ತಿದ್ದೇವೆ’ ಎಂದು ಅವರು ಹೇಳಿದರು. ಆದರೆ ಈ ಕುರಿತಾಗಿ ಹೆಚ್ಚಿನ ವಿವರ ನೀಡಲಿಲ್ಲ.

ಸೆಮಿಕಂಡಕ್ಟರ್, ಮೊಬೈಲ್ ಮತ್ತು ಎಲೆಕ್ಟ್ರಾನಿಕ್ಸ್‌ಗಳ ತಯಾರಿಕಾ ವಲಯದಲ್ಲಿ ಭಾರತವು ಅಗಾಧ ಅವಕಾಶಗಳನ್ನು ನೀಡುತ್ತಿದೆ. ಉದ್ಯಮ ಕ್ಷೇತ್ರ, ನವೋದ್ಯಮಗಳು ಈಗ ಮುಂದಡಿ ಇರಿಸಬೇಕು ಎಂದರು.

ಡಿಜಿಟಲ್ ಜಗತ್ತಿನಲ್ಲಿ ಭಾರತವು ಒಂದು ದಶಕದಲ್ಲಿ ಸಾಧಿಸಿದ ಪ್ರಗತಿಯನ್ನು ಉಲ್ಲೇಖಿಸಿದ ಪ್ರಧಾನಿ, ಭಾರತದಲ್ಲಿ 1 ಜಿ.ಬಿ. ಡೇಟಾ ಬೆಲೆಯು ಈಗ ಒಂದು ಕಪ್ ಚಹಾದ ಬೆಲೆಗಿಂತ ಕಡಿಮೆ ಆಗಿದೆ ಎಂದರು. ‘ಡಿಜಿಟಲ್ ಸಂಪರ್ಕವು ಇಂದು ಭಾರತದಲ್ಲಿ ಐಷಾರಾಮದ ಸಂಗತಿಯಾಗಿ ಉಳಿದಿಲ್ಲ. ಅದು ಈಗ ಪ್ರತಿ ಭಾರತೀಯನ ಅವಿಭಾಜ್ಯ ಅಂಗವಾಗಿದೆ’ ಎಂದು ಬಣ್ಣಿಸಿದರು.

ಸುದ್ದಿ 2 ನಿಮಿಷ

ಒಳಗೊಳ್ಳುವಿಕೆಗೆ ಫಿನ್‌ಟೆಕ್ ನೆರವು ಬೇಕು: ಮಲ್ಹೋತ್ರಾ

ಮುಂಬೈ (ಪಿಟಿಐ): ದೇಶವು ಹಣಕಾಸಿನ ಒಳಗೊಳ್ಳುವಿಕೆಯ ಗುರಿಯನ್ನು ತಲುಪಲು ಫಿನ್‌ಟೆಕ್ ಕಂಪನಿಗಳು ನೆರವಾಗಬೇಕು, ಎಲ್ಲರಿಗೂ ಸುಲಭವಾಗಿ ಲಭ್ಯವಾಗುವ ಉತ್ಪನ್ನಗಳನ್ನು ಅವು ರೂಪಿಸಬೇಕು ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಕರೆ ನೀಡಿದ್ದಾರೆ.

ಜಾಗತಿಕ ಫಿನ್‌ಟೆಕ್ ಉತ್ಸವದಲ್ಲಿ ಮಾತನಾಡಿದ ಅವರು, ಡಿಜಿಟಲ್ ವಂಚನೆಗಳು ಹೆಚ್ಚಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು.

ಗ್ರಾಹಕ ಕೇಂದ್ರಿತ ನಡೆಯನ್ನು ಫಿನ್‌ಟೆಕ್ ಕಂಪನಿಗಳು ತಮ್ಮದಾಗಿಸಿಕೊಳ್ಳಬೇಕು ಎಂದು ಹೇಳಿದರು. ‘ಬಳಸಲು ಸುಲಭವಾಗುವ, ಎಲ್ಲರಿಗೂ ಲಭ್ಯವಾಗುವ, ನೆರವಿಗೆ ಬರುವ ತಂತ್ರಜ್ಞಾನವನ್ನು ಹೊಂದಿರುವ ಉತ್ಪನ್ನಗಳನ್ನು ರೂಪಿಸಬೇಕು. ಅಲ್ಲದೆ, ಹಿರಿಯ ನಾಗರಿಕರು, ಕಡಿಮೆ ಮಟ್ಟದ ಡಿಜಿಟಲ್ ಸಾಕ್ಷರತೆ ಇರುವವರಿಗೆ ಇವುಗಳ ಬಳಕೆ ಕಷ್ಟವಾಗುವಂತೆ ಆಗಬಾರದು’ ಎಂದು ಕಿವಿಮಾತು ಹೇಳಿದರು.



ದೇಶದ ಫಿನ್‌ಟೆಕ್ ಕ್ಷೇತ್ರವು ಬಹಳ ಚೈತನ್ಯಶಾಲಿಯಾಗಿದೆ. ಫಿನ್‌ಟೆಕ್ ಉದ್ಯಮವು ಹಣಕಾಸಿನ ಸೇವೆಗಳನ್ನು ದೊಡ್ಡ ಪ್ರಮಾಣದಲ್ಲಿ, ಕಡಿಮೆ ವೆಚ್ಚದಲ್ಲಿ ಒದಗಿಸುವುದನ್ನು ಸಾಧ್ಯವಾಗಿಸಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

‘500 ದುರಸ್ತಿ ಸೇವೆ ಕೇಂದ್ರ ಆರಂಭಿಸುವ ಗುರಿ’

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಾಹನಗಳಿಗೆ ದುರಸ್ತಿ ಸೇವೆ ಒದಗಿಸುವ (ಸರ್ವಿಸ್ ವರ್ಕ್‌ಶಾಪ್) 500 ಕೇಂದ್ರಗಳನ್ನು ಆರಂಭಿಸಲು ಯೋಜಿಸಿರುವುದಾಗಿ ವಾಹನ ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ ಬುಧವಾರ ಹೇಳಿದೆ.

ತಮಿಳುನಾಡಿನ ಕೊಯಮತ್ತೂರಿನಲ್ಲಿ ತನ್ನ 5 ಸಾವಿರದ ಅರೆನಾ ಸೇವಾ ಕೇಂದ್ರ ಸ್ಥಾಪಿಸುವುದಾಗಿ ಘೋಷಿಸಿದೆ.

ಕಳೆದ ಆರ್ಥಿಕ ವರ್ಷದಲ್ಲಿ ವಾಹನಗಳಿಗೆ ದುರಸ್ತಿ ಸೇವೆ ಒದಗಿಸುವ 460 ಕೇಂದ್ರಗಳನ್ನು ಆರಂಭಿಸಲಾಗಿತ್ತು. ಪ್ರಸಕ್ತ ಆರ್ಥಿಕ ವರ್ಷದಲ್ಲಿ 500 ಕೇಂದ್ರಗಳನ್ನು ಆರಂಭಿಸಲು ಉದ್ದೇಶಿಲಾಗಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹಿಸಾಶಿ ತಕೆಯುಚಿ ಹೇಳಿದ್ದಾರೆ.

ಈ ಹೊಸ ಕೇಂದ್ರಗಳನ್ನು ಸೇರ್ಪಡೆ ಮಾಡಿಕೊಳ್ಳುವುದರಿಂದ ಕಂಪನಿಯ ಒಟ್ಟು ಕೇಂದ್ರಗಳ ಸಂಖ್ಯೆ 5,640ಕ್ಕೂ ಹೆಚ್ಚು ಆಗಲಿದೆ. ದೇಶದ 2,818 ನಗರಗಳಲ್ಲಿ ಈ ಕೇಂದ್ರಗಳು ಇವೆ ಎಂದು ಹೇಳಿದ್ದಾರೆ.

ಪ್ರಸಕ್ತ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ದೇಶದಾದ್ಯಂತ 1.4 ಕೋಟಿಗೂ ಹೆಚ್ಚು ವಾಹನಗಳಿಗೆ ಕಂಪನಿಯು ಸೇವೆ ಒದಗಿಸಿದೆ. ಕಳೆದ ಪೂರ್ಣ ಆರ್ಥಿಕ ವರ್ಷದಲ್ಲಿ 2.7 ಕೋಟಿಗೂ ಹೆಚ್ಚು ವಾಹನಗಳಿಗೆ ದುರಸ್ತಿ ಸೇವೆ ನೀಡಿತ್ತು.

ಕೆನರಾ ಬ್ಯಾಂಕ್ ಅಧಿಕಾರಿಗಳ ಸಂಘದ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನರಾ ಬ್ಯಾಂಕ್ ಅಧಿಕಾರಿಗಳ ಸಂಘದ ಸದಸ್ಯರ ಸಭೆಯು ಇಲ್ಲಿ ಮಂಗಳವಾರ ನಡೆಯಿತು.

ಸಂಘದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕೆ. ರವಿ ಕುಮಾರ್ ಅವರು ಸಭೆಯಲ್ಲಿ ಮಾತನಾಡಿ, ಭವಿಷ್ಯದ ಗುರಿಗಳ ಬಗ್ಗೆ ವಿವರಿಸಿದರು.

ಸಭೆಯನ್ನು ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಭವೇಂದ್ರ ಕುಮಾರ್ ಉದ್ಘಾಟಿಸಿದರು. ಬೆಂಗಳೂರು ವೃತ್ತದ ಮುಖ್ಯಸ್ಥ ಹಾಗೂ ಮುಖ್ಯ ಮಹಾ ಪ್ರಬಂಧಕ ಮಹೇಶ್ ಎಂ. ಪೈ ಸಭೆಯನ್ನು ಉದ್ದೇಶಿಸಿ ಮಾತನಾಡಿದರು ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರು, ಮೈಸೂರು, ಮಂಡ್ಯ, ಕೋಲಾರ, ದೇವನಹಳ್ಳಿ ಮತ್ತು ತುಮಕೂರಿನಿಂದ ಬಂದಿದ್ದ ಸರಿಸುಮಾರು 350 ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಚಿನ್ನ ₹2,600, ಬೆಳ್ಳಿ ₹3 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹2,600 ಹೆಚ್ಚಳವಾಗಿ, ₹1,26,600ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1.26 ಲಕ್ಷವಾಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹3 ಸಾವಿರ ಜಿಗಿತವಾಗಿ, ₹1.57 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

‘ಉಕ್ರೇನ್‌ನ ಬಿಕ್ಕಟ್ಟು ಇದೆ, ಫ್ರಾನ್ಸ್ ಮತ್ತು ಜಪಾನ್‌ನಲ್ಲಿನ ರಾಜಕೀಯ ಅಸ್ಥಿರತೆ ಇದೆ. ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಿಸಿದೆ. ಇದು ಚಿನ್ನದ ದರ ಏರಿಕೆಗೆ ಕಾರಣ’ ಎಂದು ಕೋಟಕ್ ಸೆಕ್ಯುರಿಟೀಸ್‌ನ ಕೈನಾತ್ ಚೈನ್‌ವಾಲಾ ಹೇಳಿದ್ದಾರೆ.

ತ್ವರಿತಗತಿಯಲ್ಲಿ ಅನುಮೋದನೆಗೆ ಸರ್ಕಾರಕ್ಕೆ ಕ್ರೆಡಾಯ್ ಒತ್ತಾಯ

‘ಇ–ಖಾತಾ ವಿಳಂಬದಿಂದ ಸಮಸ್ಯೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇ-ಖಾತಾ ನೀಡುವಲ್ಲಿ ವಿಳಂಬ ಸೇರಿದಂತೆ ಸರ್ಕಾರದ ಕೆಲ ನಿಯಮಗಳಿಂದ ಕಟ್ಟಡಗಳಿಗೆ ಅನುಮೋದನೆ ದೊರೆಯಲು ವಿಳಂಬವಾಗುತ್ತಿದೆ. ಇದರಿಂದಾಗಿ ಮನೆ ಖರೀದಿಸಲು ಬಯಸುವವರು ಖರೀದಿಯಿಂದ ದೂರ ಸರಿಯುತ್ತಿದ್ದಾರೆ. ಸರ್ಕಾರ ತ್ವರಿತಗತಿಯಲ್ಲಿ ಅನುಮೋದನೆ ನೀಡುವಂತಾದರೆ ರಿಯಲ್ ಎಸ್ಟೇಟ್ ವಲಯಕ್ಕೆ ಅನುಕೂಲ ಆಗಲಿದೆ’ ಎಂದು ಕ್ರೆಡಾಯ್ ಕರ್ನಾಟಕದ ಅಧ್ಯಕ್ಷ ಭಾಸ್ಕರ್ ಟಿ. ನಾಗೇಂದ್ರಪ್ಪ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರೆಪೊ ದರ ಶೇ 1ರಷ್ಟು ಇಳಿದಿದೆ. ಜಿಎಸ್‌ಟಿ ಪರಿಷ್ಕರಣೆಯಿಂದ ಸಿಮೆಂಟ್ ಸೇರಿ ನಿರ್ಮಾಣ ಚಟುವಟಿಕೆಗಳಿಗೆ ಬಳಸುವ ಕೆಲವು ವಸ್ತುಗಳ ಬೆಲೆ ಕಡಿಮೆ ಆಗಿದೆ. ಆದರೆ, ಇತ್ತೀಚೆಗೆ ಕರ್ನಾಟಕದಲ್ಲಿ ಮುದ್ರಾಂಕ ಶುಲ್ಕ ಹೆಚ್ಚಳ ಮಾಡಲಾಗಿದೆ. ಹೀಗಾಗಿ, ರೆಪೊ ದರ ಇಳಿಕೆ ಮತ್ತು ಜಿಎಸ್‌ಟಿ ಪರಿಷ್ಕರಣೆ ಪ್ರಯೋಜನವು ರಾಜ್ಯದಲ್ಲಿ ಮನೆ ಖರೀದಿಸುವವರಿಗೆ ದೊರೆಯದಂತಾಗಿದೆ’ ಎಂದು ಹೇಳಿದರು.

10ರಿಂದ ರಿಯಾಲ್ಟಿ ಎಕ್ಸ್‌ಪೋ

ಅಕ್ಟೋಬರ್ 10ರಿಂದ 12ರವರೆಗೆ ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಕರ್ನಾಟಕ ವ್ಯಾಪಾರ ಉತ್ತೇಜನ ಸಂಸ್ಥೆಯಲ್ಲಿ (ಕೆಟಿಪಿಒ) ಕ್ರೆಡಾಯ್ ರಿಯಾಲ್ಟಿ ಎಕ್ಸ್‌ಪೋ-2025 ಹಮ್ಮಿಕೊಳ್ಳಲಾಗಿದೆ ಎಂದು ನಾಗೇಂದ್ರಪ್ಪ ಹೇಳಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಇದು ಅತ್ಯಂತ ದೊಡ್ಡ ಎಕ್ಸ್‌ಪೋ ಆಗಿರಲಿದೆ. ಪ್ರಮುಖ ಡೆವಲಪರ್‌ಗಳು, ಬ್ಯಾಂಕ್‌ಗಳು ಮತ್ತು ವಸತಿ ಹಣಕಾಸು ಕಂಪನಿಗಳು ಎಕ್ಸ್‌ಪೋದಲ್ಲಿ ಭಾಗವಹಿಸಲಿವೆ ಎಂದರು.

ರಾಜ್ಯದ ಎರಡನೇ ಹಂತದ ನಗರಗಳು ಬೆಳವಣಿಗೆಯ ಮುಂದಿನ ಚಾಲಕ ಶಕ್ತಿಗಳಾಗಿ ಹೊರಹೊಮ್ಮುತ್ತಿದ್ದು, ವಸತಿ ಯೋಜನೆಗಳಿಗೆ ಉತ್ತಮ ಬೇಡಿಕೆ ಇದೆ. ಕೈಗಾರಿಕೆ ಮತ್ತು ಐ.ಟಿ ಕ್ಷೇತ್ರದ ವಿಸ್ತರಣೆಯಿಂದ ಮಂಗಳೂರು ರಾಜ್ಯದ ಎರಡನೇ ಅತಿದೊಡ್ಡ ರಿಯಲ್ ಎಸ್ಟೇಟ್ ಮಾರುಕಟ್ಟೆಯಾಗಿ ಮುನ್ನಡೆ ಸಾಧಿಸುತ್ತಿದೆ. ಮೈಸೂರಿನಲ್ಲಿ ಪ್ರವಾಸೋದ್ಯಮ, ಬೆಳಗಾವಿಯಲ್ಲಿ ಹೊಸ ಕೈಗಾರಿಕಾ ಪಾರ್ಕ್‌ಗಳಿಂದ ರಿಯಲ್ ಎಸ್ಟೇಟ್ ವಲಯಕ್ಕೆ ಬೇಡಿಕೆ ಹೆಚ್ಚಳವಾಗಿದೆ. ಹುಬ್ಬಳ್ಳಿ, ಬಳ್ಳಾರಿ, ಬಾಗಲಕೋಟೆ, ಗದಗ, ರಾಯಚೂರು ನಗರಗಳಲ್ಲಿ ಮೂಲಸೌಕರ್ಯದ ಅಭಿವೃದ್ಧಿಯಿಂದ ವಸತಿ ಯೋಜನೆಗಳಿಗೆ ಉತ್ತಮ ಬೇಡಿಕೆ ಇದೆ ಎಂದರು.

₹1 ಕೋಟಿ ಆಸುಪಾಸು ಇರುವ ಮೌಲ್ಯದ ಮನೆಗೆ ಜನರಿಂದ ಹೆಚ್ಚಿನ ಬೇಡಿಕೆ ಇದೆ. ರಾಯಚೂರಿನಲ್ಲಿ ₹2.8 ಕೋಟಿ ಮೌಲ್ಯದ ಮನೆ ಸಿದ್ಧವಾಗುತ್ತಿದೆ. ಇದು ರಾಜ್ಯದಲ್ಲಿ ಎರಡನೇ ಹಂತದ ನಗರಗಳ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತಿದೆ ಎಂದು ಹೇಳಿದರು.

ಸಿಜೆಐ ಪ್ರಕರಣ : ಭಾಸ್ಕರ್ ರಾವ್ ವಿವಾದ

ಎರಡನೇ ಮುಖಪುಟದಿಂದ...

ತಮ್ಮ ಪೋಸ್ಟ್‌ಗೆ ತೀವ್ರ ಟೀಕೆ ವ್ಯಕ್ತವಾಗುತ್ತಿದ್ದಂತೆಯೇ ಅವರು ಆ ಪೋಸ್ಟ್ ಅನ್ನು ಅಳಿಸಿ ಹಾಕಿದ್ದರು.

ಮಾಜಿ ಐಪಿಎಸ್ ಅಧಿಕಾರಿಯೊಬ್ಬರಿಂದ ಇಂಥ ಹೇಳಿಕೆ ನಿರೀಕ್ಷೆ ಮಾಡಿರಲಿಲ್ಲ ಎಂದು ಕಾಂಗ್ರೆಸ್ ಮುಖಂಡ ಮನ್ಸೂರ್ ಅಲಿ ಖಾನ್ ಅವರು ಆಕ್ರೋಶ ಹೊರಹಾಕಿದ್ದರು. ‘ಸರ್, ಈ ರೀತಿಯ ಪೋಸ್ಟ್ ಅನ್ನು ತಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ’ ಎಂದು ನಿತಿನ್ ಶೇಷಾದ್ರಿ ಎಂಬವರು ‘ಎಕ್ಸ್’ ಮಾಡಿದ್ದರು.

ಮತ್ತೊಬ್ಬರು ಭಾಸ್ಕರ್ ರಾವ್ ಅವರ ‘ಎಕ್ಸ್’ ಅನ್ನು ಬೆಂಗಳೂರು ನಗರ ಪೊಲೀಸರ ಇನ್‌ಸ್ಟಾಗ್ರಾಂ ಖಾತೆಗೆ ಟ್ಯಾಗ್ ಮಾಡಿ, ಭಾಸ್ಕರ್ ರಾವ್ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದರು.

ಈ ಬೆಳವಣಿಗೆ ಬಳಿಕ ಭಾಸ್ಕರ್ ರಾವ್ ಅವರು ಮತ್ತೊಂದು ಪೋಸ್ಟ್ ಮೂಲಕ ಕ್ಷಮೆಯಾಚಿಸಿದ್ದಾರೆ.

‘ರಾಕೇಶ್ ವಿರುದ್ಧ ನ್ಯಾಯಾಂಗ ನಿಂದನೆ ವಿಚಾರಣೆ ನಡೆಸಲು ಅನುಮತಿ ನೀಡಿ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯುವ ಯತ್ನ ನಡೆಸಿದ ವಕೀಲ ರಾಕೇಶ್ ಕಿಶೋರ್ ಅವರ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಆರೋಪದಡಿ ವಿಚಾರಣೆಗೆ ಅನುಮತಿ ನೀಡುವಂತೆ ಕೋರಿ ವಕೀಲ ಸುಭಾಷ್ ಚಂದ್ರನ್ ಕೆ.ಆರ್. ಅವರು ಅಟಾರ್ನಿ ಜನರಲ್‌ಗೆ ಪತ್ರ ಬರೆದಿದ್ದಾರೆ.

ನ್ಯಾಯಾಂಗ ನಿಂದನೆ ಕಾಯ್ದೆ, 1971ರ 15ನೇ ಸೆಕ್ಷನ್ ಅಡಿಯಲ್ಲಿ ಅನುಮತಿ ನೀಡುವಂತೆ ಕೋರಲಾಗಿದೆ. ನ್ಯಾಯಾಂಗ ನಿಂದನೆ ನಡೆದ ಬಗ್ಗೆ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ಗೆ ಖುದ್ದಾಗಿ ತಿಳಿದಿದ್ದರೆ, ಇಂಥ ಸಂದರ್ಭದಲ್ಲಿ ನ್ಯಾಯಾಂಗ ನಿಂದನೆ ವಿಚಾರಣೆಯನ್ನು ಈ ನ್ಯಾಯಾಲಯಗಳು ಆರಂಭಿಸಬಹುದಾಗಿವೆ ಎಂದು ಕಾಯ್ದೆಯಲ್ಲಿ ಹೇಳಲಾಗಿದೆ.

ಯಾರು ಬೇಕಾದರೂ ವ್ಯಕ್ತಿಯೊಬ್ಬರ ಮೇಲೆ ನ್ಯಾಯಾಂಗ ನಿಂದನೆ ಪ್ರಕರಣವನ್ನು ದಾಖಲಿಸಬಹುದು. ಆದರೆ, ಇದಕ್ಕೆ ಹೈಕೋರ್ಟ್‌ನಲ್ಲಿ ಅಡ್ವೊಕೇಟ್ ಜನರಲ್ ಒಪ್ಪಿಗೆ ನೀಡಬೇಕು. ಸುಪ್ರೀಂ ಕೋರ್ಟ್‌ನ ಸಂದರ್ಭದಲ್ಲಿ ಅಟಾರ್ನಿ ಜನರಲ್ ಅಥವಾ ಸಾಲಿಸಿಟರಲ್ ಜನರಲ್ ಒಪ್ಪಿಗೆ ನೀಡಬೇಕಾಗುತ್ತದೆ.

> ನಾನು ಈ ದಾಳಿಯನ್ನು ಖಂಡಿಸುತ್ತೇನೆ. ಸಂವಿಧಾನವು ಎಲ್ಲರಿಗೂ ಸಮಾನ ಹಕ್ಕು ನೀಡುತ್ತದೆ. ಯಾರಿಗೆ ಏನೇ ಪ್ರಶ್ನೆಗಳಿದ್ದರೂ ಏನೇ ಕೇಳಬೇಕೆಂದಿದ್ದರೂ ಶಾಂತಿಯುತವಾಗಿ ಕೇಳಿ
> **ಕಮಲಾ ಗವಾಯಿ,** ಸಾಮಾಜಿಕ ಕಾರ್ಯಕರ್ತೆ, ಸಿಜೆಐ ಗವಾಯಿ ಅವರ ತಾಯಿ

> ಭಾರತದ ಸಂವಿಧಾನವನ್ನು ಸೋಲಿಸುವ, ಸುಪ್ರೀಂ ಕೋರ್ಟ್‌ನ ಅಧಿಕಾರ ಮತ್ತು ಘನತೆಯನ್ನು ಮುಕ್ಕಾಗಿಸುವ ಅತ್ಯಂತ ಹೀನ ಕೃತ್ಯವಿದು
> **ಸುಭಾಷ್ ಚಂದ್ರನ್ ಕೆ.ಆರ್.,** ಅಟಾರ್ನಿ ಜನರಲ್‌ಗೆ ಪತ್ರ ಬರೆದ ವಕೀಲ

ರಾಕೇಶ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ್ದ ಪ್ರಕರಣದಲ್ಲಿ ವಕೀಲ ರಾಕೇಶ್ ಕಿಶೋರ್ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಬುಧವಾರ ಎಫ್‌ಐಆರ್ ದಾಖಲಾಗಿದೆ.

‘ವಕೀಲ ಭಕ್ತವತ್ಸಲ ಅವರು ನೀಡಿದ ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆಯ 132 ಹಾಗೂ 133ನೇ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಘಟನೆಯು ದೆಹಲಿಯಲ್ಲಿ ನಡೆದಿದ್ದು, ವಿಧಾನಸೌಧ ಠಾಣೆಯಲ್ಲಿ ಶೂನ್ಯ ಎಫ್‌ಐಆರ್ ದಾಖಲು ಮಾಡಿಕೊಂಡಿದ್ದೇವೆ. ದೆಹಲಿ ಪೊಲೀಸರಿಗೆ ಎಫ್‌ಐಆರ್ ಹಸ್ತಾಂತರ ಮಾಡಲಾಗುವುದು’ ಎಂದು ಪೊಲೀಸರು ಹೇಳಿದರು.

ರಾಕೇಶ್ ಎಂಬ ವಕೀಲ ನ್ಯಾಯಾಲಯದ ಸಭಾಂಗಣದಲ್ಲಿ (ಕೋರ್ಟ್ ನಂ.1) ಮುಖ್ಯ ನ್ಯಾಯಮೂರ್ತಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ್ದಾರೆ. ಅವರು ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕೋರಿ ಭಕ್ತವತ್ಸಲ ಅವರು ದೂರು ನೀಡಿದ್ದಾರೆ.

ಮೂವರು ವಿಜ್ಞಾನಿಗಳಿಗೆ ರಸಾಯನ ವಿಜ್ಞಾನ ನೊಬೆಲ್


ಸುಸುಮು ಕಿಟಾಗವಾ


ರಿಚರ್ಡ್ ರಾಬ್ಸನ್


ಒಮರ್ ಯಾಘಿ

ಸ್ಟಾಕ್‌ಹೋಮ್ (ಎಪಿ): ಜಪಾನ್‌ನ ಸುಸುಮು ಕಿಟಾಗವಾ, ಬ್ರಿಟನ್‌ನ ರಿಚರ್ಡ್ ರಾಬ್ಸನ್ ಮತ್ತು ಜೋರ್ಡಾನ್‌ನ ಒಮರ್ ಎಂ.ಯಾಘಿ ಅವರು 2025ನೇ ಸಾಲಿನ ರಸಾಯನ ವಿಜ್ಞಾನ ನೊಬೆಲ್ ಪುರಸ್ಕಾರವನ್ನು ಹಂಚಿಕೊಂಡಿದ್ದಾರೆ.

‘ಲೋಹ–ಸಾವಯವ ಚೌಕಟ್ಟು’ (ಎಂಒಎಫ್) ಅಭಿವೃದ್ಧಿಯಲ್ಲಿ ಈ ವಿಜ್ಞಾನಿಗಳು ನಡೆಸುತ್ತಿರುವ ಸಂಶೋಧನೆಗಳನ್ನು ಪರಿಗಣಿಸಿ, ನೊಬೆಲ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ರಾಯಲ್ ಸ್ವೀಡಿಶ್ ಅಕಾಡೆಮಿಯ ಪ್ರಧಾನ ಕಾರ್ಯದರ್ಶಿ ಹನ್ಸ್ ಎಲೆಗ್ರೆನ್ ಬುಧವಾರ ಇಲ್ಲಿ ತಿಳಿಸಿದ್ದಾರೆ.

ಸುಸುಮು ಕಿಟಾಗವಾ ಜಪಾನ್‌ನ ಕ್ಯೂಟೊ ವಿಶ್ವವಿದ್ಯಾಲಯದಲ್ಲಿ, ರಿಚರ್ಡ್ ರಾಬ್ಸನ್ ಆಸ್ಟ್ರೇಲಿಯಾದ ಮೆಲ್ಬರ್ನ್ ವಿ.ವಿಯಲ್ಲಿ ಹಾಗೂ ಒಮರ್ ಕ್ಯಾಲಿಫೋರ್ನಿಯಾ ವಿ.ವಿಯಲ್ಲಿ ರಸಾಯನ ವಿಜ್ಞಾನ ಪ್ರಾಧ್ಯಾಪಕರಾಗಿ ದ್ದಾರೆ. ಈ ಮೂವರೂ ವಿಜ್ಞಾನಿಗಳು ಒಟ್ಟು 1.2 ದಶಲಕ್ಷ ಡಾಲರ್ (₹10.65 ಕೋಟಿ) ನೊಬೆಲ್ ನಗದು ಪುರಸ್ಕಾರವನ್ನು ಹಂಚಿಕೊಳ್ಳಲಿದ್ದಾರೆ.

ವೈದ್ಯವಿಜ್ಞಾನ ಮತ್ತು ಭೌತವಿಜ್ಞಾನ ಕ್ಷೇತ್ರದ ನೊಬೆಲ್ ಪುರಸ್ಕಾರವನ್ನು ಈಗಾಗಲೇ ಘೋಷಿಸಲಾಗಿದೆ. ಸಾಹಿತ್ಯ ಕ್ಷೇತ್ರದ ನೊಬೆಲ್ ಪುರಸ್ಕಾರ ಗುರುವಾರ ಮತ್ತು ನೊಬೆಲ್ ಶಾಂತಿ ಪ್ರಶಸ್ತಿ ಶುಕ್ರವಾರ ಹಾಗೂ ಅರ್ಥಶಾಸ್ತ್ರದ ನೊಬೆಲ್ ಪುರಸ್ಕಾರ ಅ.13ರಂದು ಪ್ರಕಟಗೊಳ್ಳಲಿವೆ.

ಶಾಂತಿ ಮಾತುಕತೆ ಮೂರನೇ ದಿನಕ್ಕೆ

ಕೈರೊ/ಟೆಲ್ ಅವೀವ್ (ಎಪಿ): ಇಸ್ರೇಲ್ ಮತ್ತು ಹಮಾಸ್ ಸಂಘಟನೆ ಮಧ್ಯೆ ಈಜಿಪ್ಟ್‌ನ ರೆಸಾರ್ಟ್‌ವೊಂದರಲ್ಲಿ ನಡೆಯುತ್ತಿರುವ ಶಾಂತಿ ಮಾತುಕತೆಯು ಬುಧವಾರಕ್ಕೆ ಮೂರನೇ ದಿನಕ್ಕೆ ಕಾಲಿಟ್ಟಿದೆ. ಅಮೆರಿಕ, ಮಾತುಕತೆಗೆ ಮಧ್ಯಸ್ಥಿಕೆ ವಹಿಸಿರುವ ಈಜಿಪ್ಟ್, ಕತಾರ್‌ನ ಹಿರಿಯ ಅಧಿಕಾರಿಗಳು ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎನ್ನಲಾಗಿದೆ.

‘ನಮ್ಮ ಬಳಿ ಇರುವ ಎಲ್ಲ ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ ಬಳಿಕ ಇಸ್ರೇಲ್ ಮತ್ತೆ ಗಾಜಾದ ಮೇಲೆ ಸೇನಾ ದಾಳಿ ನಡೆಸುವುದಿಲ್ಲ ಎನ್ನುವ ಖಚಿತ ಪ್ರಮಾಣವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನೀಡಬೇಕು’ ಎನ್ನುವುದು ಹಮಾಸ್ ವಾದ.

ಎರಡು ವರ್ಷದಿಂದ ನಡೆಯುತ್ತಿರುವ ಯುದ್ಧ ಅಂತ್ಯಗೊಳ್ಳುತ್ತದೆ ಎನ್ನುವುದು ಮಾತುಕತೆಯಲ್ಲಿ ಪಾಲ್ಗೊಂಡಿರುವ ಎಲ್ಲರ ಆಶಾಭಾವನೆ. ಆದರೆ, ಶಾಂತಿ ಒಪ್ಪಂದದ ಕೆಲವು ಅಂಶಗಳ ಕುರಿತು ಈವರೆಗೂ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ.

ಅವುಗಳೆಂದರೆ, ಹಮಾಸ್ ಶಸ್ತ್ರಾಸ್ತ್ರ ತ್ಯಜಿಸಬೇಕು. ಯಾವಾಗ ಮತ್ತು ಎಷ್ಟರ ಮಟ್ಟಿಗೆ ತನ್ನ ಸೇನೆಯನ್ನು ಇಸ್ರೇಲ್ ಗಾಜಾದಿಂದ ವಾಪಸು ಕರೆಸಿಕೊಳ್ಳಬೇಕು, ಗಾಜಾದ ಆಡಳಿತ ನಿರ್ವಹಣೆಯ ಅಧಿಕಾರವನ್ನು ಹಮಾಸ್ ಬಿಟ್ಟುಕೊಡಬೇಕು ಮತ್ತು ಹೀಗೆ ಅಧಿಕಾರ ಬಿಟ್ಟುಕೊಟ್ಟ ಬಳಿಕ ಆಂತರಿಕವಾದ ಸರ್ಕಾರ ರಚಿಸಬೇಕು. ಈ ಬಗ್ಗೆ ಈವರೆಗೂ ನಿರ್ಧಾರಕ್ಕೆ ಬರಲಾಗಿಲ್ಲ.

ತನಿಖಾ ಸಮಿತಿ ರಚನೆಗೆ ಆಗ್ರಹ

ನವದೆಹಲಿ (ಪಿಟಿಐ): ಮಧ್ಯಪ್ರದೇಶದಲ್ಲಿ ಕೆಮ್ಮಿನ ಸಿರಪ್ ಸೇವಿಸಿ ಮಕ್ಕಳು ಮೃತಪಟ್ಟಿರುವ ಘಟನೆಗೆ ಸಂಬಂಧಿಸಿದಂತೆ ತನಿಖಾ ಸಮಿತಿ ರಚಿಸುವಂತೆ ಅಖಿಲ ಭಾರತ ವೈದ್ಯಕೀಯ ಸಂಘಗಳ ಒಕ್ಕೂಟ (ಎಫ್‌ಎಐಎಂಎ) ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರಿಗೆ ಬುಧವಾರ ಪತ್ರ ಬರೆದು ಒತ್ತಾಯಿಸಿದೆ.

ಘಟನೆಯು ದೇಶದಲ್ಲಿನ ಮಕ್ಕಳ ಔಷಧ ಉತ್ಪಾದನೆ ಮತ್ತು ವಿತರಣೆ ಘಟಕಗಳ ಮೇಲ್ವಿಚಾರಣಾ ವ್ಯವಸ್ಥೆ, ಅವುಗಳ ಸುರಕ್ಷತೆ ಮತ್ತು ಗುಣಮಟ್ಟದ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದು ಎಫ್‌ಎಐಎಂಎ ಹೇಳಿದೆ.

ಘಟನೆ ಕುರಿತ ವಿವರವಾದ ಮತ್ತು ನಿಷ್ಪಕ್ಷಪಾತ ತನಿಖೆಗೆ ಆರೋಗ್ಯ ಸಚಿವಾಲಯದ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುವ ತನಿಖಾ ಸಮಿತಿ ರಚಿಸಬೇಕು ಎಂದು ಆಗ್ರಹಿಸಿದೆ.

ತನಿಖೆ ಪಾರದರ್ಶಕವಾಗಿ, ಬಹುಶಿಸ್ತೀಯ ನೆಲೆಯಲ್ಲಿ ನಡೆಯಬೇಕು. ಇದಕ್ಕಾಗಿ ಸಮಿತಿಯು ವೈದ್ಯಕೀಯ ಮತ್ತು ಔಷಧ ತಜ್ಞರು, ಬೇರೆ ಬೇರೆ ರಾಜ್ಯಗಳ ಪ್ರತಿನಿಧಿಗಳನ್ನು ಒಳಗೊಂಡಿರಬೇಕು ಎಂದು ಅದು ಒತ್ತಾಯಿಸಿದೆ.

ಸಿರಪ್ ಕಾರ್ಖಾನೆಗೆ ಬೀಗಮುದ್ರೆ

ಒಂದನೇ ಪುಟದಿಂದ...

ಸಿರಪ್ ತಯಾರಿಸಿದ್ದ ಪ್ರಮಾಣ, ಸಿರಪ್ ವಿತರಣೆಗೆ ಸಂಬಂಧಿಸಿದ ದಾಖಲೆಗಳು, ಪ್ರತಿ ಬ್ಯಾಚ್ ಔಷಧಿಯ ಪ್ಯಾಕೇಜಿಂಗ್‌ಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ನೋಟಿಸ್‌ನಲ್ಲಿ ಸೂಚಿಸಲಾಗಿದೆ.

‘ಕಂಪನಿಯು ಮಾರುಕಟ್ಟೆಯಿಂದ ಈ ಕೆಮ್ಮಿನ ಸಿರಪ್ ವಾಪಸು ತರಿಸಿಕೊಳ್ಳಬೇಕು ಹಾಗೂ ಆ ರೀತಿ ಮರಳಿ ತರಿಸಿಕೊಳ್ಳಲಾದ ಸರಕಿನ ಕುರಿತ ವಿವರಗಳನ್ನು ಸಹ ಒದಗಿಸಬೇಕು’ ಎಂದೂ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಭಾರತಕ್ಕೆ ಅಮೆರಿಕದ ರಾಯಭಾರಿಯಾಗಿ ಗೋರ್

ನ್ಯೂಯಾರ್ಕ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಪ್ತ ಸರ್ಗಿಯೊ ಗೋರ್ ಅವರು ಭಾರತಕ್ಕೆ ಅಮೆರಿಕದ ಮುಂದಿನ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ.

ಪ್ರತಿಸುಂಕದ ವಿಚಾರವಾಗಿ ಅಮೆರಿಕ ಮತ್ತು ಭಾರತ ನಡುವಿನ ಸಂಬಂಧ ಹದಗೆಟ್ಟಿರುವ ಸಂದರ್ಭದಲ್ಲಿ ಗೋರ್ ಅವರು ರಾಯಭಾರಿಯಾಗಿ ಆಯ್ಕೆಯಾಗಿರುವುದು ಗಮನಾರ್ಹ ಸಂಗತಿ.

ಮಂಗಳವಾರ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಗೋರ್ (38) ಅವರ ಪರ 51 ಸೆನೆಟರ್‌ಗಳು ಮತ್ತು ವಿರುದ್ಧವಾಗಿ 47 ಸೆನೆಟರ್‌ಗಳು ಮತಚಲಾಯಿಸಿದ್ದಾರೆ. ಗೋರ್ ಅವರೂ ಸೇರಿದಂತೆ ರಾಯಭಾರಿ ಸ್ಥಾನಕ್ಕೆ 107 ಮಂದಿ ನಾಮನಿರ್ದೇಶನಗೊಂಡಿದ್ದರು.

‘ಗೋರ್ ನನ್ನ ಆತ್ಮೀಯ ಮಿತ್ರ. ನನ್ನ ನಿಲುವುಗಳನ್ನು ಮತ್ತೊಂದು ದೇಶಕ್ಕೆ ಅರ್ಥಮಾಡಿಸಲು ಮತ್ತು ಅಮೆರಿಕದ ಹೆಸರನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯಲು ಸಮರ್ಥವಾಗಿರುವ ವ್ಯಕ್ತಿ ಎಂದು ನಾನು ನಂಬುವ ವ್ಯಕ್ತಿಗಳಲ್ಲಿ ಗೋರ್ ಕೂಡಾ ಒಬ್ಬರು’ ಎಂದು ಟ್ರಂಪ್ ಹೇಳಿದ್ದಾರೆ.

‘ಅಮೆರಿಕ –ಭಾರತ ನಡುವಿನ ವ್ಯಾಪಾರ ಒಪ್ಪಂದಗಳು ಅಮೆರಿಕದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು ಮಾತ್ರವಲ್ಲದೇ, ಇತರ ದೇಶಗಳ ಮೇಲಿನ ಚೀನಾದ ಆರ್ಥಿಕ ಹತೋಟಿಯನ್ನು ಕಡಿಮೆಗೊಳಿಸುತ್ತವೆ’ ಎಂದು ಗೋರ್ ಪ್ರತಿಕ್ರಿಯಿಸಿದ್ದಾರೆ.

ಟಿಟಿಪಿ 19 ಉಗ್ರರ ಹತ್ಯೆ, ಪಾಕ್‌ನ 11 ಯೋಧರ ಸಾವು

ಪೆಶಾವರ (ಪಿಟಿಐ): ವಾಯುವ್ಯ ಪಾಕಿಸ್ತಾನದ ಖೈಬರ್ ಪಖ್ತುಂಖ್ವಾದಲ್ಲಿ ಪಾಕಿಸ್ತಾನದ ಸೇನಾ ಸಿಬ್ಬಂದಿ ಹಾಗೂ ನಿಷೇಧಿತ ಉಗ್ರ ಸಂಘಟನೆ ಟಿಟಿಪಿಯ ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ ನಡೆದಿದೆ. ಘಟನೆಯಲ್ಲಿ 19 ಉಗ್ರರನ್ನು ಹತ್ಯೆಗೈಯ್ಯಲಾಗಿದೆ. ಪಾಕ್‌ನ 11 ಮಂದಿ ಸೈನಿಕರೂ ಮೃತಪಟ್ಟಿದ್ದಾರೆ.

ಫಿತಾನ್ ಅಲ್ ಕವಾರಿಜ್ ಎಂದು ಗುರುತಿಸಿಕೊಳ್ಳುವ ತೆಹ್ರೀಕ್–ಇ–ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಉಗ್ರ ಸಂಘಟನೆಯ ಭಯೋತ್ಪಾದಕರು ಆಫ್ಗನ್ ಗಡಿ ಸಮೀಪದ ಒರಾಕ್ಜೈ ಜಿಲ್ಲೆಯಲ್ಲಿ ಅಡಗಿರುವ ಬಗ್ಗೆ ಗುಪ್ತಚರ ಮಾಹಿತಿ ಲಭ್ಯವಾದ ಕಾರಣ ಸೇನಾಪಡೆ ಕಾರ್ಯಾಚರಣೆ ಆರಂಭಿಸಿದೆ.

ಅಕ್ಟೋಬರ್ 7ರ ತಡರಾತ್ರಿ ಶುರುವಾಗಿ ಅ.8ರ ಬೆಳಗ್ಗಿನ ಜಾವದವರೆಗೆ ನಡೆದ ಕಾರ್ಯಾಚರಣೆಯಲ್ಲಿ ತೀವ್ರ ಗುಂಡಿನ ಚಕಮಕಿ ನಡೆದಿದೆ. ಮೃತಪಟ್ಟ ಸೈನಿಕರ ಪೈಕಿ ಲೆಫ್ಟಿನೆಂಟ್ ಕರ್ನಲ್ ಹಾಗೂ ಮೇಜರ್ ಕೂಡ ಸೇರಿದ್ದಾರೆ ಎಂದು ಪಾಕ್ ಸೇನೆಯ ಮಾಧ್ಯಮ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಬ್ರಿಟನ್ ಪ್ರಧಾನಿಯ ಎರಡು ದಿನಗಳ ಪ್ರವಾಸ • ನಿಯೋಗದಲ್ಲಿ 125 ಸದಸ್ಯರು

ಭಾರತಕ್ಕೆ ಆಗಮಿಸಿದ ಸ್ಟಾರ್ಮರ್

ಮುಂಬೈ (ಎಎಫ್‌ಪಿ/ಪಿಟಿಐ): ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ಬುಧವಾರ ಭಾರತಕ್ಕೆ ಆಗಮಿಸಿದರು. ಇದು ಭಾರತಕ್ಕೆ ಅವರ ಚೊಚ್ಚಲ ಪ್ರವಾಸ. ಅವರನ್ನು ಪ್ರಧಾನಿ ನರೇಂದ್ರ ಮೋದಿ ಆತ್ಮೀಯವಾಗಿ ಬರಮಾಡಿಕೊಂಡರು. ಅಲ್ಲದೆ, ಅವರ ಭೇಟಿಯನ್ನು ಐತಿಹಾಸಿಕ ಎಂದು ಬಣ್ಣಿಸಿದರು.

ಜುಲೈನಲ್ಲಿ ಭಾರತ ಮತ್ತು ಬ್ರಿಟನ್ ನಡುವೆ ಲಂಡನ್‌ನಲ್ಲಿ ಮಹತ್ವದ ವ್ಯಾಪಾರ ಒಪ್ಪಂದ ಏರ್ಪಟ್ಟಿತ್ತು. ಅದಾದ ಬಳಿಕ ಬ್ರಿಟನ್ ಪ್ರಧಾನಿ ಸ್ಟಾರ್ಮರ್ ಅವರು ಎರಡು ದಿನಗಳ ಮಟ್ಟಿಗೆ ಭಾರತ ಪ್ರವಾಸ ಕೈಗೊಂಡಿದ್ದಾರೆ.

ಭಾರತಕ್ಕೆ ಬರುತ್ತಿದ್ದಂತೆ ಸ್ಟಾರ್ಮರ್ ಅವರು, ‘ಭಾರತದಲ್ಲಿ ಅಪೂರ್ವವಾದ ಅವಕಾಶಗಳು ತೆರೆದುಕೊಳ್ಳುತ್ತಿವೆ. ಭಾರತವು 2028ರ ವೇಳೆಗೆ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆ ದೇಶವಾಗಿ ಹೊರಹೊಮ್ಮಲಿದೆ. ಅವರೊಂದಿಗಿನ ವ್ಯಾಪಾರವು ತ್ವರಿತ ಮತ್ತು ಅಗ್ಗವಾಗಲಿದ್ದು, ಅಪೂರ್ವವಾದ ಅವಕಾಶಗಳು ದೊರೆಯಲಿವೆ. ಉಭಯ ದೇಶಗಳ ನಡುವಿನ ವ್ಯಾಪಾರ ಒಪ್ಪಂದವು ಪರಸ್ಪರರ ಬೆಳವಣಿಗೆಗೆ ಸಹಕಾರಿಯಾಗಲಿದೆ’ ಎಂದರು.

ಇದಕ್ಕೆ ಪ್ರತಿಯಾಗಿ ಪ್ರಧಾನಿ ಮೋದಿ ಅವರು, ‘ಭಾರತಕ್ಕೆ ಐತಿಹಾಸಿಕ ಭೇಟಿ ನೀಡಿರುವ ಸ್ಟಾರ್ಮರ್ ಅವರಿಗೆ ಸ್ವಾಗತ. ಬ್ರಿಟನ್‌ನಿಂದ ಅತಿದೊಡ್ಡ ವ್ಯಾಪಾರ ನಿಯೋಗದ ಜತೆಗೆ ಬಂದಿರುವ ಅವರು ಎರಡು ದೇಶಗಳ ನಡುವಿನ ಭವಿಷ್ಯವನ್ನು ಸಮೃದ್ಧಗೊಳಿಸುವ ಆಶಯ ಹೊಂದಿದ್ದಾರೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.


ಬ್ರಿಟನ್‌ನ ವ್ಯಾಪಾರದ ಪ್ರಮುಖ ನಾಯಕರು, ಉದ್ಯಮಿಗಳು, ವಿಶ್ವವಿದ್ಯಾಲಯಗಳ ಕುಲಪತಿಗಳು ಈ ನಿಯೋಗದಲ್ಲಿದ್ದಾರೆ. ಎರಡು ದಿನಗಳ ಭಾರತ ಭೇಟಿಯಲ್ಲಿ ಉಭಯ ದೇಶಗಳ ನಡುವೆ ಮಹತ್ವದ ಮಾತುಕತೆಗಳು ನಡೆಯಲಿವೆ.

ಯಶ್ ರಾಜ್ ಫಿಲ್ಮ್ ಸ್ಟುಡಿಯೊಗೆ ಭೇಟಿ

ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ಮುಂಬೈನ ಅಂಧೇರಿಯಲ್ಲಿರುವ ಯಶ್ ರಾಜ್ ಫಿಲ್ಮ್ ಸ್ಟುಡಿಯೊಗೆ ಬುಧವಾರ ಭೇಟಿ ನೀಡಿದರು. ಇದು ಬಾಲಿವುಡ್‌ನ ಪ್ರಮುಖ ನಿರ್ಮಾಣ ಕೇಂದ್ರ.

ಎರಡು ದೇಶಗಳ ನಡುವಿನ ಸಾಂಸ್ಕೃತಿಕ ಸಂಬಂಧ ಬಲಪಡಿಸುವುದು ಮತ್ತು ಬ್ರಿಟನ್- ಭಾರತದ ಚಲನಚಿತ್ರೋದ್ಯಮಗಳ ನಡುವಿನ ಸಹಯೋಗವನ್ನು ಉತ್ತೇಜಿಸುವ ಗುರಿಯನ್ನು ಈ ಭೇಟಿ ಹೊಂದಿದೆ. ‘ಮುಂದಿನ ವರ್ಷದಿಂದ ಬ್ರಿಟನ್‌ನಲ್ಲಿ ಬಾಲಿವುಡ್‌ನ ಮೂರು ಹೊಸ ಬ್ಲಾಕ್ ಬಸ್ಟರ್‌ಗಳು ನಿರ್ಮಾಣವಾಗಲಿವೆ’ ಎಂದು ಈ ವೇಳೆ ಮಾಹಿತಿ ನೀಡಿದರು.

ಬಳಿಕ ಅವರು, ದಕ್ಷಿಣ ಮುಂಬೈನ ಫುಟ್‌ಬಾಲ್ ಮೈದಾನದಲ್ಲಿ ಇಂಗ್ಲಿಷ್ ಪ್ರೀಮಿಯರ್ ಲೀಗ್ ಆಯೋಜಿಸಿದ್ದ ಫುಟ್‌ಬಾಲ್ ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಅಲ್ಲಿ ಅವರು ಯುವ ಭಾರತೀಯ ಫುಟ್‌ಬಾಲ್ ಆಟಗಾರರು ಮತ್ತು ತರಬೇತಿದಾರರ ಜತೆ ಮಾತುಕತೆ ನಡೆಸಿದರು.



ಕೃಷ್ಣೇಗೌಡ, ಎಸ್.ವಿ.ರಾಜೇಂದ್ರಸಿಂಗ್ ಬಾಬು

ಅ.23ರಿಂದ ಎಸ್‌ವಿಆರ್50

ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು ನಿರ್ದೇಶಕರಾಗಿ 50 ವರ್ಷಗಳು ಆಗಿವೆ. ಈ ಹಿನ್ನೆಲೆಯಲ್ಲಿ ಕನ್ನಡ ಚಿತ್ರರಂಗದಿಂದ 'ಎಸ್‌ವಿಆರ್ 50' ಎಂಬ ಅದ್ದೂರಿ ಸಮಾರಂಭ ಆಯೋಜಿಸಲು ತೀರ್ಮಾನಿಸಲಾಗಿದೆ.

ಸಮಾರಂಭದ ಆಯೋಜಕರಾದ ನಿರ್ದೇಶಕ ಕೃಷ್ಣೇಗೌಡ ಮಾತನಾಡಿ, 'ಕರ್ನಾಟಕ ಮಾತ್ರವಲ್ಲ, ಇಡೀ ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಈವರೆಗೂ 50 ವರ್ಷ ಸಕ್ರಿಯವಾಗಿ ನಿರ್ದೇಶಕರಾಗಿರುವವರು ಯಾರು ಇಲ್ಲ. ಅದು ರಾಜೇಂದ್ರ ಸಿಂಗ್ ಬಾಬು ಅವರೊಬ್ಬರೇ. ಈಗಲೂ ಅವರ ನಿರ್ದೇಶನದ ಎರಡು ಚಿತ್ರಗಳು ತೆರೆಗೆ ಬರಲು ಸಿದ್ಧವಾಗಿವೆ. ಈ ಸುವರ್ಣ ಗಳಿಗೆಯನ್ನು ಸಂಭ್ರಮಿಸಲು ಅ.23 ರಿಂದ ಐದು ದಿನ ಸಮಾರಂಭ ನಡೆಸಲಾಗುತ್ತಿದೆ. ಅ.23 ರಂದು ಚಾಮರಾಜಪೇಟೆಯ ಕಲಾವಿದರ ಸಂಘದಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ. ಅಲ್ಲಿಂದ ನಾಲ್ಕು ದಿನ ಕಲಾವಿದರ ಸಂಘದಲ್ಲೇ ರಾಜೇಂದ್ರಸಿಂಗ್ ಬಾಬು ಅವರ ನಿರ್ದೇಶನದ ರಾಷ್ಟ್ರ ಹಾಗೂ ರಾಜ್ಯ ಪ್ರಶಸ್ತಿ ಪಡೆದ ಚಿತ್ರಗಳ ಚಿತ್ರೋತ್ಸವ ನಡೆಯಲಿದೆ. ದಿನಕ್ಕೆ ಎರಡು ಚಿತ್ರಗಳ ಪ್ರದರ್ಶನವಿರಲಿದೆ. ಅ.27ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಸಮಾರೋಪ ಸಮಾರಂಭ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತರಿರಲಿದ್ದಾರೆ. ಅಂದು ರಾಜೇಂದ್ರ ಸಿಂಗ್ ಬಾಬು ಅವರಿಗೆ ಚಿತ್ರರಂಗದ ಪರವಾಗಿ ಸನ್ಮಾನ ಸಮಾರಂಭ ನಡೆಯಲಿದೆ. ಇದೇ ಸಂದರ್ಭದಲ್ಲಿ ಗಂಗಾಧರ್ ಮೊದಲಿಯಾರ್ ಬರೆದಿರುವ ಪುಸ್ತಕ ಸೇರಿದಂತೆ ಎರಡು ಪುಸ್ತಕಗಳ ಬಿಡುಗಡೆ ಹಾಗೂ ಬಿ.ಎಸ್.ಲಿಂಗದೇವರು ನಿರ್ದೇಶಿಸಿರುವ ಸಾಕ್ಷ್ಯಚಿತ್ರದ ಪ್ರದರ್ಶನವಿರಲಿದೆ' ಎಂದು ತಿಳಿಸಿದರು.

'ರಾಜೇಂದ್ರಸಿಂಗ್ ಬಾಬು ಅವರು ನಿರ್ದೇಶನವನ್ನಷ್ಟೇ ಅಲ್ಲದೆ ಚಿತ್ರರಂಗಕ್ಕಾಗಿ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಕನ್ನಡ ಚಲನಚಿತ್ರ ನಿರ್ದೇಶಕರ ಸಂಘದ ಸ್ಥಾಪನೆ, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾಗಿದ್ದಾಗ 'ಬೆಳ್ಳಿ ಹೆಜ್ಜೆ'ಯಂಥ ಕಾರ್ಯಕ್ರಮ ಮಾಡಿದ್ದರು. ಅವರು ತಮ್ಮ ಚಿತ್ರಗಳ ಮೂಲಕವೇ ಮನೆ ಮಾತಾಗಿದ್ದಾರೆ' ಎಂದರು ನಿರ್ದೇಶಕ ಗಿರೀಶ್ ಕಾಸರವಳ್ಳಿ.

ಅ.31ಕ್ಕೆ ತೆರೆಗೆ ಬರಲಿದೆ 'ಮಾರುತ'

ಎಸ್. ನಾರಾಯಣ್ ನಿರ್ದೇಶನದಲ್ಲಿ ದುನಿಯಾ ವಿಜಯ್, ಶ್ರೇಯಸ್ ಮಂಜು ಪ್ರಮುಖಪಾತ್ರದಲ್ಲಿ ನಟಿಸಿರುವ ಮಾರುತ ಅಕ್ಟೋಬರ್ 31ರಂದು ತೆರೆಗೆ ಬರಲಿದೆ.

ಕೆ.ಮಂಜು, ರಮೇಶ್ ಯಾದವ್ ಈಶಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ಚಿತ್ರವನ್ನು ನಿರ್ಮಿಸಿದ್ದಾರೆ. ಶ್ರೇಯಸ್ ಮಂಜುಗೆ ಬೃಂದಾ ಆಚಾರ್ಯ ಜೋಡಿಯಾಗಿದ್ದಾರೆ. ಸಾಧು ಕೋಕಿಲ, ನಿಶ್ವಿಕಾ ನಾಯ್ಡು, ರಂಗಾಯಣ ರಘು, ತಾರಾ ಅನುರಾಧ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಮಂಜು ಪಾವಗಡ, ಚಿತ್ರಾ ಶೆಣೈ, ಸುಜಯ್ ಶಾಸ್ತ್ರಿ ಮುಂತಾದವರ ತಾರಾಬಳಗವಿರುವ ಈ ಚಿತ್ರದ ವಿಶೇಷ ಪಾತ್ರದಲ್ಲಿ ವಿ.ರವಿಚಂದ್ರನ್ ನಟಿಸಿದ್ದಾರೆ.

'ವೀಕ್ಷಕರಿಗೆ ಬೇಕಾಗಿರುವ ಎಲ್ಲಾ ಅಂಶಗಳನ್ನೊಳಗೊಂಡ ಕೌಟುಂಬಿಕ ಚಿತ್ರವಿದು. ಯುವಜನತೆಗೆ ಎಚ್ಚರಿಕೆ ನೀಡುವ ಉತ್ತಮ ಸಂದೇಶ ಕೂಡ ಇದೆ. ಸಾಮಾಜಿಕ ಜಾಲತಾಣಗಳಿಂದ ಎಷ್ಟು ಉಪಯೋಗವಿದೆಯೋ, ಅದಕ್ಕಿಂತ ಹೆಚ್ಚು ಅಪಾಯವಿದೆ. ಈ ನಿಟ್ಟಿನಲ್ಲಿ ಪೋಷಕರು ಯುವಜನತೆಯ ಮೇಲೆ ಹೆಚ್ಚು ಗಮನ ನೀಡಬೇಕು ಎಂಬ ಸಂದೇಶವಿದೆ. ನಮ್ಮ ಚಿತ್ರವನ್ನು ವೀಕ್ಷಿಸಿದ ಸೆನ್ಸಾರ್ ಮಂಡಳಿ ಕೂಡ ಶ್ಲಾಘಿಸಿದೆ' ಎಂದು ನಿರ್ದೇಶಕ ಎಸ್. ನಾರಾಯಣ್ ತಿಳಿಸಿದರು.

ಎಸ್.ನಾರಾಯಣ್ ಹಾಗೂ ಜೆಸ್ಸಿ ಗಿಫ್ಟ್ ಸಂಗೀತ ನೀಡಿದ್ದು, ಪಿ.ಕೆ.ಎಚ್ ದಾಸ್ ಛಾಯಾಚಿತ್ರಗ್ರಹಣ, ಶಿವಪ್ರಸಾದ್ ಯಾದವ್ ಸಂಕಲನವಿದೆ.



ಶ್ರೇಯಸ್ ಮಂಜು, ಬೃಂದಾ



ಆಶಿಕಾ ರಂಗನಾಥ್

'ವರ್ಣಮಾಲೆ'ಯಲ್ಲಿ ಪ್ರೀತಿಯ ಹಾಡು

ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಸಿನಿಮಾದ ಮೊದಲ ಹಾಡು ಬಿಡುಗಡೆಯಾಗಿದೆ. 'ವರ್ಣಮಾಲೆ'ಯೆಂಬ ಈ ಭಿನ್ನವಾದ ಹಾಡನ್ನು ಸುನಿ ಅವರೇ ಬರೆದಿದ್ದು, ಶೀಘ್ರದಲ್ಲೇ ಸಿನಿಮಾವೂ ತೆರೆಗೆ ಬರಲಿದೆ.

'ಇವನೊಂಥರ ಈ ಹ್ರಸ್ವಸ್ವರ, ಅವಳೊಂಥರ ಆ ದೀರ್ಘಸ್ವರ...'

ಎಂದು ಆರಂಭವಾಗುವ ಈ ಹಾಡಿಗೆ ಜೂಡಾ ಸ್ಯಾಂಡಿ ಸಂಗೀತವಿದೆ. ದುಷ್ಯಂತ್ ಹಾಗೂ ಆಶಿಕಾ ರಂಗನಾಥ್ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾದ ಚಿತ್ರೀಕರಣ 2022ರಲ್ಲಿ ಆರಂಭವಾಗಿತ್ತು. ಎಲ್ಲಾ ಪ್ರಕಾರದ ಸಿನಿಮಾಗಳ ಪ್ರಯೋಗ ಮಾಡಿರುವ ಸಿಂಪಲ್ ಸುನಿ, ಈ ಸಿನಿಮಾ ಮೂಲಕ ಪ್ರೇಮಕಥೆಯೊಂದನ್ನು ಸೈಂಟಿಫಿಕ್ ಥ್ರಿಲ್ಲರ್ ಮಾದರಿಯಲ್ಲಿ ತೆರೆಗೆ ತರುತ್ತಿದ್ದಾರೆ. ಫ್ಯಾಂಟಸಿ ರೊಮ್ಯಾಂಟಿಕ್ ಕಾಮಿಡಿ ಕಥಾಹಂದರದ ಈ ಚಿತ್ರದಲ್ಲಿ ವಿಎಫ್‌ಎಕ್ಸ್ ಕಲಾವಿದನ ಪಾತ್ರದಲ್ಲಿ ದುಷ್ಯಂತ್ ಕಾಣಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಸಿನಿಮಾದಲ್ಲಿ ಅವರೆತ್ತುವ ಅವತಾರಕ್ಕೆ ಪೂರಕವಾಗಿ ಆಶಿಕಾ ಕೂಡಾ ಹಲವು ಭಿನ್ನಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ದೇವಕನ್ಯೆಯಾಗಿ, ಪೋರ್ಚುಗೀಸ್ ಮರ್ಚೆಂಟ್ ಆಗಿ ಹೀಗೆ ನಾನಾ ಪಾತ್ರಗಳಲ್ಲಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ.

ಸಿನಿಮಾಗೆ ಕಥೆ-ಚಿತ್ರಕಥೆ ಮತ್ತು ಸಂಭಾಷಣೆಯನ್ನು ಸುನಿ ಅವರೇ ಬರೆದಿದ್ದಾರೆ. ಮಾತಾ ಮೂವಿ ಮೇಕರ್ಸ್ ಹಾಗೂ ಸುನಿ ಚಿತ್ರ ನಿರ್ಮಾಣ ಮಾಡುತ್ತಿದ್ದು, ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ ಸಿನಿಮಾಗಿದೆ. ಮಡಿಕೇರಿ, ಮಂಗಳೂರು, ಪೋರ್ಚುಗಲ್‌ನಲ್ಲಿ ಸಿನಿಮಾದ ದೃಶ್ಯಗಳನ್ನು ಸೆರೆಹಿಡಿಯಲಾಗಿದೆ. 'ಬಿಗ್‌ಬಾಸ್' ಖ್ಯಾತಿಯ ಕಿಶನ್ ಬಿಳಗಲಿ 'ಅನಾಮದೇವ' ಎಂಬ ಪಾತ್ರದಲ್ಲಿ ಈ ಸಿನಿಮಾದಲ್ಲಿ ನಟಿಸಿದ್ದಾರೆ.

'ಶರತ್ ಮತ್ತು ಶರಧಿ' ಎಂದ ಅಶ್ವಿನಿ ಅಂಗಡಿ

ಅಶ್ವಿನಿ ಅಂಗಡಿ ದಂಪತಿ ನಟಿಸಿರುವ 'ಶರತ್ ಮತ್ತು ಶರಧಿ' ಕಿರುಚಿತ್ರ ಇತ್ತೀಚೆಗಷ್ಟೇ ವಿಶೇಷ ಪ್ರದರ್ಶನ ಕಂಡಿತು. ಈ ಅಂಧ ದಂಪತಿ ಇಲ್ಲಿಯೂ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಈ ಕಿರುಚಿತ್ರವನ್ನು ಎಂ.ಜಗದೀಶ್ ಬರೆದು, ನಿರ್ದೇಶಿಸಿದ್ದಾರೆ. ಟಾಕ್‌ಗುರು ಕ್ರಿಯೇಶನ್ಸ್ ಅಡಿಯಲ್ಲಿ ಗಣೇಶ್.ಬಿ.ಎಂ. ಬಂಡವಾಳ ಹೂಡಿದ್ದಾರೆ.

'ಒಂದು ಸನ್ನಿವೇಶದಲ್ಲಿ ನಾವು ಕರೆಂಟ್ ಬಿಲ್ ದುಡ್ಡು ಉಳಿಸಬಹುದು ಎಂಬ ಸಂಭಾಷಣೆ ಇತ್ತು. ಅಶ್ವಿನಿಯವರು ಇದನ್ನು ತೆಗೆದುಬಿಡಿ. ನಮಗೆ ಕತ್ತಲೆ ಇರಬಹುದು. ನಮ್ಮ ಮನಸಲ್ಲಿ ಕತ್ತಲಿರಬಾರದು. ಹಾಗೇನಾದರೂ ಇದ್ದರೆ ನಮ್ಮದು ಕತ್ತಲೆ ಮನೆ ಎಂದಾಗುತ್ತದೆ ಎಂದರು. ಈ ದಂಪತಿ ಬದುಕನ್ನು ಸಕರಾತ್ಮಕವಾಗಿ ನೋಡುತ್ತಿದ್ದಾರೆ. ದತ್ತಣ್ಣ ಕೂಡ ಕಿರುಚಿತ್ರವೆಂದು ನೋಡದೆ ಚಿತ್ರದ ವಿಷಯದ ಮೇಲಿನ ಕಾಳಜಿಯಿಂದ ನಟಿಸಿದ್ದಾರೆ' ಎಂದರು ನಿರ್ದೇಶಕರು.

'ವೀರೇಶ್ ಹಾಗೂ ಅಶ್ವಿನಿ ದಂಪತಿ ಎಲ್ಲರ ಮಧ್ಯೆ ಸುಖದಿಂದ ಬದುಕಿನ ಪಯಣ ಸಾಗಿಸುತ್ತಿದ್ದಾರೆ. ನಮಗೂ ಅವರಿಗೂ ದೊಡ್ಡ ವ್ಯತ್ಯಾಸವೇನೂ ಇಲ್ಲ. ಸಮಾಜ ಕೂಡ ಅವರನ್ನು ಬೇರೆ ರೀತಿಯಲ್ಲಿ ನೋಡಬೇಕಾದ ಅಗತ್ಯ ಇಲ್ಲ. ನಾವು ವಿಭಿನ್ನವಾಗಿ ಸಬಲರಾಗಿದ್ದೇವೆ. ಆದರೆ ನಾವು ಅಂಗವಿಕಲರಲ್ಲ ಎಂಬ ಅರ್ಥಪೂರ್ಣ ಸಂದೇಶವನ್ನು ನಿರ್ದೇಶಕರು ಚಿತ್ರದಲ್ಲಿ ಹೇಳಿದ್ದಾರೆ' ಎಂದರು ದತ್ತಣ್ಣ.

ಸತೀಶ್ ಪದ್ಮನಾಭನ್ ಸಂಗೀತ, ವಿನಯ್ ಹೊಸಗೌಡರ್ ಛಾಯಾಚಿತ್ರಗ್ರಹಣ, ಸುಪ್ರೀತ್.ಬಿ.ಕೆ ಸಂಕಲನವಿದೆ.



ಚಿತ್ರತಂಡ

ಅವನತಿ: ಕ್ಯಾನ್ಸರ್‌ಗೆ ಹೋಲಿಸಿದ ಸ್ಯಾಮಿ

'ಟೀಕೆಗಳಿಗೆ ಮುಕ್ತ' ಎಂದ ವೆಸ್ಟ್ ಇಂಡೀಸ್ ಕೋಚ್

ನವದೆಹಲಿ (ಪಿಟಿಐ): ಮಾಜಿ ನಾಯಕ ಹಾಗೂ ಹಾಲಿ ಕೋಚ್ ಡಾರೆನ್ ಸ್ಯಾಮಿ ಅವರು, ವೆಸ್ಟ್ ಇಂಡೀಸ್ ಕ್ರಿಕೆಟ್‌ನ ಅಧಃಪತನವನ್ನು, ವ್ಯವಸ್ಥೆಯೊಳಗೆ ದೀರ್ಘಕಾಲದಿಂದ ಬೆಳವಣಿಗೆಗೊಂಡ ಕ್ಯಾನ್ಸರ್‌ಗೆ ಹೋಲಿಸಿದ್ದಾರೆ.

ಚುಟುಕು ಮಾದರಿಗೆ ಈಗಿನ ತಲೆಮಾರಿನ ಆಟಗಾರರಿಗೆ ಸಾಕಷ್ಟು ಮಂದಿ ಆದರ್ಶಪ್ರಾಯರು ಸಿಗುತ್ತಾರೆ. ತಮಗೆ ಲಭ್ಯವಿರುವ ಸಂಪನ್ಮೂಲದಿಂದ ಅವರು ಆಡುತ್ತಾರೆ. ಆದರೆ ಟೆಸ್ಟ್ ಮಾದರಿಗೆ ಬಂದಾಗ ವೆಸ್ಟ್ ಇಂಡೀಸ್ ಕ್ರಿಕೆಟ್ ಅನ್ನು ಕಾಡುತ್ತಿರುವುದೇನು ಎಂಬ ಪ್ರಶ್ನೆಗೆ ಅವರು ಕಟು ಮಾತುಗಳಲ್ಲಿ ಉತ್ತರಿಸಿದರು.

ಕೊನೆಯ ಬಾರಿ 1983–84ರಲ್ಲಿ ಕ್ಲೈವ್ ಲಾಯ್ಡ್ ನೇತೃತ್ವದ ವೆಸ್ಟ್ ಇಂಡೀಸ್ ತಂಡ ಭಾರತದಲ್ಲಿ ಟೆಸ್ಟ್ ಸರಣಿ ಗೆದ್ದುಕೊಂಡಿತ್ತು. 'ನಾವು ಇಲ್ಲಿ ಕೊನೆಯ ಸಲ ಸರಣಿ ಗೆದ್ದಾಗ, ನಾನಿನ್ನೂ ತಾಯಿಯ ಉದರದಲ್ಲಿದ್ದೆ' ಎಂದು ಮುಗುಳ್ನಗುತ್ತಲೇ ಆರಂಭಿಸಿದ ಅವರು ತಕ್ಷಣ



ವೆಸ್ಟ್ ಇಂಡೀಸ್ ತಂಡದ ಕೋಚ್ ಡಾರೆನ್ ಸ್ಯಾಮಿ

ಗಂಭೀರರಾದರು. 'ನನಗೆ ಗೊತ್ತು ಎಲ್ಲರ ಕಣ್ಣುಗಳು ಈಗ ನನ್ನತ್ತ ನೆಟ್ಟಿವೆ. ನಾವು ಟೀಕೆಗಳಿಗೆ ಮುಕ್ತರಾಗಿದ್ದೇವೆ. ಆದರೆ ಈ ಸಮಸ್ಯೆಯ ಬೇರುಗಳು ಒಂದೆರಡು ವರ್ಷ ಹಿಂದೆ ಬಿಟ್ಟಿದ್ದಲ್ಲ. ಈ ಅಧಃಪತನ ಎಂಬ ಕ್ಯಾನ್ಸರ್ ಅದಕ್ಕೆ ಮೊದಲೇ ಕಾಣಿಸಿಕೊಂಡಿತ್ತು' ಎಂದು ಹೇಳಿದರು.

ಭಾರತ ವಿರುದ್ಧ ಅಹಮದಾಬಾದಿನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯವನ್ನು ವೆಸ್ಟ್ ಇಂಡೀಸ್ 140 ರನ್‌ಗಳಿಂದ ಸೋತಿತ್ತು. ಆದರೆ ತಂಡ ಹೋರಾಟ ನೀಡದೇ ಸೋತ ರೀತಿ ಅಭಿಮಾನಿಗಳಿಗೆ ನಿರಾಶೆ ಮೂಡಿಸಿತ್ತು. ಆಟಗಾರರಿಗೆ ಕ್ರಿಕೆಟ್ ಪ್ರೇಮ ಹೃದಯದೊಳಗಿಂದ ಬರಬೇಕು ಎಂದು ಕೆರೀಬಿಯನ್ ಕ್ರಿಕೆಟ್ ದಿಗ್ಗಜ ಬ್ರಯಾನ್ ಲಾರಾ ಅವರು ವ್ಯಥೆಯಿಂದ ಹೇಳಿದ್ದರು.

'ನಮ್ಮ ಬಳಿ ಏನು ಲಭ್ಯವಿದೆ. ಆಡುವುದಕ್ಕೆ ಯಾರಿಗೆ ಮನಸ್ಸಿದೆ.. ಹೀಗೆ ಸೀಮಿತ ಸಂಪನ್ಮೂಲಗಳಲ್ಲೇ ನಾವು ಕೆಲಸ ಮಾಡಲು ಸಾಧ್ಯ. ಮೊದಲ ಮೂರು ಕ್ರಮಾಂಕದಲ್ಲಿರುವ ತಂಡಗಳಿಗೂ, ನಂತರದ ನಾಲ್ಕು ಕ್ರಮಾಂಕದ ತಂಡಗಳಿಗೂ ಸಾಕಷ್ಟು ಅಂತರವಿದೆ. ಸೌಲಭ್ಯಗಳು, ಪ್ರತಿಭಾ ಸಂಪನ್ಮೂಲ, ತಾಂತ್ರಿಕ ಪರಿಣತಿ ನಮ್ಮಲ್ಲಿಲ್ಲ ಎಂಬುದು ರಹಸ್ಯವೇನಲ್ಲ ಎಂದು ನಾನು ಆಟಗಾರರಿಗೆ ಹೇಳುತ್ತಿರುತ್ತೇನೆ. ನಾವು ಹಲವು ವರ್ಷಗಳಿಂದ ಆರ್ಥಿಕ ಬಿಕ್ಕಟ್ಟನ್ನೂ ಎದುರಿಸುತ್ತಿದ್ದೇವೆ. ಪ್ರಾಯೋಜಕರ ತಲಾಷೆಯಲ್ಲಿದ್ದೇವೆ. ಲಾರಾ, ಶಿವ್ (ಚಂದ್ರಪಾಲ್) ಸಹ ಈ ಬಗ್ಗೆ ಪ್ರಯತ್ನದಲ್ಲಿದ್ದಾರೆ' ಎಂದು ಸ್ಯಾಮಿ ಹೇಳಿದರು.

'ವೆಸ್ಟ್ ಇಂಡೀಸ್ ತಂಡವು ಹಿಂದೆ ಟೆಸ್ಟ್ ಕ್ರಿಕೆಟ್ ಉತ್ತುಂಗದಲ್ಲಿತ್ತು. ಆದರೆ ಆಗ ಮಂಡಳಿಯು ಭಾರತದಲ್ಲಿ ಬಿಸಿಸಿಐ ಮಾಡಿದ ರೀತಿಯಲ್ಲಿ ವಾಣಿಜ್ಯದ ದೃಷ್ಟಿಯಿಂದ ಲಾಭ ಮಾಡಿಕೊಳ್ಳಲು ಹೋಗಲಿಲ್ಲ. ಈ ಬಗ್ಗೆ ವಿಷಾದವಿದೆ' ಎಂದು ಅವರು ಹೇಳಿದರು.

ಭಾರತ ತಂಡ 15ರಂದು ಪರ್ತ್‌ಗೆ

ನವದೆಹಲಿ (ಪಿಟಿಐ): ಭಾರತ ಏಕದಿನ ಕ್ರಿಕೆಟ್ ತಂಡವು ಅಕ್ಟೋಬರ್ 15ರಂದು ಎರಡು ಪ್ರತ್ಯೇಕ ಗುಂಪುಗಳಲ್ಲಿ ಇಲ್ಲಿಂದ ಆಸ್ಟ್ರೇಲಿಯಾಕ್ಕೆ ಪ್ರಯಾಣಿಸಲಿದೆ. ಆಸ್ಟ್ರೇಲಿಯಾ ಪ್ರವಾಸದಲ್ಲಿ ಭಾರತ ತಂಡವು ಮೂರು ಪಂದ್ಯಗಳ ಏಕದಿನ ಸರಣಿ ಹಾಗೂ ಐದು ಪಂದ್ಯಗಳ ಟಿ20 ಸರಣಿಯಲ್ಲಿ ಆಡಲಿದೆ.


ಬಿಸಿಸಿಐ ಮೂಲಗಳ ಪ್ರಕಾರ, ಆಟಗಾರರ ಒಂದು ತಂಡವು ರಾಜಧಾನಿಯಿಂದ ಬೆಳಿಗ್ಗೆ ಪರ್ತ್‌ಗೆ ಹೊರಡಲಿದೆ. ಎರಡನೇ ತಂಡವು ಸಂಜೆ ನಿರ್ಗಮಿಸುವ ಸಾಧ್ಯತೆಯಿದೆ. ಆದರೆ ಇವೆಲ್ಲವೂ ಬಿಸಿನೆಸ್ ಕ್ಲಾಸ್ ಟಿಕೆಟ್‌ಗಳ ಲಭ್ಯತೆ ಆಧರಿಸಿರುತ್ತದೆ.

ತಂಡ ಹೊರಡುವ ಮೊದಲು, ಮಾಜಿ ನಾಯಕರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ನವದೆಹಲಿಯಲ್ಲಿ ಉಳಿದ ಆಟಗಾರರನ್ನು ಸೇರಿಕೊಳ್ಳಲಿದ್ದಾರೆ.

ಪರ್ತ್‌ನಲ್ಲಿ ಅ.19ರಂದು ಮೊದಲ ಏಕದಿನ ಪಂದ್ಯ ನಿಗದಿಯಾಗಿದೆ.

ಭಾರತಕ್ಕೆ ಇಂದು ಸಿಂಗಪುರ ಸವಾಲು

ಸಿಂಗಪುರ (ಪಿಟಿಐ): ರಾಷ್ಟ್ರೀಯ ಶಿಬಿರದ ಮೊದಲಾರ್ಧದಲ್ಲಿ ಗೊಂದಲಗಳನ್ನು ಮಾಡಿಕೊಂಡ ನಂತರ ಈಗ ಭಾರತ ಫುಟ್‌ಬಾಲ್ ತಂಡ ಎಎಫ್‌ಸಿ ಏಷ್ಯನ್ ಕಪ್ ಅರ್ಹತಾ ಹಂತದ ಮೂರನೇ ಸುತ್ತಿನ ನಿರ್ಣಾಯಕ ಪಂದ್ಯದಲ್ಲಿ ಗುರುವಾರ ಸಿಂಗಪುರ ತಂಡವನ್ನು ಇಲ್ಲಿ ಎದುರಿಸಲಿದೆ.



ಆಗಸ್ಟ್– ಸೆಪ್ಟೆಂಬರ್‌ನಲ್ಲಿ ನಡೆದ ಸಿಎಎಫ್‌ಎ ನೇಷನ್ಸ್ ಕಪ್‌ಗೆ ವಿಶ್ರಾಂತಿ ಪಡೆದಿದ್ದ ಅನುಭವಿ ಆಟಗಾರ ಸುನಿಲ್ ಚೆಟ್ರಿ ಅವರು ತಂಡಕ್ಕೆ ಮರಳಿದ್ದಾರೆ. ಆದರೆ ಈ ಮಹತ್ವದ ಪಂದ್ಯಕ್ಕೆ ಪೂರ್ವಭಾವಿಯಾಗಿ ಎಲ್ಲ ಆಟಗಾರರು ರಾಷ್ಟ್ರೀಯ ಶಿಬಿರಕ್ಕೆ ಹಾಜರಾಗಿದ್ದು ಕೇವಲ ಒಂದು ವಾರವಿರುವಾಗ.

ನಾಲ್ಕು ತಂಡಗಳ 'ಸಿ' ಗುಂಪಿನಲ್ಲಿ ಭಾರತ ಮೊದಲ ಎರಡು ಪಂದ್ಯಗಳ ನಂತರ ಕೇವಲ ಒಂದು ಪಾಯಿಂಟ್ ಗಳಿಸಿದ್ದು ತಳದಲ್ಲಿದೆ. ಬಾಂಗ್ಲಾದೇಶ ಜೊತೆ (0–0) ಡ್ರಾ ಮಾಡಿಕೊಂಡ ಭಾರತವು, ಹಾಂಗ್‌ಕಾಂಗ್ ಎದುರು (0–1) ಸೋತಿತ್ತು. ಭಾರತ ಒಂದು ಕಡೆ ಪರದಾಡಿದರೆ, ಇನ್ನೊಂದು ಕಡೆ ಸಿಂಗಪುರ ಎರಡು ಪಂದ್ಯಗಳಲ್ಲಿ ನಾಲ್ಕು ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನದಲ್ಲಿದೆ.

ಗುರುವಾರದ ಪಂದ್ಯದಲ್ಲಿ ಭಾರತ ಏನಾದರೂ ಹಿನ್ನಡೆ ಕಂಡರೆ 2027ರ ಪ್ರಧಾನ ಟೂರ್ನಿಯಲ್ಲಿ ಆಡುವ ಅವಕಾಶ ಕಳೆದುಕೊಂಡಂತೆಯೇ. ಗುಂಪಿನಿಂದ ಒಂದು ತಂಡ ಮಾತ್ರ ಪ್ರಧಾನ ಸುತ್ತಿಗೆ ಅರ್ಹತೆ ಪಡೆಯುತ್ತದೆ.

2022ರಲ್ಲಿ ಸಿಂಗಪುರ ಎದುರು ಭಾರತ ಕೊನೆಯ ಬಾರಿ ಆಡಿದಾಗ ಆ ಪಂದ್ಯ 1–1 ಡ್ರಾ ಆಗಿತ್ತು.

ಪಂದ್ಯ ಆರಂಭ: ಸಂಜೆ 5

ಸ್ಪೋರ್ಟಿಂಗ್ ಕ್ಲಬ್ ತಂಡಕ್ಕೆ ಜಯ

ಬೆಂಗಳೂರು: ಆರ್. ಶೌರ್ಯ (10ನೇ ನಿ.) ಹಾಗೂ ಜೋಮನ್ ಜೇಕಬ್ (83 ಹಾಗೂ 85ನೇ ನಿಮಿಷ) ಅವರ ಆಟದ ನೆರವಿನಿಂದ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಬುಧವಾರ 3–0ಯಿಂದ ಭಾರತ್ ಬೆಂಗಳೂರು ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಪ್ರವೇಶ್ ಬಿಷ್ಟ್ ಅವರ (47ನೇ ನಿ.) ಗೋಲಿನ ನೆರವಿನಿಂದ ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡ 1–0ಯಿಂದ ಕೊಡಗು ಎಫ್‌ಸಿ ತಂಡವನ್ನು ಸೋಲಿಸಿತು. ಸೌತ್ ಯುನೈಟೆಡ್ ಎಫ್‌ಸಿ–ಬಿಎಫ್‌ಸಿ ನಡುವಣ ಪಂದ್ಯವು ಗೋಲು ರಹಿತ ಡ್ರಾ ಆಯಿತು.

ಮುಂಬೈ: ವಾಂಖೆಡೆ ಕ್ರೀಡಾಂಗಣದಲ್ಲಿ ವೆಂಗಸರ್ಕರ್ ಪ್ರತಿಮೆ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ದಿಲೀಪ್ ವೆಂಗಸರ್ಕರ್ ಅವರ ಆಳೆತ್ತರದ ಪ್ರತಿಮೆಯನ್ನು ವಾಂಖೆಡೆ ಕ್ರೀಡಾಂಗಣದಲ್ಲಿ ಅನಾವರಣ ಮಾಡಲಾಗುವುದು ಎಂದು ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ) ಬುಧವಾರ ಪ್ರಕಟಿಸಿದೆ. ಭಾರತದ ಕ್ರಿಕೆಟ್ ಮತ್ತು ಮುಂಬೈ ಕ್ರಿಕೆಟ್‌ಗೆ ಅವರು ಸಲ್ಲಿಸಿರುವ ಸೇವೆ ಗುರುತಿಸಿ ಗೌರವ ಸಲ್ಲಿಸಲು ಎಂಸಿಎ ಮುಂದಾಗಿದೆ.




ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಈ ಸಂಬಂಧ ನಿರ್ಣಯ ಕೈಗೊಳ್ಳಲಾಯಿತು. ರೈತ ಸಮುದಾಯದ ಜೊತೆ ಒಗ್ಗಟ್ಟಾಗಿ ನಿಲ್ಲಲು ಮುಖ್ಯಮಂತ್ರಿ ಪರಿಹಾರ ನಿಧಿಗೆ ₹1 ಕೋಟಿ ದೇಣಿಗೆ ನೀಡಲೂ ಸಭೆಯು ನಿರ್ಧರಿಸಿತು. ಮುಂಬೈ ತಂಡದ ಆಟಗಾರರು ಈ ಉದ್ದೇಶಕ್ಕೆ ಒಟ್ಟಾಗಿ ₹25 ಲಕ್ಷ ನೀಡಲಿದ್ದಾರೆ.

ವೆಂಗಸರ್ಕರ್ ಅವರು 1976 ರಿಂದ 1992ರ ಅವಧಿಯಲ್ಲಿ 116 ಟೆಸ್ಟ್ ಹಾಗೂ 129 ಏಕದಿನ ಪಂದ್ಯಗಳನ್ನು ಆಡಿದ್ದರು. ಅವರು 10 ಟೆಸ್ಟ್ ಮತ್ತು 18 ಏಕದಿನ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದರು. ಮೂರನೇ ಕ್ರಮಾಂಕದ ಬ್ಯಾಟರ್ ಆಗಿ ಅವರು 42.13 ಸರಾಸರಿಯಲ್ಲಿ 6,868 ರನ್ ಗಳಿಸಿದ್ದಾರೆ. 17 ಶತಕಗಳು ಮತ್ತು 35 ಅರ್ಧ ಶತಕಗಳು ಇದರಲ್ಲಿ ಒಳಗೊಂಡಿವೆ. ಏಕದಿನ ಪಂದ್ಯಗಳಲ್ಲಿ ಅವರು 23 ಶತಕಗಳನ್ನು ಒಳಗೊಂಡ 3,508 ರನ್ (34.73 ಸರಿ) ಗಳಿಸಿದ್ದಾರೆ. ಭಾರತ ತಂಡದ ಆಯ್ಕೆ ಸಮಿತಿ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ.

ಜೂನ್‌ನಲ್ಲಿ ಅವರನ್ನು ಮಾಜಿ ನಾಯಕಿ ಡಯಾನ ಎಡುಲ್ಜಿ ಜೊತೆ ಮುಂಬೈ ಕ್ರಿಕೆಟ್ ಸಂಸ್ಥೆ ಸಲಹೆಗಾರರಾಗಿ ನೇಮಕ ಮಾಡಲಾಗಿತ್ತು.

ಬಿ.ಎಸ್. ಚಂದ್ರಶೇಖರ್, ಬ್ರಯನ್ ಲಾರಾಗೆ ಜೀವಮಾನ ಸಾಧನೆ ಪ್ರಶಸ್ತಿ ಗರಿ

ಮುಂಬೈ (ಪಿಟಿಐ): ಸ್ಪಿನ್ ಬೌಲಿಂಗ್ ದಂತಕಥೆ, ಕನ್ನಡಿಗ ಬಿ.ಎಸ್. ಚಂದ್ರಶೇಖರ್ ಅವರಿಗೆ ಜೀವಮಾನ ಸಾಧನೆಗಾಗಿ ಸಿಯೆಟ್ ಕ್ರಿಕೆಟ್ ರೇಟಿಂಗ್ ಪುರಸ್ಕಾರ ನೀಡಿ ಗೌರವಿಸಲಾಯಿತು.



ಚಂದ್ರಶೇಖರ್



ಬ್ರಯನ್ ಲಾರಾ

ಮಂಗಳವಾರ ರಾತ್ರಿ ನಡೆದ ಸಮಾರಂಭದಲ್ಲಿ ವೆಸ್ಟ್ ಇಂಡೀಸ್ ತಂಡದ ದಿಗ್ಗಜ ಬ್ಯಾಟರ್ ಬ್ರಯನ್ ಲಾರಾ ಅವರಿಗೂ ಜೀವಮಾನ ಸಾಧನೆ ಗೌರವ ಪ್ರದಾನ ಮಾಡಲಾಯಿತು.

ಪ್ರಸ್ತುತ ಭಾರತ ಟಿ20 ತಂಡದ ವಿಕೆಟ್‌ಕೀಪರ್ ಬ್ಯಾಟರ್ ಸಂಜು ಸ್ಯಾಮ್ಸನ್ ಮತ್ತು ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ವರ್ಷದ ಸಾಧಕರ ಗೌರವ ಗಳಿಸಿದರು.

ಭಾರತ ತಂಡದ ನಿಕಟಪೂರ್ವ ನಾಯಕ ರೋಹಿತ್ ಶರ್ಮಾ ಅವರಿಗೆ ವಿಶೇಷ ಸ್ಮರಣಿಕೆ ನೀಡಲಾಯಿತು. ಈಚೆಗೆ ಅವರ ನಾಯಕತ್ವದಲ್ಲಿ ಭಾರತ ತಂಡವು ಐಸಿಸಿ ಚಾಂಪಿಯನ್ಸ್ ಟ್ರೋಫಿ ಜಯಿಸಿತ್ತು. ಇದೇ ಟೂರ್ನಿಯಲ್ಲಿ ಅತ್ಯಧಿಕ ರನ್ ಗಳಿಸಿದ್ದ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರೂ ವಿಶೇಷ ಗೌರವಕ್ಕೆ ಪಾತ್ರರಾದರು.

ಟೆಸ್ಟ್ ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಗಳಿಸಿರುವ ಎರಡನೇ ಬ್ಯಾಟರ್ ಇಂಗ್ಲೆಂಡ್‌ನ ಜೋ ರೂಟ್ ಅವರಿಗೆ ಪುರುಷರ ವಿಭಾಗದ ಅಂತರ ರಾಷ್ಟ್ರೀಯ ಕ್ರಿಕೆಟಿಗ ಪ್ರಶಸ್ತಿ ನೀಡಲಾಯಿತು. ಹ್ಯಾರಿ ಬ್ರೂಕ್ ವರ್ಷದ ಬ್ಯಾಟರ್, ಶ್ರೀಲಂಕಾದ ಪ್ರಭಾತ್ ಜಯಸೂರ್ಯ ಅವರಿಗೆ ವರ್ಷದ ಬೌಲರ್ ಗೌರವ ನೀಡಲಾಯಿತು. ಭಾರತ ಮಹಿಳಾ ತಂಡದ ದೀಪ್ತಿ ಶರ್ಮಾ ಅವರಿಗೆ ವರ್ಷದ ಅಂತರ ರಾಷ್ಟ್ರೀಯ ಬೌಲರ್ ಹಾಗೂ ಸ್ಮೃತಿ ಮಂದಾನಗೆ ಉತ್ತಮ ಬ್ಯಾಟರ್ ಗೌರವ ಒಲಿಯಿತು.

ಕಳೆದ ರಣಜಿ ಟ್ರೋಫಿ ಕ್ರಿಕೆಟ್ ಋತುವಿನಲ್ಲಿ 69 ವಿಕೆಟ್ ಗಳಿಸಿದ ವಿದರ್ಭ ತಂಡದ ಹರ್ಷ್ ದುಬೆ ಅವರಿಗೆ ದೇಶಿ ಕ್ರಿಕೆಟ್ ಋತುವಿನ ಉತ್ತಮ ಆಟಗಾರ ಗೌರವ ಸಂದಿತು.

ಮುಂಬೈನ ಅಂಗಕ್ರಿಶ್ ರಘುವಂಶಿ ಅವರು 'ಉದಯೋನ್ಮುಖ ಆಟಗಾರ' ಪ್ರಶಸ್ತಿ ಗಳಿಸಿದರು.

ವೃಂದಾ ಅರ್ಧಶತಕ

ಗ್ವಾಲಿಯರ್: ವೃಂದಾ ದಿನೇಶ್ (54; 53ಎಸೆತ, 4X4, 6X1) ಅವರ ಅರ್ಧಶತಕದ ಬಲದಿಂದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮಹಿಳಾ ತಂಡವು ಇಲ್ಲಿ ನಡೆದ ಬಿಸಿಸಿಐ ಸೀನಿಯರ್ ಮಹಿಳಾ ಟಿ20 ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಹಿಮಾಚಲ ಪ್ರದೇಶ ಎದುರು 8 ವಿಕೆಟ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಹಿಮಾಚಲಪ್ರದೇಶ ಕ್ರಿಕೆಟ್ ಸಂಸ್ಥೆ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 108 (ಎಸ್.ಎಂ.ಸಿಂಗ್ 37, ಸೋನಲ್ ಎಸ್ ಠಾಕೂರ್ 23, ಮೋನಿಕಾ ಸಿ ಪಟೇಲ್ 16ಕ್ಕೆ2, ಬಿ.ಜಿ. ತೇಜಸ್ವಿನಿ 12ಕ್ಕೆ2)

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ: 19.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 111 (ವೃಂದಾ ದಿನೇಶ್ 54, ನಿಕಿ ಪ್ರಸಾದ್ ಔಟಾಗದೇ 35) ಕರ್ನಾಟಕ ತಂಡಕ್ಕೆ 8 ವಿಕೆಟ್‌ಗಳ ಜಯ.

ಸಮಂತಾ ರುತ್‌ಪ್ರಭು ಜೋಯಾಲುಕ್ಕಾಸ್ ಹೊಸ ಬ್ರಾಂಡ್ ಅಂಬಾಸಿಡರ್

ವಿಶ್ವದ ಅಚ್ಚುಮೆಚ್ಚಿನ ಜ್ಯುವೆಲ್ಲರ್ ಜೋಯಾಲುಕ್ಕಾಸ್, ತನ್ನ ಹೊಸ ಬ್ರಾಂಡ್ ಅಂಬಾಸಿಡರ್ ಆಗಿ ಲೇಡಿ ಸೂಪರ್‌ಸ್ಟಾರ್ ಸಮಂತಾ ರುತ್‌ಪ್ರಭು ಅವರನ್ನು ನಿಯುಕ್ತಿಗೊಳಿಸಿದೆ. ಪ್ರಶಸ್ತಿ ಪುರಸ್ಕೃತ ನಟಿ ಜೋಯಾಲುಕ್ಕಾಸ್ ಆಭರಣಗಳ ಕಾಲಾತೀತ ವಿನ್ಯಾಸ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕರಕುಶಲತೆಯ ಸ್ಫೂರ್ತಿದಾಯಕ ಪರಂಪರೆಯನ್ನು ಪ್ರತಿನಿಧಿಸಲು ತಮ್ಮ ಅಪ್ರತಿಮ ವರ್ಚಸ್ಸನ್ನು ತರಲಿದ್ದಾರೆ.

ಈ ಸಹಯೋಗವು ಪರಿಪೂರ್ಣತೆ, ದೃಢತೆ ಮತ್ತು ಅನುಗ್ರಹದೊಂದಿಗೆ ಆಳವಾದ ಸಂಪರ್ಕವನ್ನು ಹಂಚಿಕೊಳ್ಳುವ ಎರಡು ಐಕಾನ್‌ಗಳನ್ನು ಒಟ್ಟುಗೂಡಿಸುತ್ತದೆ. ಸಮಂತಾ ಅವರ ಪ್ರೀತಿಯ ಮೋಡಿ ಮತ್ತು ಅನುರೂಪ ಚೆಲುವು ಜೋಯಾಲುಕ್ಕಾಸ್‌ನ ಮೂರು ದಶಕಗಳ ಪಯಣವನ್ನು ಸಂಪೂರ್ಣವಾಗಿ ಪ್ರತಿಬಿಂಬಿಸುತ್ತದೆ, ಇದು ಕಲಾತ್ಮಕತೆ, ನಂಬಿಕೆ ಮತ್ತು ವಿಶ್ವಾದ್ಯಂತ ಲಕ್ಷಾಂತರ ಗ್ರಾಹಕರನ್ನು ಸಂತಸಪಡಿಸುವ ಅಚಲ ಬದ್ಧತೆಯ ಮೇಲೆ ನಿರ್ಮಿಸಲಾಗಿದೆ.

"ಸಮಂತಾ ಆತ್ಮವಿಶ್ವಾಸ, ಸೊಗಸಾದ ಶೈಲಿ ಮತ್ತು ನಿಜವಾಗಿಯೂ ವಿಶಿಷ್ಟವಾದ ಆಧುನಿಕ ಮಹಿಳೆಯ ಚೈತನ್ಯವನ್ನು ಸಾಕಾರಗೊಳಿಸುತ್ತಾರೆ. ಅವರ ವ್ಯಕ್ತಿತ್ವವು ಜೀವನದ ಅಮೂಲ್ಯ ಕ್ಷಣಗಳನ್ನು ಉತ್ತಮ ಆಭರಣಗಳೊಂದಿಗೆ ಆಚರಿಸುವ ನಮ್ಮ ನೀತಿಯೊಂದಿಗೆ



ಆಳವಾಗಿ ಪ್ರತಿಧ್ವನಿಸುತ್ತದೆ" ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಡಾ. ಜೋಯ್ ಆಲುಕ್ಕಾಸ್ ಹೇಳಿದರು. "ಜಗತ್ತಿನಾದ್ಯಂತ ಆಭರಣಪ್ರಿಯರನ್ನು ಪ್ರೇರೇಪಿಸುವುದನ್ನು ನಾವು ಮುಂದುವರಿಸುತ್ತಿರುವಾಗ, ಅವರನ್ನು ಜೋಯಾಲುಕ್ಕಾಸ್ ಕುಟುಂಬಕ್ಕೆ ಸ್ವಾಗತಿಸುವುದು ನಮಗೆ ಗೌರವವಾಗಿದೆ" ಎಂದು ಅವರು ಹೇಳಿದರು.

ತಮ್ಮ ಸಂಭ್ರಮವನ್ನು ಹಂಚಿಕೊಂಡ ಸಮಂತಾ ರುತ್‌ಪ್ರಭು ಹೀಗೆ ಪ್ರತಿಕ್ರಿಯಿಸಿ: "ಆಭರಣಗಳು ನಾನು ಯಾರೆಂಬುದರ ವೈಯಕ್ತಿಕ ಅಭಿವ್ಯಕ್ತಿಯಾಗಿದೆ. ಪ್ರತಿಯೊಂದು ತುಣುಕಿನ ಹಿಂದೆಯೂ ಭಾವನೆ, ಆಚರಣೆ ಮತ್ತು ಶಕ್ತಿಯ ಕಥೆಯಾಗಿದೆ. ಜೋಯಾಲುಕ್ಕಾಸ್ ಈ ಎಲ್ಲಾ ಅಂಶಗಳನ್ನು ಮತ್ತು ಇನ್ನೂ ಹೆಚ್ಚಿನದನ್ನು ಒಳಗೊಂಡಿದೆ. ಸೌಂದರ್ಯವನ್ನು ವಸ್ತುವಿನೊಂದಿಗೆ ಆಚರಿಸುವ ಮತ್ತು ಎಲ್ಲೆಡೆ ಮಹಿಳೆಯರು ಆತ್ಮವಿಶ್ವಾಸದಿಂದ ಹೊಳೆಯಲು ಪ್ರೇರೇಪಿಸುವ ಬ್ರ್ಯಾಂಡ್‌ನೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲು ನಾನು ರೋಮಾಂಚನಗೊಂಡಿದ್ದೇನೆ."

ಈ ಸಹಯೋಗವು ಶೀಘ್ರದಲ್ಲೇ ಸಮಗ್ರ ಜಾಗತಿಕ ಅಭಿಯಾನದ ಮೂಲಕ ಜೀವಂತವಾಗಲಿದೆ. ಅಲ್ಲಿ ಸಮಂತಾ ಜೋಯಾಲುಕ್ಕಾಸ್‌ನ ಶ್ರೀಮಂತ ವಿನ್ಯಾಸ ಪರಂಪರೆಯನ್ನು ತನ್ನದೇ ಆದ ವಿಶೇಷ ರೀತಿಯಲ್ಲಿ ಪ್ರತಿನಿಧಿಸುತ್ತಾರೆ ಮತ್ತು ಜಾಗತಿಕ ಮಾರುಕಟ್ಟೆ ಮತ್ತು ಸಂಸ್ಕೃತಿಗಳಲ್ಲಿ ಬ್ರ್ಯಾಂಡ್‌ನ ಸಾರ್ವತ್ರಿಕ ಆಕರ್ಷಣೆಯನ್ನು ಮತ್ತಷ್ಟು ಅಧಿಕಗೊಳಿಸುತ್ತಾರೆ. ಈಗ ಜೋಯಾಲುಕ್ಕಾಸ್ ವಿಶ್ವಾದ್ಯಂತ ತನ್ನ ಬ್ರ್ಯಾಂಡ್‌ಅನ್ನು ಪ್ರತಿನಿಧಿಸಲು ಎರಡು ಜಾಗತಿಕ ಐಕಾನ್‌ಗಳನ್ನು ಬಳಸುತ್ತದೆ, ಅಂದರೆ ಖ್ಯಾತ ನಟಿ ಸಮಂತಾ ಮತ್ತು ಸುಪ್ರಸಿದ್ಧ ನಟಿ ಕಾಜೋಲ್.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಸ್ಮೃತಿ, ಜೆಮಿಮಾ ಮೇಲೆ ಕಣ್ಣು

ಭಾರತ–ದಕ್ಷಿಣ ಆಫ್ರಿಕಾ ಹಣಾಹಣಿ ಇಂದು • ದೀಪ್ತಿ, ಸ್ನೇಹಾ ಮೇಲೆ ವಿಶ್ವಾಸ



ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಬುಧವಾರ ಫೀಲ್ಡಿಂಗ್ ಅಭ್ಯಾಸ ನಡೆಸಿದರು ಪಿಟಿಐ ಚಿತ್ರ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ವಿಶಾಖಪಟ್ಟಣ (ಪಿಟಿಐ): ಭಾರತ ಮಹಿಳೆಯರ ಕ್ರಿಕೆಟ್ ತಂಡದ ಅಗ್ರ ಕ್ರಮಾಂಕದ ಬ್ಯಾಟರ್‌ಗಳಿಗೆ ಲಯಕ್ಕೆ ಮರಳಲು ಇದು ಸಕಾಲ. ಏಕೆಂದರೆ; ಹರ್ಮನ್‌ಪ್ರೀತ್ ಕೌರ್ ಬಳಗವು ದಕ್ಷಿಣ ಆಫ್ರಿಕಾದಂತಹ ಬಲಿಷ್ಠ ತಂಡವನ್ನು ಗುರುವಾರ ಎದುರಿಸಬೇಕಿದೆ.

ಐಸಿಸಿ ಏಕದಿನ ಮಹಿಳಾ ವಿಶ್ವಕಪ್ ಟೂರ್ನಿಯ ಪಾಯಿಂಟ್ ಪಟ್ಟಿಯಲ್ಲಿ ಭಾರತ ಸದ್ಯ ಎರಡನೇ ಸ್ಥಾನದಲ್ಲಿದೆ. ಶ್ರೀಲಂಕಾ ಮತ್ತು ಪಾಕಿಸ್ತಾನ ಎದುರು ಜಯ ಗಳಿಸಿದ ಭಾರತ ತಂಡಕ್ಕೆ ಈಗ ಸ್ವಲ್ಪ ಕಠಿಣ ಸವಾಲು ಎದುರಾಗಲಿದೆ.

ತಾರಾ ವರ್ಚಸ್ಸಿನ ಬ್ಯಾಟರ್ ಸ್ಮೃತಿ ಮಂದಾನ, ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಜೆಮಿಮಾ ರಾಡ್ರಿಗಸ್ ಅವರು ದೊಡ್ಡ ಇನಿಂಗ್ಸ್ ಆಡುವಲ್ಲಿ ಸತತ ವೈಫಲ್ಯ ಅನುಭವಿಸಿದ್ದಾರೆ. ಅವರು ತಮ್ಮ ಎಂದಿನ ಲಯಕ್ಕೆ ಮರಳಿದರೆ ದಕ್ಷಿಣ ಆಫ್ರಿಕಾ ಎದುರು ಗೆಲುವಿನ ನಿರೀಕ್ಷೆ ಮಾಡಬಹುದು. ಅಲ್ಲದೇ ಮುಂದಿನ ಹಂತದಲ್ಲಿ 'ಹಾಲಿ ಚಾಂಪಿಯನ್' ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ಬಾಂಗ್ಲಾ ತಂಡಗಳನ್ನೂ ಭಾರತ ತಂಡವು ಆತ್ಮವಿಶ್ವಾಸದಿಂದ ಎದುರಿಸಬಹುದು.

ಲಂಕಾ ಎದುರಿನ ಪಂದ್ಯದಲ್ಲಿ ಭಾರತ ತಂಡವು 124ಕ್ಕೆ 6 ವಿಕೆಟ್ ಕಳೆದುಕೊಂಡಿತ್ತು. ಪಾಕಿಸ್ತಾನ ತಂಡದ ಎದುರು ಕೂಡ 159 ರನ್‌ಗಳಿಗೆ ಐದು ವಿಕೆಟ್‌ಗಳು ಪತನವಾಗಿದ್ದವು. ಅದರ ನಂತರದ ಹಂತದಲ್ಲಿ ದೀಪ್ತಿ ಶರ್ಮಾ, ಸ್ನೇಹ ರಾಣಾ, ರಿಚಾ ಘೋಷ್ ಹಾಗೂ ಅಮನ್ಜೋತ್ ಕೌರ್ ಅವರ ದಿಟ್ಟ ಆಟದಿಂದಾಗಿ ತಂಡವು ಹೋರಾಟದ ಮೊತ್ತ ಪೇರಿಸಲು ಸಾಧ್ಯವಾಗಿತ್ತು.

ಆದರೆ ಯೋಜನಾಬದ್ಧ ಆಟವಾಡುವ ಮತ್ತು ತಾಂತ್ರಿಕ ಕೌಶಲಗಳಲ್ಲಿ ಉತ್ತಮ ಆಟಗಾರ್ತಿಯರು ಇರುವ ದಕ್ಷಿಣ ಆಫ್ರಿಕಾ ತಂಡದ ಎದುರು ಎಚ್ಚರಿಕೆಯಿಂದ ಆಡುವ ಅಗತ್ಯ ಇದೆ. ಆದ್ದರಿಂದ ಅಗ್ರಕ್ರಮಾಂಕದ ಬ್ಯಾಟರ್‌ಗಳ ಹೊಣೆಗಾರಿಕೆ ಹೆಚ್ಚಿದೆ.

ಅಲ್ಲದೇ ಗುವಾಹಟಿ ಮತ್ತು ಕೊಲಂಬೊದಲ್ಲಿ ಆಡಿರುವ ಪಿಚ್‌ಗಳಿಗಿಂತ ಎಸಿಎ–ವಿಡಿಸಿಎ ಕ್ರೀಡಾಂಗಣದ ಅಂಗಣವು ಭಿನ್ನವಾಗಿರುವುದು ಖಚಿತ. ಆದ್ದರಿಂದ ಅದಕ್ಕೆ ತಕ್ಕಂತೆ ತಂತ್ರಗಾರಿಕೆ ರೂಪಿಸುವುದು ಅನಿವಾರ್ಯವಾಗಲಿದೆ. ಸ್ಪಿನ್ನರ್ ದೀಪ್ತಿ ಶರ್ಮಾ ಅವರು ಭಾರತದ ಪರ ಅತ್ಯಧಿಕ ವಿಕೆಟ್ (6) ಪಡೆದ ಬೌಲರ್ ಆಗಿದ್ದಾರೆ. ಸ್ನೇಹ ರಾಣಾ ಮತ್ತು ಶ್ರೀ ಚರಣಿ ಕೂಡ ದೀಪ್ತಿಗೆ ಉತ್ತಮ ಬೆಂಬಲ ನೀಡಿದ್ದಾರೆ. ಮಧ್ಯಮವೇಗಿ ಕ್ರಾಂತಿ ಗೌಡ್ ಕೂಡ ಪರಿಣಾಮಕಾರಿಯಾಗಿದ್ದಾರೆ.

ಆದರೆ ಮಧ್ಯಮವೇಗಿ–ಆಲ್‌ರೌಂಡರ್ ಅಮನ್ಜೋತ್ ಕೌರ್ ಅವರು ಅಸ್ವಸ್ಥರಾಗಿರುವುದು ತಂಡದ ಚಿಂತೆಗೆ ಕಾರಣವಾಗಿದೆ. ಅದರಿಂದಾಗಿ ಕಳೆದ ಪಂದ್ಯದಲ್ಲಿ ಅವರು ಆಡಿರಲಿಲ್ಲ. ಮೊದಲ ಪಂದ್ಯದಲ್ಲಿ ಅವರು ಉಪಯುಕ್ತ ಆಟವಾಡಿ ತಂಡದ ಗೆಲುವಿಗೆ ಕಾರಣರಾಗಿದ್ದರು.

ದಕ್ಷಿಣ ಆಫ್ರಿಕಾದ ತಾಜ್ಮಿನ್ ಬ್ರಿಟ್ಸ್ ನ್ಯೂಜಿಲೆಂಡ್ ಎದುರು ಅಮೋಘ ಶತಕ ದಾಖಲಿಸಿದ್ದರು. ಸುನೆ ಲೂಸ್ ಉತ್ತಮ ಲಯದಲ್ಲಿದ್ದಾರೆ. ನಾಯಕಿ ವೊಲ್ವಾರ್ಟ್ ಮತ್ತು ಅನುಭವಿ ಮರೈಜನ್ ಕಾಪ್ ಅವರು ಕೂಡ ಪಂದ್ಯವನ್ನು ಗೆದ್ದುಕೊಡಬಲ್ಲ ಸಮರ್ಥರು. ಅವರನ್ನು ನಿಯಂತ್ರಿಸುವುದು ಹರ್ಮನ್ ಬಳಗದ ಮುಂದೆ ಇರುವ ಪ್ರಮುಖ ಸವಾಲು.

ಪಂದ್ಯ ಆರಂಭ: ಮಧ್ಯಾಹ್ನ 3
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಸ್ಟಾರ್ ಆ್ಯಪ್

ಮತ್ತೊಂದು ವಿವಾದದಲ್ಲಿ ಪೃಥ್ವಿ



ಪುಣೆ (ಪಿಟಿಐ): ಬ್ಯಾಟರ್ ಪೃಥ್ವಿ ಶಾ ಅವರು ಮತ್ತೊಂದು ವಿವಾದವನ್ನು ತಮ್ಮ ಮೈಮೇಲೆ ಎಳೆದುಕೊಂಡಿದ್ದಾರೆ.

ಸದ್ಯ ಮಹಾರಾಷ್ಟ್ರ ತಂಡವನ್ನು ಪ್ರತಿನಿಧಿಸುತ್ತಿರುವ ಪೃಥ್ವಿ ಅವರು ಇಲ್ಲಿ ಮಂಗಳವಾರ ನಡೆದ ರಣಜಿ ಟ್ರೋಫಿಯ ಪೂರ್ವಾಭ್ಯಾಸ ಪಂದ್ಯದಲ್ಲಿ ಎದುರಾಳಿ ಮುಂಬೈ ತಂಡದ ಆಟಗಾರನಿಗೆ ಬ್ಯಾಟ್ ಬೀಸಿ ತಿವಿಯಲು ಯತ್ನಿಸಿದರು.

25 ವರ್ಷದ ಬ್ಯಾಟರ್ ಪೃಥ್ವಿ ಈಚೆಗೆ ಮುಂಬೈ ತಂಡದಿಂದ ಮಹಾರಾಷ್ಟ್ರ ತಂಡಕ್ಕೆ ವಲಸೆ ಹೋಗಿದ್ದರು.

ಗಹುಂಜೆಯ ಎಂಸಿಎ ಮೈದಾನದಲ್ಲಿ ನಡೆದ ಈ ಅಭ್ಯಾಸ ಪಂದ್ಯದಲ್ಲಿ ಅವರು ಅಮೋಘ ಶತಕ (181; 220ಎ, 4X21, 6X3) ಹೊಡೆದು ಔಟಾದರು. ಅವರು ಪೆವಿಲಿಯನ್‌ಗೆ ಮರಳುವ ಸಂದರ್ಭದಲ್ಲಿ ಮುಂಬೈ ತಂಡದ ಮುಷೀರ್ ಖಾನ್ ವ್ಯಂಗ್ಯವಾಡಿದರು. ಇದರಿಂದ ಕುಪಿತರಾದ ಪೃಥ್ವಿ ತಮ್ಮ ಬ್ಯಾಟ್‌ನಿಂದ ಮುಷೀರ್ ಅವರಿಗೆ ತಿವಿಯುವಂತೆ ಬೀಸಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಅಂಪೈರ್‌ಗಳು ಮಧ್ಯಪ್ರವೇಶಿಸಿ ಪೃಥ್ವಿಯನ್ನು ಪೆವಿಲಿಯನ್‌ಗೆ ಕಳಿಸಿದರು. ಈ ಸಂದರ್ಭದಲ್ಲಿ ಮುಂಬೈ ಆಟಗಾರ ಸಿದ್ಧೇಶ್ ಲಾಡ್ ಕೂಡ ಅವರೊಂದಿಗೆ ಪೆವಿಲಿಯನ್‌ಗೆ ಸಾಗಿದರು.

ಪೃಥ್ವಿ ಭಾರತ ತಂಡವನ್ನು 5 ಟೆಸ್ಟ್, 6 ಏಕದಿನ ಮತ್ತು 1 ಟಿ20 ಪಂದ್ಯದಲ್ಲಿ ಪ್ರತಿನಿಧಿಸಿದ್ದಾರೆ.

ಯೂತ್ ಟೆಸ್ಟ್ ಪಂದ್ಯ ಗೆದ್ದು ಸರಣಿ ಕ್ಲೀನ್ ಸ್ವೀಪ್ ಮಾಡಿದ ಭಾರತ

ಮೆಕಾಯ್ (ಪಿಟಿಐ): ಭಾರತ 19 ವರ್ಷದೊಳಗಿನವರ ತಂಡವು ಎರಡನೇ ಹಾಗೂ ಅಂತಿಮ ಯುವ ಟೆಸ್ಟ್ ಪಂದ್ಯದ ಎರಡನೇ ದಿನವಾದ ಬುಧವಾರ ಆಸ್ಟ್ರೇಲಿಯಾ 19 ವರ್ಷದೊಳಗಿನವರ ತಂಡವನ್ನು 7 ವಿಕೆಟ್‌ಗಳಿಂದ ಸೋಲಿಸಿತು. ಆ ಮೂಲಕ ಸರಣಿಯನ್ನು 2–0 ಯಿಂದ ಕ್ಲೀನ್‌ಸ್ವೀಪ್ ಮಾಡಿತು.

ನಾಲ್ಕು ದಿನಗಳ ಈ ಪಂದ್ಯ ಎರಡನೇ ದಿನಗಳಲ್ಲಿ ಮುಗಿಯಿತು. ಆಸ್ಟ್ರೇಲಿಯಾ ಯುವ ತಂಡದ 135 ರನ್‌ಗಳಿಗೆ ಉತ್ತರವಾಗಿ ಮಂಗಳವಾರ 7 ವಿಕೆಟ್‌ಗೆ 144 ರನ್ ಗಳಿಸಿದ್ದ ಭಾರತ ಎರಡನೇ ದಿನದಾಟದಲ್ಲಿ 171 ರನ್‌ಗಳಿಗೆ ಆಲೌಟಾಯಿತು. ಆ ಮೂಲಕ 36 ರನ್ ಮುನ್ನಡೆ ಪಯಿತು.

ಆತಿಥೇಯ ತಂಡ ಎರಡನೇ ಇನಿಂಗ್ಸ್‌ನಲ್ಲಿ ಮತ್ತೊಮ್ಮೆ ಕಳಪೆಯಾಗಿ ಆಡಿ ಕೇವಲ 119 ರನ್‌ಗಳಿಗೆ ಪತನಗೊಂಡಿತು. ಗೆಲುವಿನಗೆ ಬೇಕಾದ 81 ರನ್‌ಗಳ ಗುರಿಯನ್ನು ಭಾರತ 12.2 ಓವರುಗಳಲ್ಲಿ (3 ವಿಕೆಟ್‌ಗೆ 83) ಹೊಡೆಯಿತು. ಆರಂಭ ಆಟಗಾರರಾದ ಆಯುಷ್ ಮ್ಹಾತ್ರೆ (13) ಮತ್ತು ವೈಭವ್ ಸೂರ್ಯವಂಶಿ (0) ಬೇಗ ನಿರ್ಗಮಿಸಿದರು.

ಆದರೆ ವಿಹಾನ್ ಮಲ್ಹೋತ್ರಾ ಹಾಗೂ ವೇದಾಂತ್ ತ್ರಿವೇದಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ ಯುವ ತಂಡ: 135 ಮತ್ತು 40.1 ಓವರುಗಳಲ್ಲಿ 116 (ಅಲೆಕ್ಸ್ ಲೀ ಯಂಗ್ 38; ಉಧವ್ ಮೋಹನ್ 17ಕ್ಕೆ2, ಹೆನಿಲ್ ಪಟೇಲ್ 23ಕ್ಕೆ3, ನಮನ್ ಪುಷ್ಪಕ್ 19ಕ್ಕೆ3, ಭಾರತ ಯುವ ತಂಡ: 171 ಮತ್ತು 12.2 ಓವರುಗಳಲ್ಲಿ 3ಕ್ಕೆ 83 (ವಿಹಾನ್ ಮಲ್ಹೋತ್ರಾ 21, ವೇದಾಂತ್ ತ್ರಿವೇದಿ ಔಟಾಗದೇ 33, ಕಾಸಿ ಬಾರ್ಟನ್ 32ಕ್ಕೆ2).

ಆಸ್ಟ್ರೇಲಿಯಾಕ್ಕೆ ಮಣಿದ ಸನಾ ಬಳಗ • ಅಲನಾ ಕಿಂಗ್ ಅರ್ಧಶತಕದ ಸೊಬಗು

ಮೂನಿ ಬೆತ್ ಆಟಕ್ಕೆ ಪಾಕಿಸ್ತಾನ ಚಿತ್!



ಆಸ್ಟ್ರೇಲಿಯಾದ ಬೆತ್ ಮೂನಿ (ಬಲ) ಹಾಗೂ ಅಲನಾ ಕಿಂಗ್ ಸಂಭ್ರಮ ಎಎಫ್‌ಪಿ ಚಿತ್ರ

ಕೊಲಂಬೊ (ಪಿಟಿಐ): ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ಬುಧವಾರ ಪಾಕಿಸ್ತಾನ ಎದುರು 76 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಆದರೆ ದಿಟ್ಟ ಹೋರಾಟ ಮಾಡಿದ ಬೆತ್ ಮೂನಿ ಆಸ್ಟ್ರೇಲಿಯಾ ತಂಡದ ಗೆಲುವಿಗೆ ಕಾರಣರಾದರು.

ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಆಸ್ಟ್ರೇಲಿಯಾ 107ರನ್‌ಗಳಿಂದ ಗೆದ್ದಿತು. ಟೂರ್ನಿಯಲ್ಲಿ ಮೂರನೇ ಪಂದ್ಯ ಆಡಿದ ಆಸ್ಟ್ರೇಲಿಯಾ ಎರಡನೇ ಗೆಲುವು ಸಾಧಿಸಿತು. ಶ್ರೀಲಂಕಾ ಎದುರಿನ ಪಂದ್ಯ ಮಳೆಗೆ ರದ್ದಾಗಿತ್ತು.

ಪಾಕಿಸ್ತಾನ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬೌಲರ್‌ಗಳು ಪಾಕ್ ತಂಡಕ್ಕೆ ಅಮೋಘ ಆರಂಭ ನೀಡಿದರು. ನಾಯಕಿ ಸನಾ ಫಾತಿಮಾ (49ಕ್ಕೆ2) ಮತ್ತು ನಷ್ರಾ ಸಂಧು (37ಕ್ಕೆ3) ಚುರುಕಾದ ದಾಳಿ ನಡೆಸಿದರು. ಇದರಿಂದಾಗಿ ಆಸ್ಟ್ರೇಲಿಯಾ ತಂಡ ಅಲ್ಪ ಮೊತ್ತಕ್ಕೆ ಕುಸಿಯುವ ಆತಂಕದಲ್ಲಿತ್ತು.

ಆದರೆ, ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ ನಾಲ್ಕನೇ ಕ್ರಮಾಂಕದ ಬ್ಯಾಟರ್ ಮೂನಿ (109; 114ಎ, 4X11) ಅವರು ದಿಟ್ಟತನದಿಂದ ಆಡಿದರು. 9ನೇ ವಿಕೆಟ್ ಜೊತೆಯಾಟದಲ್ಲಿ ಅವರಿಗೆ ಅಲನಾ ಕಿಂಗ್ (ಅಜೇಯ 51; 49ಎ, 4X3, 6X3) ಅವರು ಜೊತೆ ನೀಡಿದರು. ಇಬ್ಬರೂ ಸೇರಿ 106 ರನ್ ಸೇರಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 221 ರನ್ ಗಳಿಸಿತು.

ಪೂರ್ಣ ಏಕಾಗ್ರತೆಯೊಂದಿಗೆ ಬ್ಯಾಟಿಂಗ್ ಮಾಡಿದ ಮೂನಿ ಯಾವುದೇ ಹಂತದಲ್ಲಿಯೂ ವಿಚಲಿತರಾಗಲಿಲ್ಲ. ಕವರ್ ಡ್ರೈವ್, ನೇರ ಹೊಡೆತಗಳು ಮತ್ತು ಸ್ವೀಪ್‌ಗಳ ಮೂಲಕ ರನ್ ಸೂರೆ ಮಾಡಿದರು. ವಿಶ್ವಕಪ್ ಟೂರ್ನಿಯಲ್ಲಿ ತಮ್ಮ ಪ್ರಥಮ ಹಾಗೂ ಒಟ್ಟಾರೆ ಏಕದಿನ ಕ್ರಿಕೆಟ್‌ನಲ್ಲಿ ಐದನೇ ಶತಕ ದಾಖಲಿಸಿದರು.

ಗುರಿ ಬೆನ್ನಟ್ಟಿದ ಪಾಕ್ ತಂಡವು ಆರಂಭದಲ್ಲಿಯೇ ಎಡವಿತು. ಕಿಮ್ ಗಾರ್ಥ್ ಮತ್ತು ಮೇಗನ್ ಶುಟ್ ಅವರ ಬೌಲಿಂಗ್ ಮುಂದೆ ಕುಸಿಯಿತು. ಇದರಿಂದಾಗಿ 86 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡ ಪಾಕ್ ಸೋಲಿನ ಸುಳಿಗೆ ಸಿಲುಕಿತು. ಸಿದ್ರಾ ಅಮಿನ್ (35; 52ಎ, 4X5) ಅವರೊಬ್ಬರೇ ಹೆಚ್ಚು ಹೊತ್ತು ಕ್ರೀಸ್‌ನಲ್ಲಿದ್ದರು. ಉಳಿದ ಬ್ಯಾಟರ್‌ಗಳು ವಿಫಲರಾದರು.

ಎಂಟನೇ ಕ್ರಮಾಂಕದ ರಮೀನ್ ಶಮೀಮ್ ಮತ್ತು ಹತ್ತನೇ ಬ್ಯಾಟರ್ ನಷ್ರಾ ಸಂಧು ಒಂದಿಷ್ಟು ಹೋರಾಟ ನಡೆಸಿದರು. ತಂಡದ ಸೋಲಿನ ಅಂತರವನ್ನು ಕಡಿಮೆ ಮಾಡಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 9ಕ್ಕೆ221 (ಅಲಿಸಾ ಹೀಲಿ 20, ಬೆತ್ ಮೂನಿ 109, ಅಲನಾ ಕಿಂಗ್ ಔಟಾಗದೇ 51, ಫಾತೀಮಾ ಸನಾ 49ಕ್ಕೆ2, ರಮೀನ್ ಶಮೀಮ್ 29ಕ್ಕೆ2, ನಷ್ರಾ ಸಂಧು 37ಕ್ಕೆ3) ಪಾಕಿಸ್ತಾನ: 36.3 ಓವರ್‌ಗಳಲ್ಲಿ 114 (ಸಿದ್ರಾ ಅಮಿನ್ 35, ಕಿಮ್ ಗಾರ್ಥ್ 14ಕ್ಕೆ3, ಮೇಗನ್ ಶುಟ್ 25ಕ್ಕೆ2, ಅನಾಬೆಲ್ ಸದರ್ಲೆಂಡ್ 15ಕ್ಕೆ2) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 107 ರನ್‌ಗಳ ಜಯ.
ಪಂದ್ಯದ ಆಟಗಾರ್ತಿ: ಬೆತ್ ಮೂನಿ

ಕ್ವಾರ್ಟರ್‌ಗೆ ಭಾರತ

ಗುವಾಹಟಿ (ಪಿಟಿಐ): ಆತಿಥೇಯ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಸತತ ಮೂರನೇ ಗೆಲುವಿನೊಂದಿಗೆ ಎಂಟರ ಘಟ್ಟ ಪ್ರವೇಶಿಸಿತು.

ಮೂರನೇ ದಿನವಾದ ಬುಧವಾರ ನಡೆದ 'ಎಚ್' ಗುಂಪಿನ ಪಂದ್ಯದಲ್ಲಿ ಭಾರತವು 45–37, 45–34ರಿಂದ (2–0) ಯುಎಇ ತಂಡವನ್ನು ಮಣಿಸಿತು.

ಭಾರತವು ಜಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದ ರಾಷ್ಟ್ರದೊಂದಿಗೆ ಕ್ವಾರ್ಟರ್ ಫೈನಲ್‌ನಲ್ಲಿ ಸೆಣಸಲಿದೆ.

ಅಮೆರಿಕ 45–43, 45–43ರಿಂದ ಫ್ರಾನ್ಸ್ ತಂಡವನ್ನು; ಜಪಾನ್ 45–42, 45–34ರಿಂದ ಅಗ್ರ ಶ್ರೇಯಾಂಕದ ಥಾಯ್ಲೆಂಡ್ ತಂಡವನ್ನು ಸೋಲಿಸಿದವು.

ಮೈಸೂರು ರೇಸ್

ಯೂಕಿಕಾಜೆ ಗೆಲ್ಲುವ ನಿರೀಕ್ಷೆ

ಚೀಫ್ ಮಿನಿಸ್ಟರ್ಸ್ ಕಪ್ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಯೂಕಿಕಾಜೆ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸೀ ಆಫ್ ಅಡ್ವೆಂಚರ್ 2, ಅನುಷ್ಟುಭ 7, ಸೀಕ್ರೆಟ್ ಶ್ಯಾಡೊ 3
2ನೇ ರೇಸ್: ದಿ ವಿಸ್ಪರ್ ಕ್ವೈಟ್ಲಿ 3, ಮ್ಯಾಜಿಕ್ ಸರ್ಕಲ್ 2, ಒನ್ ಡೈಮಂಡ್ 1
3ನೇ ರೇಸ್: ಗಾಡೆಸ್ ಆಫ್ ವಾರ್ 6, ಸಿಲ್ವರ್ ಕ್ವೆಸ್ಟ್ 10, ಡ್ಯಾರಿಂಗ್ಟನ್ 2
4ನೇ ರೇಸ್: ಯೂಕಿಕಾಜೆ 7, ಪವರ್ ಆಫ್ ಗೋಲ್ಡ್ 3, ಕಾರ್ಟರ್ 9
5ನೇ ರೇಸ್: ತಲೈವಾ 3, ಓಷನ್ 1, ಶೆರೌಕ್ 10
6ನೇ ರೇಸ್: ವಾಯು 9, ದುಫಿ 6, ಲೇಡಿ ಇನ್ವಿಕ್ಟಸ್ 1

ಉತ್ತಮ ಬೆಟ್: ಗಾಡೆಸ್ ಆಫ್ ವಾರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಬ್ಯಾಸ್ಕೆಟ್‌ಬಾಲ್: ಸೆಮಿಫೈನಲ್‌ಗೆ ರಾಜ್ಯ ಬಾಲಕಿಯರು

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡವು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ 50ನೇ ಸಬ್ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿತು.

ರಾಜ್ಯ ತಂಡವು ಬುಧವಾರ ಎಂಟರ ಘಟ್ಟದ ಪಂದ್ಯದಲ್ಲಿ 57–52 ರಿಂದ ಛತ್ತೀಸಗಢವನ್ನು ಸೋಲಿಸಿತು.

ಗುರುವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ರಾಜ್ಯ ತಂಡವು ಮಹಾರಾಷ್ಟ್ರದ ಸವಾಲು ಎದುರಿಸಲಿದೆ.

ಬಾಲಕರ ತಂಡವು 92–42ರಿಂದ ಉತ್ತರ ಪ್ರದೇಶ ಎದುರು ಸೋತಿತು.

ನೂರನೇ ಪಂದ್ಯದಲ್ಲಿ ಭರತ್ ಮಿಂಚು

ಚೆನ್ನೈ (ಪಿಟಿಐ): ಆಲ್‌ರೌಂಡರ್ ಭರತ್ ಹೂಡಾ (20 ಅಂಕ) ಅವರ ಅಮೋಘ ಆಟದ ನೆರವಿನಿಂದ ತೆಲುಗು ಟೈಟನ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಬುಧವಾರ 46–29 ರಿಂದ ಹರಿಯಾಣ ಸ್ಟೀಲರ್ಸ್ ತಂಡವನ್ನು ಸುಲಭವಾಗಿ ಸೋಲಿಸಿತು. ಭರತ್ ಅವರ ಪಾಲಿಗೆ ನೂರನೇಯದ್ದಾಗಿದ್ದ ಈ ಪಂದ್ಯ ಸ್ಮರಣೀಯವಾಯಿತು.

ರೇಡಿಂಗ್‌ನಲ್ಲಿ 16 ಪಾಯಿಂಟ್ ಮತ್ತು ಟ್ಯಾಕ್ಲಿಂಗ್‌ನಲ್ಲಿ ನಾಲ್ಕು ಪಾಯಿಂಟ್ ಪಡೆದ ಭರತ್ ತಂಡ ಮೇಲುಗೈ ಪಡೆಯಲು ನೆರವಾದರು. ಅವರಿಗೆ ಸಮರ್ಥ ಬೆಂಬಲ ನೀಡಿದ ವಿಜಯ್ ಮಲಿಕ್ ಎಂಟು ಪಾಯಿಂಟ್ಸ್ ಕಾಣಿಕೆ ನೀಡಿದರು. ಹರಿಯಾಣ ಸ್ಟೀಲರ್ಸ್ ಪರ ಮಯಂಕ್ ಸೈನಿ ಅವರು ಗರಿಷ್ಠ ಐದು ಪಾಯಿಂಟ್ಸ್ ಗಳಿಸಿದರು.

ಇದು 13 ಪಂದ್ಯಗಳಲ್ಲಿ ಟೈಟನ್ಸ್‌ಗೆ ಎಂಟನೇ ಗೆಲುವು. ಸತತ ಐದನೇ ಗೆಲುವಿನೊಡನೆ 16 ಪಾಯಿಂಟ್ಸ್ ಗಳಿಸಿ ಮೂರನೇ ಸ್ಥಾನದಲ್ಲಿ ಮುಂದುವರಿಯಿತು. ಸ್ಟೀಲರ್ಸ್ ಏಳನೇ ಸೋಲು ಅನುಭವಿಸಿತು.

ಪುಣೇರಿ ಪಲ್ಟನ್ ತಂಡವು ದಿನದ ಇನ್ನೊಂದು ಪಂದ್ಯದಲ್ಲಿ 37–27ರಲ್ಲಿ ಹತ್ತು ಪಾಯಿಂಟ್‌ಗಳಿಂದ ಯು ಮುಂಬಾ ತಂಡವನ್ನು ಸೋಲಿಸಿತು. ಕೊನೆಯ ಮೂರು ನಿಮಿಷಗಳಲ್ಲಿ ಹತ್ತು ಪಾಯಿಂಟ್ ಗಳಿಸಿದ ಪಲ್ಟನ್‌ಗೆ ಇದು ಹತ್ತನೇ ಗೆಲುವಾಗಿದ್ದು, 20 ಪಾಯಿಂಟ್‌ಗಳೊಡನೆ ಎರಡನೇ ಸ್ಥಾನದಲ್ಲಿ ಮುಂದುವರಿಯಿತು. ಮುಂಬಾ ಈ ಸೋಲಿನ ಹೊರತಾಗಿಯೂ (6 ಗೆಲುವು, 6 ಸೋಲು) 12 ಪಾಯಿಂಟ್‌ಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ.

ಪುಣೇರಿ ತಂಡದ ಆದಿತ್ಯ ಶಿಂದೆ 14 ಪಾಯಿಂಟ್ ಗಳಿಸಿದರೆ, ಮುಂಬಾ ರೇಡರ್ ಅಜಿತ್ ಚೌಹಾನ್ ಸೂಪರ್ ಟೆನ್ (10) ಗಳಿಸಿದರು.

ಚೆಸ್: ನಿವಾನ್, ಆರುಷ್‌ಗೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ನಿವಾನ್ ರಾಘವೇಂದ್ರ ಹಾಗೂ ದಕ್ಷಿಣ ಕನ್ನಡದ ಆರುಷ್ ಭಟ್ ಇಲ್ಲಿ ನಡೆದಿರುವ 'ರೋಟರಿ ಬೃಂದಾವನ 16 ವರ್ಷದೊಳಗಿನವರ ಮುಕ್ತ ರೇಟಿಂಗ್ ಚೆಸ್ ಟೂರ್ನಿ'ಯಲ್ಲಿ ಆರನೇ ಸುತ್ತಿನ ಅಂತ್ಯಕ್ಕೆ ಅಗ್ರಸ್ಥಾನದಲ್ಲಿ ಮುನ್ನಡೆದಿದ್ದಾರೆ.

ಬುಧವಾರ ಐದನೇ ಸುತ್ತಿನ ಹಣಾಹಣಿಯಲ್ಲಿ ದಕ್ಷಿಣ ಕನ್ನಡದ ಯು.ಡಿ. ಆಕಾಂಕ್ಷ್ ಎದುರಿನ ಪಂದ್ಯವನ್ನು ಡ್ರಾ ಮಾಡಿಕೊಂಡ ನಿವಾನ್, ಆರನೇ ಸುತ್ತಿನಲ್ಲಿ ಆರ್. ಋತ್ವಿಕ್‌ರನ್ನು ಮಣಿಸಿ ಅಂಕಗಳ ಮುನ್ನಡೆ ಹೆಚ್ಚಿಸಿಕೊಂಡರು. ಆರುಷ್ ಐದನೇ ಸುತ್ತಿನಲ್ಲಿ ಸಾತ್ವಿಕ್ ವಿಶ್ವನಾಥ್ ಅವರನ್ನು ಮಣಿಸಿದರೆ, ಆರನೇ ಸುತ್ತಿನಲ್ಲಿ ಯು.ಡಿ. ಆಕಾಂಕ್ಷ್ ಎದುರು ಡ್ರಾಗೆ ಸಮಾಧಾನಪಟ್ಟರು.

ಯು.ಡಿ. ಆಕಾಂಕ್ಷ್, ಎಸ್. ವಿಶ್ವಜಿತ್, ಸಾತ್ವಿಕ್ ವಿಶ್ವನಾಥ್, ಪಿ. ಅಭಿನವ ಹಾಗೂ ರೋಹನ್ ಗೌಡ ತಲಾ 5 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿ ಮುನ್ನಡೆದರು.